# ಅಪರಂಜಿ

ತಿಳಿನಗೆಯ ಕಾರಂಜಿ



ಬೆಳ್ಳಿ ಹಬ್ಬದ ವರ್ಷ

ಮಾರ್ಚ್ - 2009






"ಈ ರಿಸೆಷನ್ ಯಾವಾಗ ಮುಗಿಯುತ್ತೆ ಅಂತ ಗೊತ್ತಾದ್ರೆ ಕಣ್ತುಂಬ ನಿದ್ದೆ ಮಾಡಬಹುದು."

ಬಿಡಿ ಪ್ರತಿ: ರೂ. 10.00

# ಅಪರಂಜಿ

ತಿಳಿನಗೆಯ ಕಾರಂಜಿ





ಸಂಪುಟ 26

ಸಂಚಿಕೆ - 6

ಮಾರ್ಚ್ - 2009

**ಸಂಪಾದಕ ಮಂಡಳಿ**

ಶ್ರೀ ಎಂ. ಶಿವಕುಮಾರ್
ಸಂಪಾದಕರು

ಶ್ರೀ ಬೇಲೂರು ರಾಮಮೂರ್ತಿ
ಉಪ ಸಂಪಾದಕರು

ಶ್ರೀ ಬಾಗೂರು ಚಂದ್ರು

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಟ್ರಸ್ಟಿಗಳು**

ಶ್ರೀ ಎಂ. ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಜಿ. ನಾಗೇಶ್

ಶ್ರೀ ವಿ.ಆರ್. ನಾಥ್

ಶ್ರೀ ಎ.ಆರ್. ರಾಜಗೋಪಾಲ್

ಶ್ರೀ ಕೆ. ರವೀಂದ್ರ

**ವಿಶೇಷ ಆಹ್ವಾನಿತರು**

ಶ್ರೀ ಆರ್. ಶೇಷಗಿರಿರಾವ್

ಶ್ರೀ ಆರ್.ಎಸ್. ಪ್ರಶಾಂತ್

**ಗೌರವ ಸಲಹೆಗಾರರು**

ಶ್ರೀ ಅ.ರಾ.ಸೇ.

**ಚಂದಾ ವಿವರ:**

ಬಿಡಿ ಪ್ರತಿ: ರೂ. 10/-

ವಾರ್ಷಿಕ ಚಂದಾ: ರೂ. 100/-

ಹತ್ತು ವರ್ಷದ ಚಂದಾ: ರೂ. 750/-

ಕೆಲಸದ ವೇಳೆ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಮುದ್ರಣ: ರವಿ ಗ್ರಾಫಿಕ್ಸ್

ಅಕ್ಷರ ಜೋಡಣೆ:
ಒಮೇಗಾ ಲೇಸರ್ ಟೆಕ್

## ಈ ಸಂಚಿಕೆಯಲ್ಲಿ.....


| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ಶರಲೇಖನ ಸಾಹಸ | ವತ್ಸನ | 3 |
| ಮಾತ್ರೆ ತಂದ ..... | ಬೇಲೂರು ರಾಮಮೂರ್ತಿ | 11 |
| ಹುರುಳಿ ಕಟ್ಟು | ಹೆಚ್. ಗೋಪಾಲಕೃಷ್ಣ | 14 |
| ಕಾಫಿಹೌಸ್ | | 17 |
| ಮಕ್ಕಳಿದ್ದಾರೆ.... | ಮುಳಿಯ ಸರಸ್ವತಿ | 19 |
| ಪುಸ್ತಕ ಪರಿಚಯ | ಶಿವು | 27 |
| ತುಂತುರು | ದಂನಂ | 30 |
| ವಿದ್ಯಮಾನಗಳು | ಕು.ಕ. | 31 |
| ನಾಡಿ ಮಿಡಿತ | ಕೃಷ್ಣ ಸುಬ್ಬರಾವ್ | 33 |
| ಮೈಸೂರು..... | ಚಿತ್ರಾ ರಾಮಚಂದ್ರನ್ | 35 |


ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: aparanji@hotmail.com website: aparanjimag.com

ಸಂಪರ್ಕ ವಿಳಾಸ: ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 808-26688488. email: brmurthy@dataone.in




ಂ ಪ್ರಕಾಶ್

'ಪ್ರೇಮಕ್ಕೆ ಪೊಲೀಸ್ ರಕ್ಷಣೆ ಬೇಕಾಗುವ ಕಾಲ ಬಂತೇ' ಎಂದು ಅಪರಂಜಿ ನಕ್ಕಳಂತೆ

★★★

ಕುಲಪತಿ ಕಚೇರಿ ಪೀಠೋಪಕರಣ ಧ್ವಂಸ – ಮೈಸೂರು ಸುದ್ದಿ

• ಭಯೋತ್ಪಾದಕರು ಎಂದು ಈಗ ಅರ್ಥವಾಯಿತು !!

★★★

ಶ್ರೀ ರಾಮ ಸೇನೆಯವರನ್ನೆಲ್ಲ ಕಾಡಿಗೆ ಕಳುಹಿಸಬೇಕು ಎಂಬುದು ಶುದ್ಧ ಕುಹಕ !!

★★★

ಕೆಟ್ಟ ಚಿತ್ರಗಳಿಗೆ ಕಲ್ಲು ತೂರಿ – ಹೇಳಿಕೆ

• ಅಷ್ಟೊಂದು ಕಲ್ಲುಗಳನ್ನ ಎಲ್ಲಿಂದ ತರೋದು ?!

★★★

ಅಮೆರಿಕದಲ್ಲಿ ಗಾಂಧೀಜಿಗೆ ಸಂದ ಅಪೂರ್ವ ಗೌರವ – ಪತ್ರಿಕೆ

• ನಮ್ಮ ದೇಶದಲ್ಲಿ ??

★★★

ಎರಡು ಉಪಗ್ರಹಗಳ ಡಿಕ್ಕಿ; ವಿಜ್ಞಾನಿಗಳ ಅಚ್ಚರಿ – ಪತ್ರಿಕೆ

• ಕಲಿ – ಗಾಲ ಎಂದರೆ ಇದೇ !!

★★★

ಸಚಿವರ ಪುತ್ರನ ಸೋಗು; ವಂಚಕನ ಬಂಧನ – ಸುದ್ದಿ

• ಸಚಿವರ ಹತ್ತಿರಾನೇ ಹೋಗಬಹುದಾಗಿತ್ತು !!

★★★


ಕ್ರಿಕೆಟ್ 'ವಿಶ್ವ–ನಾಥ'ನಿಗೆ ಅಪರಂಜಿ ಬಳಗದ ಅಭಿನಂದನೆಗಳು

★★★

*ಶರಲೇಖನ ಸಾಹಸ*

# ಕೆರೆಯ ನೀರನು ಕೆರೆಗೆ ಚೆಲ್ಲಿ

**– ವತ್ಸನ**



ನಮ್ಮ ವಾಕಿಂಗ್ ಮುಗಿಸಿ ಹಿಂದಕ್ಕೆ ಬರುತ್ತಾ ದಾರಿಯಲ್ಲಿ ಬನಶಂಕರಿ ದೇವಸ್ಥಾನಕ್ಕೆ ಹೋಗಿ ಮಂಗಳಾರತಿ ಮಾಡಿಸಿಕೊಂಡು ಶರಲೇಖ ಮತ್ತು ನಾನು ಆಗತಾನೇ ನಮ್ಮ ಫ್ಲಾಟಿಗೆ ಹಿಂತಿರುಗಿದ್ದೆವು. ನಾವು ಬರುವಷ್ಟರಲ್ಲಿ ಇನ್ಸ್‌ಪೆಕ್ಟರ್ ಉಳ್ಳಾಗಡ್ಡಿ ಒಳಗೆ ಬಂದು ನಮ್ಮ ದಾರಿ ಕಾಯುತ್ತಿದ್ದರು. ನಮ್ಮನ್ನು ಕಂಡಕೂಡಲೇ 'ವಿಧಾನಸೌಧದಾಗ ಒಂದು ದೊಡ್ಡ ಕ್ರೈಸಿಸ್ ಆಗೇತ್ರಿ. ಮಂತ್ರಿಗಳು ನನ್ನ ಕರೆಸಿ ತಮ್ಮನ್ನ ನಿಮ್ಮ ಕೂಡ ಭೇಟಿಮಾಡಿಸ್ರಿ ಅಂತ ದುಂಬಾಲು ಬಿದ್ದಾರ. ಭಾಳಾ ತಾಕೀತು ಮಾಡಿದರ್ರಿ ಅವರು ನನಗ. ದೇಶದ ಮರ್ಯಾದಿ ಮಾತು ಹೆಂಗಾರಾ ಮಾಡಿ ಸಾಹೇಬರ್ನ ಒಪ್ಪಿಸಪ್ಪಾ ಅಂತ ರಿಕ್ವೆಸ್ಟ್ ಮಾಡಾರ್ರಿ. ಕರಸ್ಲೇನ್ರಿ ಅವರ್ನ?' ಅಂತ ಕೇಳಿದರು. ಶರಲೇಖ, 'ಇದೇನ್ರಿ ಹೀಗೆ ಕೇಳ್ತೀರಾ. ನಿಮ್ಮ ಮಾತಿಗೆ ಯಾವತ್ತಾದ್ರೂ ಇಲ್ಲ ಅಂದಿದೀನ್ಯೇ ನಾನು' ಅಂತ ಅವರಿಗೆ ಆಶ್ವಾಸನೆ ಕೊಟ್ಟನಂತರ ಉಳ್ಳಾಗಡ್ಡಿಯವರು ತಮ್ಮ ಮೊಬೈಲಿನಲ್ಲಿ ಏನೋ ಮಾತನಾಡಿ, 'ಈಗಲೇ ಹೊರಟಾರ. ಅರ್ಧತಾಸಿನಾಗ ಇಲ್ಲಿರ್ತಾರ' ಎಂದರು. ನಾನು ಒಳಕ್ಕೆ ಹೋಗಿ, ಬರುವ ಅತಿಥಿಗಳಿಗೆ ಕಾಫಿ ಸಿದ್ಧಮಾಡಲು ಸರೋಜಮ್ಮನವರಿಗೆ ತಿಳಿಸಿ ಬಂದೆ.

'ಏನದು ಅಂಥಾ ಕ್ರೈಸಿಸ್ಸೂ?' ಅಂತ ನಾನು ಉಳ್ಳಾಗಡ್ಡಿಯವರನ್ನ ಕೇಳಿದೆ. 'ನನಗೇನೂ ತಿಳೀದ್ರಿ. ಏನೋ ಭಾಳ ಸೀಕ್ರೆಟ್ ಸಂಗ್ತೀ ಇರಬೇಕಂತ ಕಾಣ್ತದ. ಇನ್ನೇನ್ ಅವ್ರೇ ಬರ್ತಾರಲ್ಲಾ, ಎಲ್ಲಾ ತಿಳೀತದ ' ಅನ್ನುವಷ್ಟರಲ್ಲಿ ಬಾಗಿಲ ಕರೆಗಂಟೆ ಸದ್ದಾಯಿತು. ನಾನೇ ಹೋಗಿ ಬಾಗಿಲು ತೆರೆದೆ. ಮಾನ್ಯ ಸಚಿವರು ಒಳಕ್ಕೆ ಆಗಮಿಸಿದರು. ಸರ್ಕಾರೀ ಅಧಿಕಾರಿಯಂತೆ ಕಾಣುತ್ತಿದ್ದ ಒಬ್ಬ ಸಫಾರಿ ಮಧ್ಯ ವಯಸ್ಕ ಅವರ ಹಿಂದೆ ಬಂದ. ಪರಸ್ಪರ ಕುಶಲ ಮಾತುಕತೆಗಳ ನಂತರ ಅತಿಥಿಗಳಿಬ್ಬರೂ ಕುಳಿತರು. ಮಂತ್ರಿಗಳು ಮೊದಲು ಮಾತು ಪ್ರಾರಂಭಿಸಿದರು.

'ಶರಲೇಖ ಅವರೇ, ಮೊಟ್ಟಮೊದಲಿಗೆ ನೀವು ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಸಹಾಯ ಮಾಡಲು ಒಪ್ಪಿರೋದಕ್ಕೆ ನಾನು ಆಭಾರಿ. ವಿಷಯ ತೀರ ಮಹತ್ವದ್ದು ಹಾಗೂ ತುಂಬಾ ಗೋಪ್ಯವಾಗಿ ಇಡಬೇಕಾಗಿರುವಂತಹದು. ನಾನು ಈಗ ಹೇಳ್ಳೋ ವಿಷಯ ಖಂಡಿತ ಈ ನಾಲ್ಕು ಗೋಡೆ ಆಚೆ ಹೋಗಬಾರ್ದು. ಇಲ್ಲಿ ನನ್ನ ಜೊತೆಗೆ ಬಂದಿರೋರು ಇವರೇ ನಮ್ಮ ಮುಖ್ಯ ಕಾರ್ಯದರ್ಶಿ ಜ್ವಾಲನಯ್ಯ. ಅವರೇ ನಿಮ್ಮ ಸಹಾಯ ಪಡೆಯಲು ನನಗೆ ಸಲಹೆ ನೀಡಿದ್ದು. ಈಗ ನೇರವಾಗಿ ವಿಷಯಕ್ಕೆ ಬರ್ತೇನೆ. ಮೊನ್ನೆ ತಾನೆ ನಮ್ಮ ಸಚಿವಾಲಯದಲ್ಲಿ ನಾವು ಇಟಾಲಿಯನ್ ಕಂಪನಿಯೊಂದರ ಜೊತೆ ಒಂದು ಎಂ.ಓ.ಯು. ಗೆ ಸಹಿ ಹಾಕಿ ಪರಸ್ಪರ ದಾಖಲೆ ವಿನಿಮಯ ಮಾಡಿಕೊಂಡೆವು. ಮೂರೂವರೆ ಸಾವಿರ ಕೋಟಿ ರೂಪಾಯಿಗಳ

ವ್ಯವಹಾರ ಅದು. ಆ ಎಂ.ಒ.ಯು ನ ಒರಿಜಿನಲ್ ಪ್ರತಿಯನ್ನ ಜ್ವಾಲಸಯ್ಯ ತಮ್ಮ ಆಫೀಸಿನಲ್ಲೇ ಭದ್ರವಾಗಿ ಇಟ್ಟಿದ್ದರು. ಇವತ್ತು ಬೆಳಗ್ಗೆಯಿಂದ ಆ ಕಡತ ಕಾಣೆಯಾಗಿದೆ. ಮುಂದಿನ ವಾರ ಅದನ್ನ ಕೇಂದ್ರ ಕಾರ್ಯದರ್ಶಿಯವರಿಗೆ ತೋರಿಸಬೇಕು. ಒರಿಜಿನಲ್ಲೇ ಇಲ್ಲದಿದ್ರೆ ನಮ್ಮ ಸರ್ಕಾರದ ದಕ್ಷತೆ ಮೇಲೆ ಕೇಂದ್ರದೋರಿಗೆ ಅನುಮಾನ ಬರೋದು ಖಂಡಿತ. ಪತ್ರಿಕೆಗಳಿಗೆ ಅಥವಾ ವಿರೋಧ ಪಕ್ಷದವರಿಗೆ ಇದು ಕಿವಿಗೆ ಬಿದ್ದರಂತೂ ನನ್ನ ಮತ್ತು ಜ್ವಾಲಸಯ್ಯನ ಜನ್ಮ ಜಾಲಾಡಿಹೋಗುತ್ತೆ. ಹಾಗಾಗಿ ಇದನ್ನ ಪೋಲೀಸಿನವರಿಗೆ ಒಪ್ಪಿಸೋ ಹಾಗೂ ಇಲ್ಲ. ನೀವೇ ಸ್ವಲ್ಪ ಮುತುವರ್ಜಿ ವಹಿಸಿ ಕಡತ ಹುಡುಕಿಕೊಡಬೇಕು. ಸಂಭಾವನೆ ಎಷ್ಟಾದರೂ ಚಿಂತೆಯಿಲ್ಲ' ಎಂದು ಸಚಿವರು ತಮ್ಮ ಅಹವಾಲನ್ನು ಮಂಡಿಸಿದರು.

'ಯಾವ ವಿಷಯದಲ್ಲಿ ಈ ಎಂ.ಒ.ಯು. ಮಾಡಿಕೊಂಡಿರೋದು?' ಶರಲೇಖ ಸಚಿವರನ್ನ ಕೇಳಿದ.

'ಕಳೆದು ಹೋಗಿರೋ ಕಡತಕ್ಕೆ ನೀಲಿ ಬೈಂಡ್ ಹಾಕಿದೆ. ಸುಮಾರು ಮೂರು ಇಂಚು ದಪ್ಪ......' ಅಂತ ಮಂತ್ರಿಗಳು ಶುರುಮಾಡಿದ್ದ ಮಾತನ್ನು ಶರಲೇಖ ಮಧ್ಯದಲ್ಲೇ ತುಂಡರಿಸಿ, 'ಅದೆಲ್ಲಾ ಮಾಹಿತಿ ಖಂಡಿತ ಆಮೇಲೆ ಬೇಕಾಗುತ್ತೆ. ಈಗ ನಾನು ಕೇಳ್ತಿರೋದು ಎಂ.ಒ.ಯು ಯಾವ ವಿಷಯದಲ್ಲಿ ಅಂತ' ಅಂತ ಮತ್ತೊಮ್ಮೆ ಕೆದಕಿದ.

'ಅದು ಸರ್ಕಾರದ ಗೌಪ್ಯ ಸಂಗತಿ. ನಿಮಗೆ ಅದರ ಅಗತ್ಯವಾದರೂ ಏನು ಅಂತ ನನಗೆ ಅರ್ಥ ಆಗ್ತಾ ಇಲ್ಲ' ಅಂದರು ಮಾನ್ಯ ಸಚಿವರು.

ಮೊಟ್ಟಮೊದಲಿಗೆ ಶರಲೇಖನಿಗೆ ಕೋಪ ಬಂದಿರುವುದನ್ನು ನಾನು ಗಮನಿಸಿದೆ.

ಶರಲೇಖ ಎದ್ದು ನಿಂತು, 'ಮಹಾಶಯರೇ, ನೀವಿಬ್ಬರೂ ನಮ್ಮ ಘನ ಸರ್ಕಾರದ ಚುಕ್ಕಾಣಿ ಹಿಡಿದಿರುವವರು. ಸಾವಿರಾರು ಕೆಲಸಗಳು ಇರುತ್ತವೆ ನಿಮಗಿಬ್ಬರಿಗೂ. ನನ್ನ ಚಿಕ್ಕ ಕಸುಬಿನಲ್ಲಿ ನನಗೂ ನನ್ನದೇ ಆದ ಹಲವಾರು ಕೆಲಸಗಳಿವೆ. ನಮ್ಮ ವ್ಯರ್ಥ ಮಾತುಕತೆಯಿಂದ ಯಾವ ಪ್ರಯೋಜನವೂ ಕಾಣಿಸದು. ತಾವು ಹೊರಡಬಹುದು' ಎಂದ. ಅವನ ಧ್ವನಿಯಲ್ಲಿ ದೃಢ ನಿರ್ಧಾರ ಎದ್ದು ಕಾಣುತ್ತಿತ್ತು.

ಮಂತ್ರಿಗಳು ಅವಾಕ್ಕಾದರು. ಒಂದೆರಡು ನಿಮಿಷ ಯಾರೂ ಮಾತನಾಡಲಿಲ್ಲ. ನಿಧಾನವಾಗಿ ಮಂತ್ರಿವರ್ಯರ ಮುಖದಲ್ಲಿ ಮೆಲುನಗೆ ಮೂಡಿತು.

'ಅರ್ಥ ಆಯಿತು ಶರಲೇಖ ಅವರೇ. ಪೂರ್ಣ ಮಾಹಿತಿ ದೊರಕದೇ ಯಾವ ಕಸುಬುದಾರ ತಾನೇ ತನ್ನ ಕೆಲಸವನ್ನ ನಿರ್ವಹಿಸಬಲ್ಲ. ಆಯಿತು. ಎಂ.ಒ.ಯು ವಿಷಯ ಎಲ್ಲಾ ಹೇಳಿಬಿಡುತ್ತೇನೆ. ಅದು ಅತ್ಯಂತ ಗೌಪ್ಯ ಅನ್ನೋ ಅಂಶ ಮಾತ್ರ ನೆನಪಿನಲ್ಲಿರಲಿ.

'ನಮ್ಮ ನಾಡಿನಲ್ಲಿ ತೀವ್ರ ವಿದ್ಯುತ್ ಕೊರತೆ ಇರುವುದು ತಮಗೆ ತಿಳಿದದ್ದೇ. ದಿನಬೆಳಗಾದರೆ ಪವರ್ ಷಟ್‌ಡೌನ್. ಇದನ್ನ ಹೇಗೆ ನಿಭಾಯಿಸೋದಪ್ಪಾ ಅತ ಯೋಚಿಸ್ತಾ ಇದ್ದಾಗ ಇಟಾಲಿಯನ್ ಕಂಪನಿಯೊಂದು ನಮ್ಮ ವಿದ್ಯುತ್ ಕೊರತೆಗೆ ಒಂದು ಅತಿ ಅದ್ಭುತವಾದ ಪರಿಹಾರವನ್ನು ಸೂಚಿಸಿತು. ಅವರು ಸೂಚಿಸಿದ ಪರಿಹಾರ ಎಷ್ಟು

ಚೆನ್ನಾಗಿತ್ತೆಂದರೆ ನಮ್ಮ ಮುಖ್ಯಮಂತ್ರಿಗಳು ಆ ಕಂಪನಿಯ ಸಲಹೆಯನ್ನ ತಕ್ಷಣ ಒಪ್ಪಿ ನನ್ನಿಂದ ಎಂ.ಓ.ಯು ಗೆ ಸಹಿ ಹಾಕಿಸಿಬಿಟ್ಟರು. ಆ ಕಂಪನಿ ಸೂಚಿಸಿದ ಪರಿಹಾರವನ್ನ ಪ್ರಾಜೆಕ್ಟ್ ಮುಗಿಯುವವರೆಗೂ ಯಾರಿಗೂ ತಿಳಿಸಬಾರದು ಅಂತ ಒಂದು ಷರತ್ತು ಆ ಎಂ.ಓ.ಯು.ವಿನಲ್ಲೇ ಅಡಕವಾಗಿದೆ. ಆದರೆ ಈಗ ವಿಧಿಯಿಲ್ಲದೆ ನಿಮಗೆ ತಿಳಿಸುತ್ತಿದ್ದೇನೆ. ಕೇಳಿಸಿಕೊಳ್ಳಿ.

'ಒಂದು ಬೃಹತ್ ಜಲ ವಿದ್ಯುತ್ ಯೋಜನೆಯನ್ನ ಬೆಂಗಳೂರಿನಲ್ಲಿ ಸ್ಥಾಪಿಸಿ ಆದರಿಂದ ನಿರಂತರವಾಗಿ ವಿದ್ಯುತ್ ಉತ್ಪಾದಿಸುವುದು ನಾವು ಸಹಿ ಹಾಕಿರುವ ಪ್ರಾಜೆಕ್ಟಿನ ಗುರಿ. ಬೆಂಗಳೂರಿನಲ್ಲಿ ಜಲ ವಿದ್ಯುತ್ ಯೋಜನೆ ಹೇಗಪ್ಪಾ ಅಂತ ನೀವು ಆಶ್ಚರ್ಯ ಪಡಬಹುದು. ಅಲ್ಲೇ ನೋಡಿ ಇಟಾಲಿಯನ್ ಚಾಣಾಕ್ಷತನ ಅಡಗಿರೋದು. ಅವರ ಸಲಹೆ ಪ್ರಕಾರ ಬೆಂಗಳೂರಿನಲ್ಲಿ ಇರುವ ಅರಮನೆ ಮೈದಾನದಲ್ಲಿ ಒಂದು ಸಾವಿರ ಅಡಿ ಎತ್ತರದ ದೈತ್ಯ ಟವರೊಂದನ್ನು ಕಟ್ಟಿ ಅದರ ಮೇಲೆ ಒಂದು ಅತಿ ದೊಡ್ಡ ವಾಟರ್ ಟ್ಯಾಂಕ್ ಕಟ್ಟಿಬಿಡುವುದು. ಆಮೇಲೆ ಸದಾಶಿವನಗರದ ಅಂಚಿನಲ್ಲಿರೋ ಸ್ಯಾಂಕೀ ಕೆರೆಯಿಂದ ಒಂದು ದೊಡ್ಡ ಪಂಪ್ ಮೂಲಕ ಅದರಲ್ಲಿರೋ ನೀರನ್ನೆಲ್ಲಾ ಆ ಟವರ್ ಟ್ಯಾಂಕಿಗೆ ವರ್ಗಾಯಿಸೋದು. ಟವರಿನ ಕೆಳಗೆ ಒಂದು ವಿದ್ಯುತ್ ಜನರೇಟರ್. ಟವರಿನ ಮೇಲಿನಿಂದ ರಭಸದಿಂದ ಹರಿದು ಬರುವ ಕೃತಕ ಜಲಪಾತದಿಂದ ಬರುವ ನೀರನ್ನೆಲ್ಲಾ ಉಪಯೋಗಿಸಿ ಜನರೇಟರಿನಿಂದ ವಿದ್ಯುತ್ ತಯಾರಿಸಿ ಹರಿದು ಬಂದ ನೀರನ್ನ ಪುನಃ ಸ್ಯಾಂಕೀ ಕೆರೆಗೇ ಬಿಟ್ಟುಬಿಡುವುದು. ನೀರು ಸದಾಕಾಲ ಮೇಲೆ ಹೋಗಿ ಕೆಳಕ್ಕೆ ಬರುತ್ತಿರುವುದರಿಂದ ಮಳೆಗಾಲದಲ್ಲಿ ಮಳೆ ಬರಲಿ ಬರದಿರಲಿ, ಕರ್ನಾಟಕದಲ್ಲಿ ವಿದ್ಯುತ್ ಮಾತ್ರಾ ಅಕ್ಷಯ ಪಾತ್ರೆಯಲ್ಲಿ ಅನ್ನ ಸಿಗುವಂತೆ ಸದಾಕಾಲ ಗ್ರಾಹಕರಿಗೆ ಸಿಗುತ್ತಿರುತ್ತದೆ. ಪಂಪ್ ನಡೆಸುಕ್ಕೆ ಪವರ್ ಬೇಡವೇ ಅಂತ ನೀವು ಕೇಳಬಹುದು. ಇಟಾಲಿಯನ್ ತಜ್ಞರ ಲೆಕ್ಕಾಚಾರದ ಪ್ರಕಾರ ತಯಾರಾಗುವ ವಿದ್ಯುತ್ತಿನ ಒಂದು ಸ್ವಲ್ಪ ಅಂಶ ಮಾತ್ರ ಸಾಕಂತೆ ಪಂಪ್ ನಡೆಸಲು. ಇಂತಹ ಸುವರ್ಣಾವಕಾಶವನ್ನು ಕಳೆದುಕೊಳ್ಳ ಬೇಡಿ. 1902 ರಲ್ಲೇ ಮಾದರಿ ಮೈಸೂರಿನಲ್ಲಿ ಮೊಟ್ಟಮೊದಲಿಗೆ ವಿದ್ಯುತ್ ತಯಾರಿಕೆ ಶುರುವಾಗಿದ್ದು. ಈಗ ನಿಮ್ಮ ಆಡಳಿತದಲ್ಲಿ ಕರ್ನಾಟಕಕ್ಕೆ ನಿರಂತರ ವಿದ್ಯುತ್ ಸಿಗುವಂತೆ ಮಾಡಿ, ನಿಮ್ಮ ಹೆಸರು ಚಿರಸ್ಥಾಯಿಯಾಗಿ ನಿಲ್ಲುತ್ತದೆ ಅಂತ ಇಟಾಲಿಯನ್ ತಜ್ಞ ನಮ್ಮ ಮುಖ್ಯ ಮಂತ್ರಿಗಳಿಗೆ ತಾಕೀತು ಮಾಡಿದ.

'ಅಂತಹ ಮುಖ್ಯ ದಾಖಲೆ ಈಗ ಕಳೆದು ಹೋಗಿದೆ. ಜ್ವಾಲನಯ್ಯನವರಂತೂ ನಿನ್ನೆಯಿಂದ ನಿದ್ದೆ ಸಹಾ ಮಾಡಿಲ್ಲ. ಈಗ ನೀವೇ ನಮ್ಮ ಆಶಾಕಿರಣ' ಅಂತ ಸಚಿವರು ಬಹು ಕಳಕಳಿಯಿದ ಶರಲೇಖನನ್ನ ಕೇಳಿಕೊಂಡರು.

'ಈ ಪ್ರಾಜೆಕ್ಟನ್ನ ನಮ್ಮ ನಾಡಿನ ತಜ್ಞರಿಗೆ ತೋರಿಸಿದ್ದೀರಾ?' ಶರಲೇಖನ ಸಹಜ ಪ್ರಶ್ನೆ.

'ಖಂಡಿತಾ ಇಲ್ಲ, ಇಲ್ಲಿನವರಿಗೆ ತೋರಿಸಿದರೆ ಇಟಾಲಿಯನ್ ಕಾಪಿರೈಟ್ ಉಲ್ಲಂಘನೆ ಆಗುತ್ತೆ. ನಮ್ಮ ಪ್ರಾಜೆಕ್ಟ್ ಹಣ ಪೂರ್ಣ ಸಂದಾಯ ಆಗುವವರೆಗೂ ಇದನ್ನ ಯಾರಿಗೂ ತೋರಿಸಬಾರದು ಅಂತ ಎಂ.ಓ.ಯು.ವಿನಲ್ಲಿ ಇದೆ.' ಎಂದು ಜ್ವಾಲನಯ್ಯ ಶರಲೇಖನ

ಪ್ರಶ್ನೆಗೆ ಉತ್ತರಿಸಿ, ಮುಂದುವರೆದು, 'ಸಾರ್, ಮಂತ್ರಿಗಳು ಬಹಳ ವಿಶಾಲ ಹೃದಯಿಗಳು. ನಾನು ಮಾಡಿರುವ ತಪ್ಪಿಗೆ ಇನ್ಯಾರಾದರೂ ಆಗಿದ್ದರೆ ನೇರವಾಗಿ ಸಿ.ಬಿ.ಐ.ಗೆ ಹೇಳಿ ನನ್ನನ್ನು ದಸ್ತಗಿರಿ ಮಾಡಿಸುತ್ತಿದ್ದರು. ಇವರಾಗಿರೋ ಹೊತ್ತಿಗೆ ಹೇಗೋ ಮಾಡಿ ಸಮಸ್ಯೆಗೆ ಪರಿಹಾರ ಹುಡುಕುಕ್ಕೆ ನನ್ನ ಸಹಾಯಕ್ಕೆ ಬಂದಿದಾರೆ. ಏನಾದರೂ ಮಾಡಿ ಫೈಲ್‌ನ ಹುಡುಕಿಕೊಡಿ' ಅಂತ ಹೇಳುತ್ತಿದ್ದಾಗ ಅವರ ಕಂಠ ಗದ್ಗದಿತವಾಯಿತು.

ಶರಲೇಖ, 'ಏನೂ ಯೋಚನೆ ಮಾಡಬೇಡಿ. ನನ್ನ ಕೈಲಾದದ್ದು ಮಾಡುತ್ತೇನೆ. ಈಗ ಮೊದಲಿನ ಕೆಲಸ ಜ್ವಾಲನಯ್ಯನವರ ಆಫೀಸಿಗೆ ಹೋಗುವುದು. ಮಂತ್ರಿಗಳೇ ನಿಮ್ಮ ಆತಂಕಾನೆಲ್ಲಾ ನನ್ನ ಹೆಗಲಿನ ಮೇಲೆ ಹಾಕಿ ನಿಶ್ಚಿಂತರಾಗಿ ನಿಮ್ಮ ಮುಂದಿನ ಕಾರ್ಯ ನೋಡಿ. ನಾವೆಲ್ಲಾ ನಾಳೆ ಬೆಳಗ್ಗೆಯೇ ವಿಧಾನಸೌಧಕ್ಕೆ ಹೋಗಿ ನಮ್ಮ ಪತ್ತೇದಾರಿ ಕೆಲಸ ಪ್ರಾರಂಭಿಸುತ್ತೇವೆ,' ಎಂದು ಆಶ್ವಾಸನೆ ನೀಡಿದ ನಂತರ ಎಲ್ಲರೂ ನಿರ್ಗಮಿಸಿದರು.

ಮಾರನೆಯ ದಿನ ಬೆಳಗ್ಗೆ ಹತ್ತು ಗಂಟೆಗೆ ಉಳ್ಳಾಗಡ್ಡಿಯವರು ನಮ್ಮನ್ನು ವಿಧಾನಸೌಧಕ್ಕೆ ಕರೆದೊಯ್ದರು. ಜ್ವಾಲನಯ್ಯನವರ ಆಫೀಸ್ ಮುಖ್ಯಕಾರ್ಯದರ್ಶಿಗಳ ಅಂತಸ್ತಿಗೆ, ಘನತೆಗೆ ತಕ್ಕಂತೆಯೇ ಇತ್ತು. ಅದರ ಪಕ್ಕದಲ್ಲಿದ್ದ ಪಿ.ಎ. ಕೋಣೆಯಲ್ಲಿ ಎರಡು ಮೇಜುಗಳಿದ್ದವು. ಒಂದರಲ್ಲಿ ಜ್ವಾಲನಯ್ಯನವರ ಆಪ್ತ ಕಾರ್ಯದರ್ಶಿ ಸೀಸರ್ ದೇವಪ್ರಸನ್ನ ಕುಳಿತಿದ್ದ. ಮತ್ತೊಂದು ಮೇಜಿನಲ್ಲಿ ಆಫೀಸ್ ಟೈಪಿಸ್ಟ್ ಸೂರ್ಯಕುಮಾರಿ. ಯಾವುದೋ ಟೈಪಿಂಗ್ ಕೆಲಸವನ್ನು ಅತಿ ಮುತುವರ್ಜಿಯಿಂದ ಮಾಡುತ್ತಿದ್ದಳು. ನಾವು, ಅಂದರೆ ಶರಲೇಖ, ಉಳ್ಳಾಗಡ್ಡಿ ಮತ್ತು ನಾನು, ಜ್ವಾಲನಯ್ಯನವರ ಕೊಠಡಿಗೆ ಬಂದು, ಅವರ ಮೇಜಿನ ಮುಂದೆ ಇದ್ದ ಕುರ್ಚಿಗಳಲ್ಲಿ ಕುಳಿತೆವು. ಜ್ವಾಲನಯ್ಯನವರ ಜೊತೆ ಶರಲೇಖ ತನ್ನ ಪಾಟೀ ಸವಾಲನ್ನು ಪ್ರಾರಂಭಿಸಿದ.

'ಜ್ವಾಲನಯ್ಯನವರೇ, ಎಂ.ಒ.ಯು. ಸಹಿ ಆದನಂತರ ಅದನ್ನು ಏನು ಮಾಡಿದಿರಿ?'

'ನೇರವಾಗಿ ಅದನ್ನ ತಂದು ಸೀಸರ್‌ಗೆ ಕೊಟ್ಟು ಬೀರುವಿನಲ್ಲಿಟ್ಟು ಬೀಗ ಹಾಕುವಂತೆ ಹೇಳಿದೆ. ಇವತ್ತು ಬೆಳಗ್ಗೆ ಬೀರು ತೆಗೆದು ನೋಡಿದರೆ ಅದು ಕಾಣೆಯಾಗಿತ್ತು.'

'ಸಂಜೆ ಆಫೀಸು ಕೆಲಸ ಮುಗಿಸಿ ಹೊರಡುವಾಗ ಆಫೀಸಿನ ಬಂದೋಬಸ್ತು ಹೇಗೆ?'

'ಸೆಕ್ಯೂರಿಟಿಯವರು ಬಂದು ಎಲ್ಲಾ ಆಫೀಸುಗಳಿಗೆ ಬೀಗ ಹಾಕಿ ಕಾವಲು ಕಾಯುತ್ತಾರೆ. ಯಾರಾದರೂ ಹೊರಗಿನಿಂದ ಬಂದು ಕದಿಯುವುದು ಅಸಾಧ್ಯ.'

'ಸೀಸರ್ ಹೇಗೆ? ನಂಬಿಕಸ್ಥನೇ?'

'ಖಂಡಿತವಾಗಿ. ಅವನ ತಂದೆ ರಿಛರ್ಡ್ ಮೊದಲು ನಿಜಲಿಂಗಪ್ಪನವರ ಕಾಲದಲ್ಲಿ ಕೆಲಸ ಮಾಡುತ್ತಿದ್ದ. ತಂದೆ ಕಾಲವಾದ ನಂತರ ಮಗನಿಗೆ ಕೆಲಸ ದೊರಕಿತು. ಸೀಸರ್ ಬಹಳ ನಿಷ್ಠಾವಂತ'

'ಇನ್ನು ನಿಮ್ಮ ಟೈಪಿಸ್ಟ್. ಆಕೆ ಹೇಗೆ?'

'ಆಕೆಯ ಹೆಸರು ಎಲಿಸಬೆತ್ ಸೂರ್ಯಕುಮಾರಿ. ಬಹಳ ಪ್ರತಿಭಾವಂತೆ. ಇಲೆಕ್ಟ್ರಿಕಲ್

ಇಂಜಿನೀಯರಿಂಗ್ ಪದವೀಧರೆಯಾದರೂ ಕೆಲಸ ಸಿಕ್ಕದೇ ಈ ಟೈಪಿಸ್ಟ್ ಹುದ್ದೆಗೆ ಅರ್ಜಿ ಸಲ್ಲಿಸಿದ್ದಳು. ನಮ್ಮ ಬಡಾವಣೆಯಲ್ಲಿರುವ ಚರ್ಚಿನ ಪಾದರಿಗಳ ತಂಗಿಯ ಮಗಳು. ಹಾಗಾಗಿ ನಾನೇ ಶಿಫಾರಸು ಮಾಡಿ ಈ ಕೆಲಸ ಕೊಡಿಸಿದ್ದೇನೆ. ಖಂಡಿತ ಈ ವಿಷಯದಲ್ಲಿ ಆಕೆ ನಿರಪರಾಧಿ ಅನ್ನಿಸುತ್ತೆ'.

ಶರಲೇಖ ಜ್ವಾಲನಯ್ಯನವರ ಅನುಮತಿ ಪಡೆದು ಅವರ ಆಫೀಸ್ ಮತ್ತು ಪಕ್ಕದ ಟೈಪಿಸ್ಟ್ ಕೋಣೆಗಳನ್ನು ಕೂಲಂಕುಶವಾಗಿ ಪರೀಕ್ಷಿಸಲು ಶುರುಮಾಡಿದ. ಉಳ್ಳಾಗಡ್ಡಿ ಮತ್ತು ನಾನು ಏನೂ ಚರಹೆಗಳು ಕಾಣಿಸದ ಈ ಅಪರಾಧವನ್ನು ಪತ್ತೆ ಹಚ್ಚೋದಾದರೂ ಹೇಗೆ ಅಂತ ಯೋಚಿಸುತ್ತಾ ಕುಳಿತಿದ್ದೆವು. ಶರಲೇಖ ತನ್ನ ತಪಾಸಣೆ ಮುಗಿಸಿ ಒಳಕ್ಕೆ ಬಂದು 'ಜ್ವಾಲನಯ್ಯನವರೇ ಈಗ ನಾನು ನಿಮ್ಮ ಸಿಬ್ಬಂದಿಗಳನ್ನು ಪ್ರಶ್ನಿಸಬೇಕು. ಅವರನ್ನು ಪ್ರಶ್ನಿಸುವಾಗ ನೀವು ಇಲ್ಲಿ ಇಲ್ಲದಿದ್ದರೆ ನಮಗೆ ಅವರಿಂದ ಮುಕ್ತ ಉತ್ತರಗಳು ಸಿಗಬಹುದು. ಒಂದು ಅರ್ಧ ಘಂಟೆಕಾಲ ನೀವು ಹೊರಗೆಲ್ಲಾದರೂ ಹೋಗಿರಬಲ್ಲಿರಾ. ನಮ್ಮ ಪಾಟೀ ಸವಾಲು ಮುಗಿದನಂತರ ಇನ್ಸ್‌ಪೆಕ್ಟರ್ ನಿಮಗೆ ಮೊಬೈಲ್‌ನಲ್ಲಿ ಫೋನ್ ಮಾಡಿ ತಿಳಿಸ್ತಾರೆ. ಆಗ ನೀವು ಹಿಂದಕ್ಕೆ ಬರಬಹುದು.' ಎಂದು ಶರಲೇಖ ಹೇಳಿದ ತಕ್ಷಣ ಮಂತ್ರಿಗಳು 'ಅಗತ್ಯವಾಗಿ, ಇಲ್ಲೇ ನಮ್ಮ ಕಂದಾಯ ಸಚಿವರ ಬಳಿ ಸ್ವಲ್ಪ ಮಾತುಕತೆ ಇತ್ತು ಅಲ್ಲೇ ಇರುತ್ತೇನೆ. ಬೇಕಾದಾಗ ಕರೆಯಿರಿ' ಎಂದು ಹೇಳಿ ಆಫೀಸಿನಿಂದ ಆಚೆ ನಡೆದರು.

ಸೀಸರ್ ಮತ್ತು ಸೂರ್ಯಕುಮಾರಿ ಇವರನ್ನು ಶರಲೇಖ ಪ್ರತ್ಯೇಕವಾಗಿ ಜ್ವಾಲನಯ್ಯನವರ ಛೇಂಬರಿಗೆ ಕರೆಸಿ ಪ್ರಶ್ನಿಸಿದ. ಉಳ್ಳಾಗಡ್ಡಿ ಮತ್ತು ನಾನು ದೂರದಲ್ಲಿ ಭೇಟಿಗಾರರ ಮೂಲೆಯಲ್ಲಿದ್ದ ಸೋಫಾಗಳ ಮೇಲೆ ಕುಳಿತು ಆ ಪ್ರಶ್ನೋತ್ತರ ಪ್ರಕ್ರಿಯೆಗೆ ಬೇಕಾದ ಪ್ರತ್ಯೇಕತೆಯನ್ನು ಒದಗಿಸಿದೆವು.

ಸೀಸರ್ ಸ್ಫುರದ್ರೂಪಿ ಯುವಕ. ತೆಳುವಾದ ಮೈಮಾಟ. ಕಂದು ಬಣ್ಣ, ಚಿಗುರು ಮೀಸೆ. ಶರಲೇಖನ ಎಲ್ಲ ಪ್ರಶ್ನೆಗಳಿಗೂ ನಗುನಗುತ್ತಾ ಉತ್ತರಿಸುತ್ತಿದ್ದ. ಪ್ರಶ್ನೋತ್ತರಗಳು ನಮಗೆ ಕೇಳಿಸದಿದ್ದರೂ ಸೀಸರ್ ಗಾಬರಿಯಾದ ಹಾಗೇನೂ ಕಾಣಲಿಲ್ಲ. ಅನಂತರ ಸೂರ್ಯಕುಮಾರಿಯ ಸರದಿ. ನೋಡಿದ ತಕ್ಷಣವೇ ಅನುಕಂಪ, ವಾತ್ಸಲ್ಯ ಭಾವನೆಗಳನ್ನು ಮನದಲ್ಲಿ ಮೂಡಿಸುವಂತಹ ತರುಣಿ. ಅಷ್ಟೇನೂ ಎತ್ತರವಿಲ್ಲದಿದ್ದರೂ, ಪ್ರತಿಭೆಯನ್ನು ಸೂಸುತ್ತಿದ್ದ ಮುಖ, ಕಣ್ಣಂಚಿನಲ್ಲಿದ್ದ ನಗುವಿನ ಗೆರೆಗಳು ಇವೆಲ್ಲವೂ ಆ ಯುವತಿ ಸುಸಂಸ್ಕೃತಳೆಂಬುದನ್ನು ಸಾರಿಹೇಳುತ್ತಿದ್ದವು. ಶರಲೇಖನ ಪ್ರಶ್ನೆಗಳು ಆಕೆಗೆ ಗಾಬರಿ ಆತಂಕ ಉಂಟುಮಾಡಿದಂತೆ ಕಂಡಿತು.

ಪ್ರಶ್ನೋತ್ತರಗಳು ಮುಗಿದನಂತರ ಶರಲೇಖ ಉಳ್ಳಾಗಡ್ಡಿಯವರ ಬಳಿಗೆ ಬಂದು ಜ್ವಾಲನಯ್ಯನವರನ್ನು ಕರೆಸುವಂತೆ ಸೂಚಿಸಿದ. ಜ್ವಾಲನಯ್ಯ ಬಂದು ಕುಳಿತ ನಂತರ ಶರಲೇಖ ಅವರನ್ನು ಕುರಿತು,

'ಜ್ವಾಲನಯ್ಯನವರೇ, ನಿಮ್ಮ ಸಿಬ್ಬಂದಿಗಳಿಬ್ಬರನ್ನೂ ಕೂಲಂಕುಶವಾಗಿ ಪ್ರಶ್ನಿಸಿದ್ದೇನೆ.

ಖಂಡಿತವಾಗಿ ಅವರುಬ್ಬರೂ ನಿರಪರಾಧಿಗಳು. ಕಳೆದು ಹೋಗಿರುವ ದಾಖಲೆಯನ್ನ ಎರಡು ಕೋಣೆಗಳಲ್ಲೂ ಚೆನ್ನಾಗಿ ಹುಡುಕಿದ್ದೀರಿ ತಾನೆ?' ಅಂತ ಕೇಳಿದ.

ಜ್ವಾಲನಯ್ಯನವರು , 'ನಿನ್ನೆಯೆಲ್ಲಾ ಸೀಸರ್ ಮತ್ತು ನಾನು ಎರಡು ಕೋಣೆಗಳಲ್ಲೂ ಹುಡುಕಿದ್ದೇವೆ. ಬೀರುವನ್ನೆಲ್ಲಾ ತಲಾಷ್ ಮಾಡಿದ್ದಾಯಿತು. ಸುಳಿವೇ ಇಲ್ಲ ಸ್ವಾಮಿ' ಅಂದರು.

'ಎಷ್ಟು ಯೋಚಿಸಿದರೂ ನಿಮ್ಮ ಹುಡುಕಾಟ ಅಷ್ಟೇನೂ ಸರಿಯಾಗಿಲ್ಲದಿರಬಹುದೇನೋ ಅನ್ನಿಸುತ್ತೆ. ನಿಮ್ಮ ಇಬ್ಬರು ಸಿಬ್ಬಂದಿಗಳನ್ನು ಇಲ್ಲಿಗೆ ಕರೆಸಿದರೆ, ನಾನೇ ಹೋಗಿ ಪಕ್ಕದ ಕೋಣೆಯನ್ನು ಪತ್ತೇದಾರರು ಹುಡುಕುವ ರೀತಿಯಲ್ಲಿ ಹುಡುಕುವುದಕ್ಕೆ ನಿಮ್ಮ ಅಭ್ಯಂತರವೇನೂ ಇಲ್ಲ ತಾನೆ.?' ಎಂದು ಶರಲೇಖ ಕೇಳಿದ.

'ಖಂಡಿತ ಇಲ್ಲ. ಸಧ್ಯ ದಾಖಲೆ ಸಿಕ್ಕಿದರೆ ಸಾಕು' ಎನ್ನುತ್ತಾ ಸಚಿವರು ತಮ್ಮ ಹಸಿರು ಹಾಸಿನ ಮೇಜಿನ ಮೇಲಿದ್ದ ಕರೆಗಂಟೆಯನ್ನು ಒತ್ತಿದರು. ಮುಂದೆ ಪ್ರತ್ಯಕ್ಷನಾದ ಜವಾಲಿಯನ್ನು ಕುರಿತು 'ಸೀಸರ್ ಮತ್ತು ಸೂರ್ಯಕುಮಾರಿಯವರನ್ನು ಇಲ್ಲಿಗೆ ಬರಹೇಳು' ಅಂತ ಆಣತಿ ಮಾಡಿದರು.

ಅವರಿಬ್ಬರೂ ಒಳಗೆ ಬಂದರು. ಶರಲೇಖ ಎದ್ದು ಪಕ್ಕದ ಕೋಣೆಗೆ ಹೋದ. ಎರಡೇ ನಿಮಿಷಗಳಲ್ಲಿ ಹಿಂದಕ್ಕೆ ಬಂದ. ಕೈಯಲ್ಲಿ ನೀಲಿ ಬಣ್ಣದ ಹೊದಿಕೆಯ. ಮೂರು ಇಂಚು ದಪ್ಪವಿದ್ದ ಒಂದು ದಾಖಲೆ. ಅದನ್ನು ಕಂಡ ತಕ್ಷಣ ಜ್ವಾಲನಯ್ಯ ತಮ್ಮ ಕುರ್ಚಿಯಿಂದ ಜಿಗಿದು ಶರಲೇಖನ ಬಳಿ ಸಾಗಿ ಅವನಿಂದ ಆ ದಾಖಲೆಯನ್ನು ಕಿತ್ತುಕೊಂಡು, ಮತ್ತೆ ಮತ್ತೆ ಅದನ್ನು ನೋಡಿ ಸಂತಸದಿಂದ ಜಿಗಿದಾಡಿದರು. ಶರಲೇಖ ನಸುನಗುತ್ತಾ ಕುರ್ಚಿಯಲ್ಲಿ ಕುಳಿತ.

ಜ್ವಾಲನಯ್ಯ ಶರಲೇಖನನ್ನು ಕುರಿತು 'ಈ ಕ್ಲಿಷ್ಟವಾದ ಸಮಸ್ಯೆಯನ್ನು ಅದು ಹೇಗೆ ಇಷ್ಟು ಸುಲಭವಾಗಿ ಬಗೆಹರಿಸಿದಿರಿ? ಏನಿದೆಲ್ಲದರ ಮರ್ಮ?' ಎಂದು ಉತ್ಸುಕತೆಯಿಂದ ಕೇಳಿದರು. 'ಮೊದಲೇ ಹೇಳಿದೆನಲ್ಲಾ ನೀವುಗಳು ಗಾಬರಿಯಲ್ಲಿ ಸರಿಯಾಗಿ ಹುಡುಕಿಲ್ಲದಿರಬಹುದು ಅಂತ. ಅಲ್ಲೇ ಬೀರುವಿನ ಮೇಲಿತ್ತು. ಅಲ್ಲಿಂದ ಅದನ್ನ ತೆಗೆದುಕೊಂಡು ಬಂದೆ ಅಷ್ಟೇ. ಸಚಿವರಿಗೆ ಹೇಳಿಬಿಡಿ. ನಾವಿನ್ನು ಬರುತ್ತೇವೆ' ಅಂತ ಹೇಳಿ ಶರಲೇಖ ಅಲ್ಲಿಂದ ಹೊರಟ. ಉಳ್ಳಾಗಡ್ಡಿ ಮತ್ತು ನಾನು ಅವನನ್ನ ಹಿಂಬಾಲಿಸಿದೆವು.

ವಿಧಾನ ಸೌಧದಿಂದ ಕಬ್ಬನ್‌ಪಾರ್ಕನ್ನು ಹಾದು ವಿಟ್ಠಲ ಮಲ್ಯ ರಸ್ತೆಗೆ ಬಂದರೆ ಯು.ಬಿ ಟವರ್ ಕಾಣಸಿಗುತ್ತದೆ. ಅದರಲ್ಲಿನ ರಾಜಧಾನಿ ರೆಸ್ಟುರಾದಲ್ಲಿ ಊಟಮಾಡಲು ಕುಳಿತಾಗ ನಾನು ಶರಲೇಖನನ್ನು ಕುರಿತು 'ನನಗೇನೂ ಅರ್ಥ ಆಗಲಿಲ್ಲ, ಆ ಫೈಲನ್ನು ಹೇಗೆ ಅಷ್ಟು ಸುಲಭವಾಗಿ ಪತ್ತೆ ಹಚ್ಚಿದೆ. ಸೂರ್ಯಕುಮಾರಿ ಗಾಬರಿಯಾಗಿದ್ದಂತೆ ಕಂಡಿತು. ಏನು ಸಮಾಚಾರ' ಅಂತ ಕೇಳಿದೆ.

ಎಂದಿನಂತೆ ಶರಲೇಖ ತನ್ನ ವಿವರಣೆ ಪ್ರಾರಂಭಿಸಿದ.

'ಸಚಿವರು ಈ ಮಹಾಮೋಸದ ಪ್ರಾಜೆಕ್ಟನ್ನು ವಿವರಿಸುತ್ತಿದ್ದಾಗಲೇ ನನ್ನ ಮೈಯೆಲ್ಲಾ ಉರಿಯತೊಡಗಿತ್ತು. ನೀರನ್ನ ಮೇಲೆ ಪಂಪ್ ಮಾಡೋದಂತೆ ಮತ್ತೆ ಅದನ್ನ ಕೆಳಕ್ಕೆ ಹರಿಸಿ ವಿದ್ಯುತ್ ಉತ್ಪಾದಿಸೋದಂತೆ. ಈ ಹೇರ್ ಬ್ರೇನ್ಡ್ ಯೋಜನೆಗೆ ಮೂರೂವರೆ ಸಾವಿರ ಕೋಟಿ ರೂಪಾಯಿಗಳು. ಸತ್ಯಂ ಸ್ವಾಮಿನ ಅರ್ಧದಷ್ಟು. ಮಂತ್ರಿಗಳು ಇದನ್ನೆಲ್ಲಾ ಹೇಳುತ್ತಿದ್ದಾಗಲೇ ನನಗೊಂದು ನೈತಿಕ ಸಮಸ್ಯೆ ತಲೆದೋರಿತು. ನನ್ನ ಸಹಾಯ ಕೋರಿ ಬಂದವರಿಗೆ ಕೈಲಾದಷ್ಟು ಸಹಾಯ ಮಾಡುವುದೇ ಅಥವಾ ಅವರ ಪ್ರಾಜೆಕ್ಟಿನ ನ್ಯಾಯಾನ್ಯಾಯಗಳನ್ನು ನಿರ್ಧರಿಸುವ ನ್ಯಾಯಾಧೀಶನ ಸ್ಥಾನದಲ್ಲಿ ನಿಲ್ಲುವುದೇ ಎಂಬ ದ್ವಂದ್ವ ಮನದಲ್ಲಿ ಮೂಡಿದಾಗ ಪತ್ತೇದಾರನ ಕಸುಬುಗಾರಿಕೆಯೇ ಗೆದ್ದು ಸಚಿವರಿಗೆ ನನ್ನ ಕೈಲಾದ ಸಹಾಯ ಮಾಡಲು ಒಪ್ಪಿದೆ.

'ಅನಂತರ ಜ್ವಾಲನಯ್ಯನವರ ಪಕ್ಕದ ಕೊಠಡಿಯನ್ನು ಪರಿಶೀಲಿಸಲು ಹೋದಾಗ, ಅಲ್ಲಿದ್ದ ಸೀಸರ್ ಮತ್ತು ಸೂರ್ಯಕುಮಾರಿ ಕಣ್ಣಿಗೆ ಬಿದ್ದರು. ಸೂರ್ಯಕುಮಾರಿಯನ್ನು ನೋಡಿದ ತಕ್ಷಣ ಯಾರನ್ನಾದರೂ ಮನಸೆಳೆಯುವ ರೂಪ ಹಾಗೂ ವ್ಯಕ್ತಿತ್ವ ಆಕೆಗಿದೆ ಎಂಬುದನ್ನು ನೀವಿಬ್ಬರೂ ಈಗಾಗಲೇ ಗಮನಿಸಿರಬಹುದು. ಪತ್ತೇದಾರನಾಗಿ ನನ್ನ ಸಂಶಯಕ್ಕೆ ಗುರಿಯಾಗಬಹುದಾದ ವ್ಯಕ್ತಿಗಳನ್ನು ಬಹು ಸೂಕ್ಷ್ಮವಾಗಿ ಪರಿಶೀಲಿಸುವುದು ನನ್ನ ಕರ್ತವ್ಯ ಕೂಡಾ. ಸೂರ್ಯಕುಮಾರಿ ತನ್ನ ಮುಂದಿನ ಎತ್ತರದ ಮೇಜಿನ ಮೇಲಿದ್ದ ಟೈಪ್‌ರೈಟರಿನಲ್ಲಿ ಟೈಪ್ ಮಾಡುತ್ತಿದ್ದದನ್ನು ನೋಡಿದ ತಕ್ಷಣ , ತೆಳ್ಳನೆಯ ಎತ್ತರದ ಹುಡುಗಿ, ರಿಮ್‌ಲೆಸ್ ಕನ್ನಡಕ, ಎಂದೆಲ್ಲಾ ನನ್ನ ಮನಸ್ಸಿನ ಕಂಪ್ಯೂಟರಿನಲ್ಲಿ ಆಕೆಯ ಚಹರೆ ದಾಖಲಾಯಿತು. ನಾನು ಅವರ ಕೊಠಡಿಗೆ ಹೋದಾಗ ಸೀಸರ್ ಸಾವಧಾನದಿಂದ ತನ್ನ ಕೆಲಸ ಕಾರ್ಯಗಳಲ್ಲಿ ಮಗ್ನನಾಗಿದ್ದ. ಸೂರ್ಯಕುಮಾರಿ ತನ್ನ ಟೈಪಿಂಗ್ ಕೆಲಸದಲ್ಲಿ ಅತಿ ಹೆಚ್ಚಿನ ಆಸಕ್ತಿ ತೋರಿಸುತ್ತಿದ್ದಂತಿತ್ತು. ಓಹೋ ಇಲ್ಲೇನೋ ಮರ್ಮ ಇದೆ ಅಂತ ಆಗಲೇ ಅನ್ನಿಸಿತ್ತು. ಆಮೇಲೆ ಜ್ವಾಲನಯ್ಯನವರ ಆಫೀಸಿಗೆ ಬಂದು ನನ್ನ ಪ್ರಶ್ನೆ ಪ್ರಕ್ರಿಯೆಯನ್ನು ಪ್ರಾರಂಭಿಸಿದೆ. ಸೀಸರ್ ನಿಂದ ಹೆಚ್ಚೇನೂ ಮಾಹಿತಿ ಸಿಗಲಿಲ್ಲ. ಅನಂತರ ಸೂರ್ಯಕುಮಾರಿಯ ಸರದಿ. ಅವಳು ಒಳಕ್ಕೆ ಬರುತ್ತಿದ್ದಂತೆಯೇ ನಾನು ಆಶ್ಚರ್ಯಚಕಿತನಾದೆ. ತೆಳ್ಳಗಿನ ಎತ್ತರದ ಹುಡುಗಿಯ ಬದಲು, ತೆಳ್ಳಗಿನ ಕುಳ್ಳ ಹುಡುಗಿ ಬಂದದ್ದು ನೋಡಿದ ತಕ್ಷಣ ನನ್ನ ಪತ್ತೇದಾರಿ ಗ್ರಹಿಕೆ ಜಾಗೃತವಾಯಿತು. ಕುಳ್ಳ ಹುಡುಗಿ ಟೈಪಿಂಗ್ ಕುರ್ಚಿಯಲ್ಲಿ ಕುಳಿತಾಗ ಎತ್ತರವಾಗಿ ಕಾಣಬೇಕಾದರೆ ಕುರ್ಚಿಯ ಎತ್ತರ ಹೆಚ್ಚಿಸಲು ಏನಾದರೊಂದು ವಸ್ತುವನ್ನು ಇಟ್ಟಿರಬೇಕಾದದ್ದು ಅನಿವಾರ್ಯ. ಈ ಮನಃ ಸ್ಥಿತಿಯಲ್ಲೇ ಆಕೆಯನ್ನು ಪ್ರಶ್ನಿಸಲು ತೊಡಗಿದೆ. 'ನಿಮ್ಮ ಟೈಪಿಂಗ್ ಕುರ್ಚಿಯ ಎತ್ತರ ಕಡಿಮೆಯಾಗಿದೆಯೇನಮ್ಮ?' ಎಂಬ ನನ್ನ ಪ್ರಶ್ನೆಗೆ ಆಕೆ ಹೆದರಿ, ತೀರ ಅನಿರೀಕ್ಷಿತ ಉತ್ತರವನ್ನು ಕೊಟ್ಟಳು. ಆಕೆಯ ಉತ್ತರದ ಸಾರಾಂಶ ಇಷ್ಟು ಎಂ.ಓ.ಯು ಸಹಿ ಆದಮೇಲೆ ಸೀಸರ್ ಅದನ್ನು ಸೂರ್ಯಕುಮಾರಿಗೆ ಕೊಟ್ಟು ಅದನ್ನು ಇನ್‌ಕಮಿಂಗ್ ರಿಜಿಸ್ಟರಿನಲ್ಲಿ ದಾಖಲಿಸಿ ಬೀರೂವಿನಲ್ಲಿ ಇಡಲು ಹೇಳಿದ್ದನಂತೆ. ದಾಖಲಿಸುವಾಗ ಆಕೆ ಅದರ ಮೇಲೆ ಕಣ್ಣಾಡಿಸಿದಾಗ ನೀರನ್ನು ಮೇಲೆ ಕೆಳಗೆ ಓಡಾಡಿಸಿ

ಮೂರೂವರೆ ಸಾವಿರ ಕೋಟಿಯಷ್ಟನ್ನು ಸರ್ಕಾರದ ಬೊಕ್ಕಸದಿಂದ ಖಾಲಿಮಾಡುವ ಸ್ಕಾಮ್ ಇದು ಅಂತ ತಿಳಿದುಹೋಯಿತಂತೆ. ಎಷ್ಟಾದರೂ ಇಂಜನಿಯರಲ್ಲವೇ ಅವಳು. ಇನ್ನು ಒಂದೇ ವಾರದಲ್ಲಿ ಆ ಪ್ರಾಜೆಕ್ಟಿಗೆ ಕೇಂದ್ರದಿಂದ ಒಪ್ಪಿಗೆ ಪಡೆದು ಅನಂತರ ಈ ತಿಮಿಂಗಿಲಗಳೆಲ್ಲಾ ಹಣದ ಸಮಾರಾಧನೆ ಮಾಡುವುದನ್ನು ತಡೆಯುವುದು ಹೇಗಪ್ಪಾ ಅಂತ ಆಕೆಗೆ ತುಂಬಾ ಯೋಚನೆಯಾಗಿ ಕೊನೆಗೆ ಅಕ್ಷರಶಃ ಆ ಫೈಲಿನ ಮೇಲೆ ಕೂತು ಅದರಿಂದಾಗುವ ಅನಾಹುತವನ್ನು ತಪ್ಪಿಸುವ ವಿಧಾನವನ್ನು ಕಂಡುಕೊಂಡಳಂತೆ. ನಾನು ಕುರ್ಚಿಯ ಎತ್ತರದ ಬಗ್ಗೆ ಪ್ರಶ್ನಿಸಿದ ತಕ್ಷಣ ನನಗೆಲ್ಲಾ ತಿಳಿದುಹೋಗಿದೆಯೆಂದು ಭಾವಿಸಿ ತಾನೇ ತನ್ನ ಕೃತ್ಯಗಳನ್ನೆಲ್ಲಾ ವಿವರಿಸಿ ಹೇಳಿಬಿಟ್ಟಳು. 'ಈಗ ನಾನೇನು ಮಾಡಲಿ? ರಾಜೀನಾಮೆ ಕೊಟ್ಟರೆ ನನ್ನನ್ನು ಜೈಲಿಗೆ ಹಾಕುವುದಿಲ್ಲ ತಾನೇ?' ಅಂತೆಲ್ಲಾ ಗಾಬರಿಯಿಂದ ಕೇಳಿದಳು. 'ಹಾಗೇನೂ ಮಾಡೋ ಅಗತ್ಯ ಇಲ್ಲ. ನಿನ್ನ ಹೆಸರು ಇದರಲ್ಲಿ ಬರದ ಹಾಗೆ ಮಾಡ್ತೇನೆ. ಏನೂ ಯೋಚನೆ ಬೇಡ' ಅಂತ ಹೇಳಿದೆ. ಆಮೇಲಿನ ವಿದ್ಯಮಾನಗಳನ್ನ ನೀವೇ ನೋಡಿದಿರಲ್ಲ' ಎಂದ ಶರಲೇಖ.

'ಈ ಮೂರೂವರೆ ಸಾವಿರ ಕೋಟಿ ಸ್ಕಾಮ್ ವಿಷಯ ಗೊತ್ತಿದ್ದೂ ನಾವೆಲ್ಲಾ ಸುಮ್ಮನೆ ಇರಬೇಕು ಅಂತೀಯಾ ಶರಲೇಖ' ಅಂತ ನಾನು ಸ್ವಲ್ಪ ಖಾರವಾಗಿಯೇ ಕೇಳಿದೆ.

'ನಾನೇನೂ ಸುಮ್ಮನಿರಿ ಅಂತ ಹೇಳ್ತಾ ಇಲ್ಲವಲ್ಲಾ. ಎಲ್ಲಾ ನಿಮ್ಮ ನಿಮ್ಮ ಧೈರ್ಯ. ಉಳ್ಳಾಗಡ್ಡಿ ಸರ್ಕಾರೀ ನೌಕರ. ಅವನು ಇದೆಲ್ಲದರ ವಿರುದ್ಧ ದನಿ ಎತ್ತೋ ಕುಳ ಅಲ್ಲ. ನನಗಂತೂ ವೃತ್ತಿ ಸಂಬಂಧವಾದ ಸಬೂಬು ಇದೆ. ನನ್ನ ಹತ್ತಿರ ಸಹಾಯ ಕೇಳಿ ಬಂದ ಯಾವ ಗಿರಾಕಿಯ ಗುಪ್ತ ವ್ಯವಹಾರಗಳನ್ನು ಬಯಲಿಗೆಳೆಯುವುದು ನಮ್ಮ ಪತ್ತೇದಾರಿ ಸಂಹಿತೆಗೆ ವಿರುದ್ಧ. ನೀನು ಏನು ಬೇಕಾದರೂ ಮಾಡಲು ಸರ್ವ ಸ್ವತಂತ್ರ. ಆದರೆ ಒಂದು ಸಂಗತಿ ಮರೀಬೇಡ. ಈ ಕೇಸಿನಲ್ಲಿ ನೀನು ನನ್ನ ಸಹಾಯಕನಾಗಿ ಬಂದಿರೋದ್ರಿಂದ ನನಗಿರೋ ಕಟ್ಟಳೆ ನಿನಗೂ ಅನ್ವಯಿಸುತ್ತೆ' ಅಂದ ಶರಲೇಖ

'ಈಗೇನಾಗತ್ತೆ?' ನಾನು ಹತಾಶನಾಗಿ ಕೇಳಿದೆ.

'ಆಗೋದೇನು. ಪರಿಸರ ಪ್ರೇಮಿಗಳು ಟವರ್ ಕಟ್ಟಿ ಅರಮನೆ ಮೈದಾನ ಕೆಡಿಸುಕ್ಕೂ ಬಿಡುಲ್ಲ, ಸ್ಯಾಂಕೀ ಕೆರೆ ನೀರನ್ನ ಖಾಲಿಮಾಡುಕ್ಕೂ ಬಿಡುಲ್ಲ. ಪ್ರಾಜೆಕ್ಟ್ ಫೀಸಬಿಲಿಟಿ ಸ್ಟಡಿ ಅಂತ ಒಂದು ನೂರಿನ್ನೂರು ಕೋಟಿ ಖರ್ಚಾದೀತು ಅಷ್ಟೆ. ಆಮೇಲೆ ಫೀಸಬಲ್ ಅಲ್ಲ ಅಂತ ಹೇಳಿ ಕೈಬಿಡ್ತಾರೆ. ಆ ಇನ್ನೂರು ಕೋಟಿ ಸಾಕಲ್ಲ ಮುಂದಿನ ಸ್ಕಾಮ್ ಹುಟ್ಟಿಸೋವರ್ಗೂ' ಅಂತ ಶರಲೇಖ.

ರಾಜಧಾನಿಯಲ್ಲಿ ಅಡುಗೆಗಳೆಲ್ಲಾ ಚೆನ್ನಾಗಿಯೇ ಇದ್ದವು. ಅದರೆ ಅದ್ಯಾಕೋ ಊಟವೇ ರುಚಿಸಲಿಲ್ಲ.

# ಮಾತ್ರೆ ತಂದ ಯಾತ್ರೆ

- ಬೇಲೂರು ರಾಮಮೂರ್ತಿ

ನೋಡಿ ಬೆಳಗ್ಗೆ ಕಾಫಿಗೆ ಮುಂಚೆ ಬಿಳಿ ಮಾತ್ರೆ, ತಿಂಡಿ ತಿಂದಾದ ಮೇಲೆ ಕೆಂಪದೊಂದು, ಹಸಿರಿಂದೊಂದು ಆಮೇಲೆ ಮಧ್ಯಾಹ್ನ ಊಟವಾದ ಮೇಲೆ ಹಳದೀ ಚಿಕ್ಕ ಮಾತ್ರೆ, ರಾತ್ರಿ ಮಲಗೋ ಮೊದಲು ಸಣ್ಣ ಶೀಷೆಯ ಟಾನಿಕ್ಕು. ಯಾವುದನ್ನೂ ಮರೀಬೇಡಿ. ಹೇಗೆ ಹೋದರೋ ಹಾಗೆ ಮದುವೆ ಮುಗಿಸಿಕೊಂಡು ಬನ್ನಿ ತಿಳಿತಾ ಅಂತ ಅಲಮೇಲಮ್ಮ ಹೇಳುತ್ತಿದ್ದ ಹಾಗೆ ಹೆಂಡತಿಯ ಮುಖವನ್ನೇ ನೋಡುತ್ತಾ ನಿಂತಿದ್ದ ಅಳಸಿಂಗಾಚಾರಿ ಚೊಲ್ಲಿದ್ದೇ ಚೊಲ್ಕ್ಯೊಂಡು ಇರಕ್ಕರದಿಕ್ಕೆ ಉನ್ಕೆ ನಾಚ್ಕೆ ಆರ್‌ದಿಲ್ಯಾ ಅಂತ ಅಂದು ಮುಖ ಸಿಂಡರಿಸಿದರು. ಅಲಮೇಲಮ್ಮ ಹಾಗೇ ಗಂಡ ಎಲ್ಲ ಮರೆತುಬಿಡ್ತಾರೆ ಅಂತ ಅವರಿಗೆ ಒಂದು ಭ್ರಾಂತಿ ಬಂದಿದೆ. ಅದಿಕ್ಕೆ ಅವರು ಹೇಳಿದ್ದನ್ನೇ ಹೇಳುತ್ತಿರುತ್ತಾರೆ. ಆದರೂ ಅಳಸಿಂಗಾಚಾರಿ ಮರೆತರೆ ಬೆಂಡೆತ್ತುತಾರೆ. ಆಗ ಅಳಸಿಂಗಾಚಾರಿ ತಪ್ಪು ಒಪ್ಪಿಕೊಂಡವನ ಹಾಗೆ ಸೊಂಟದ ಕೆಳಗೆ ಪಂಚೆಯ ಮೇಲೇ ಸಣ್ಣಗೆ ಕೆರೆದುಕೊಳ್ಳುತ್ತಾ ಹೆಂಡತಿ ಹತ್ತಿರ ಹೋಗೆ ಅದೆನ್ನಾ ಆಚೆ ತೆರಿಮಾ ಅನ್ನತ್ತಾರೆ. ಈ ಮರೆವು ಬೇರೆ ವಿಚಾರದಲ್ಲಿ ಹಾಳಾಗಿ ಹೋಗಲಿ ಮಾತ್ರೆ ತಗೊಳೋ ವಿಚಾರದಲ್ಲಿ ತಲೆ ಹಾಕದಿರಲಿ ಅಂತ ಅಲಮೇಲಮ್ಮ ಪದೇ ಪದೇ ನೆನಪು ಮಾಡುತ್ತಿರುತ್ತಾರೆ. ಮನೇಲೇ ಇದ್ರೆ ಅವರು ಊಟ ಹಾಕೋದನ್ನಾದರೂ ಮರೆತಾರು, ಆದರೆ ಮಾತ್ರೆ ಕೊಡೋದನ್ನು ಮರೆಯೋದಿಲ್ಲ. ಆದರೆ ಈಗ ಬಂದಿರೋದು ತಾಪತ್ರಯ ಏನಪ್ಪ ಅಂದರೆ ಅಳಸಿಂಗಾಚಾರಿ ಕೇವಲ ಎರಡು ದಿನದ ಮಟ್ಟಿಗೆ ಮೈಸೂರಿಗೆ ಹೋಗುತ್ತಿದ್ದಾರೆ. ಅಲ್ಲಿ ಅವರ ನೆಂಟ ತಿರುಮಲೈಂಗಾರಿಯ ಮೊಮ್ಮಗಳ ಮದುವೆ. ನನ್ನ ಮೊಮ್ಮಗಳ ಇಂಟರ್ ಕ್ಯಾಸ್ಟ್ ಮದುವೆಗೆ ನೀನು ಬರಲೇ ಬೇಕು ಅಂತ ತಿರುಮಲೈಂಗಾರಿ ಪದೇ ಪದೇ ಫೋನ್ ಮಾಡಿ ಹೇಳಿದ್ದರಿಂದ ಅಳಸಿಂಗಾಚಾರಿ ಹೊರಟಿದ್ದಾರೆ. ಅಲಮೇಲಮ್ಮ ಅಯ್ಯೋ ಎನ್ ಕೈಲಿ ಆರ್‌ದಿಲ್ಲೆ ಅಂತ ಹಠ ಹಿಡಿದ ಮೇಲೆ ರೆಂಡೇ ನಾಳ್ ತಾನೆ ಅಂತ ಅಳಸಿಂಗಾಚಾರಿ ಒಬ್ಬರೇ ಹೊರಟಿದ್ದಾರೆ. ಅಲ್ಲಿ ಅಪರೂಪದ ನೆಂಟರು ಸ್ನೇಹಿತರು ಸಿಗ್ತಾರೆ ಅವರ ಜೊತೆ ಇಸ್ಪೀಟು ಬಡೀಬಹುದು, ಎಲೆ ಅಡಿಕೆ ಮೆಲ್ಲಬಹುದು ಒಂದಿಷ್ಟು ಮೈಸೂರು ಪಾಕ್‌ನೂ ತಿಂದುಬಿಡಬಹುದು ಅಂತ ಪ್ಲಾನು ಹಾಕಿಕೊಂಡು ಹೊರಟಿದ್ದಾರೆ. ಅವರಿಗೆ ಈ ವಯಸ್ಸಿನಲ್ಲಿ ಹೆಂಡತಿಯನ್ನು ಬಿಟ್ಟು ಹೋಗೋದ್ರಲ್ಲಿ ಏನೂ ಸುಖ ಕಾಣ್ತಿಲ್ಲ. ಅವಳು ಈಗ ಆಟಕ್ಕುಂಟು ಲೆಕ್ಕಕ್ಕಿಲ್ಲ ಅಂತ ಅವರ ಸ್ನೇಹಿತರ ಹತ್ತಿರ ಹೇಳಿಕೊಂಡು ನಕ್ಕಿದ್ದಾರೆ. ಅದಕ್ಕೆ ಅವರ ಸ್ನೇಹಿತರು ಅದನ್ನು ಸ್ವಲ್ಪ ಸರಿಮಾಡು ಅಂದು ವಯಸ್ಸಾದ ಹೆಂಡತಿ ಅಂದರೆ ಲೆಕ್ಕಕುಂಟು ಆಟಕ್ಕಿಲ್ಲ ಅಂತ ತಿದ್ದಿದ್ದಾರೆ. ಗಾದೆ ತಿರುಚಿದ ಅರ್ಥ ಅಳಸಿಂಗಾಚಾರಿಗೆ ಅರ್ಥವಾದರೂ ಅವರು ಪೋಲಿ ಮುಂಡೇವು, ಪೋಲಿ ಮುಂಡೇವು ಅಂತ ಗೊಣಗಿದ್ದಾರೆ.

ಹೀಗೆ ಅಳಸಿಂಗಾಚಾರಿ ಎರಡು ದಿನ ಹೆಂಡತಿಯನ್ನು ಬಿಟ್ಟು ಮದುವೆಗೆ ಮೈಸೂರಿಗೆ

ಹೋಗಬೇಕಾಗಿ ಬಂದಿರುವುದರಿಂದ ಅಲಮೇಲಮ್ಮನಿಗೆ ಗಂಡನ ಮಾತ್ರೆ ಸೇವೇದೇ ಯೋಚನೆ. ಮಾತ್ರೆ ತಗೊಳ್ಳೇ ಇನ್ನು ಏನಾದರೂ ಅನಾಯುತ ಮಾಡಿಕೊಂಡು ಬಂದರೆ ಅಂತ ದಿನಾ ಅದೇ ಚಿಂತೆ. ಅದಿಕ್ಕೆ ಗಂಡನಿಗೆ ಅವರು ಪದೇ ಪದೇ ಹೇಳುತ್ತಿದ್ದಾರೆ. ಕಡೆಗೆ ಅವರಿಗೆ ಅನಿಸಿದ್ದೆಂದರೆ ಗಂಡನಿಗೆ ಎಷ್ಟು ಹೇಳಿದರೂ ಅಷ್ಟೆ ಎಲ್ಲ ಮರೆತುಬಿಡುತ್ತಾರೆ ಅಂತ ಮಾತ್ರೆಗಳನ್ನು ಬೆಳಗ್ಗೆ, ಮಧ್ಯಾಹ್ನ, ರಾತ್ರೆ ಅಂತ ಬೇರೆ ಬೇರೆ ಪೊಟ್ಟಣಗಳನ್ನು ಮಾಡಿ ಇಟ್ಟು ಅದಿಕ್ಕೆ ತಾರೀಖುಗಳನ್ನು ಬರೆದಿಟ್ಟರು. ಅದನ್ನು ಗಂಡನ ಮುಂದೆ ಹಿಡಿದು, ಎನ್ನಾ, ಇಂಗೆ ಪಾರಂಗೋ, ಇದಲೆ ತಾರೀಖು ಎಳೆದಿರ್ಕ್ಕೆ, ಅದ ಮಾದರಿಯೇ ಮಾತ್ರೆ ಸಾವಡಂಗೋ ಅಂದರು. ಅಳಸಿಂಗಾಚಾರಿಗೆ ಹೆಂಡತಿಯ ಈ ಓವರ್ ಆಕ್ಟಿಂಗ್ ಬೇಜಾರಾಗಿ ಆ ಕಡೆ ಗಮನವೇ ಕೊಡದೇ ಆಚಿ ಆಚಿ ಅಂದರು.

ಇನ್ನು ಗಂಡನಿಗೆ ಎರಡು ದಿನಕ್ಕೆ ಬಟ್ಟೆ ಟವಲು ಎಲ್ಲ ಜೋಡಿಸಿಟ್ಟರು. ಅಳಸಿಂಗಾಚಾರಿ ಯಾವ ಊರಿಗೆ ಹೊರಟರೂ ಅಲಮೇಲಮ್ಮನದೇ ಪ್ಯಾಕಿಂಗು. ರೆಂಡು ನಾಳಿಕೆ ಎನ್ನಾತ್ತಿಕ್ಕೆ ಇವಳ ಬಟ್ಟೆ ಅಂತ ಅವರೇ ಎಲ್ಲ ಕಿತ್ತಾಕ್ತಾರೆ. ಹೀಗಾಗಿ ಹೆಂಡತಿ ಇಟ್ಟ ಬಟ್ಟೆಗಳನ್ನೇ ಅಳಸಿಂಗಾಚಾರಿ ತೊಟ್ಕೊಬೇಕು. ಇನ್ನು ಮದುವೆಗೆ ಏನು ಉಡುಗೊರೆ ಕೊಡಬೇಕು ಅನ್ನೋದನ್ನೂ ಅವರೇ ನಿರ್ಧಾರ ಮಾಡಿರುತ್ತಾರೆ. ಎನ್ನ, ಒರು ಕವರ್ಲೇ, ಅಂಬದು ರೂಪಾಯಿ ಪೋಟ್ಟು ಕುಡುತುಡುಂಗೋ, ಅವಾಳೂ ಅತ್ನೇಯೇ ಕುಡುಕರದು. ಅಂದು ಇನ್ನೇನು ಹೆಚ್ಚಿನ ಖರ್ಚು ಬೇಡ ಅಂತ ರೂಲಿಂಗ್ ಕೊಟ್ಟುಬಿಡುತ್ತಾರೆ. ಹೀಗಾಗಿ ಅಳಸಿಂಗಾಚಾರಿಯ ಮೈಸೂರು ಯಾತ್ರೆಗೆ ಅಲಮೇಲಮ್ಮ ಎಲ್ಲ ಸಿದ್ಧತೆ ಮಾಡಿ ಕಳಿಸಿಕೊಟ್ಟರು. ಪ್ಯಾಕಿಂಗ್ ಹೆಂಡತಿಯೇ ಮಾಡೋದರಿಂದ ಅಳಸಿಂಗಾಚಾರಿ ಆ ಬಗೆಗೆ ತಲೆ ಕೆಡಿಸಿಕೊಳ್ಳದೇ, ನಾ ಪೋಯಿಟ್ ವರೆ ಅಂದು ಕಚ್ಚೆ ಸರಿಮಾಡಿಕೊಂಡು ಕೈಲೊಂದು ಕೋಲು ಹಿಡಿದು ಹೊರಟೇಬಿಟ್ಟರು. ಮಾತ್ರೆ ತಗೋಳೋದು ಮರೀಬೇಡಿ ಅಂತ ಹೇಳೋದನ್ನು ಅವರು ಮರೀಲಿಲ್ಲ, ಆದರೂ ಅಲಮೇಲಮ್ಮನಿಗೆ ಗಂಡನ ಮೇಲೆ ನಂಬಿಕೆ ಇಲ್ಲ. ಅವರು ಮೈಸೂರಿಗೆ ಫೋನ್ ಮಾಡಿ ರಂಗಧಾಮನಿಗೆ ಫೋನ್ ಮಾಡಿ ಅವರಿಗೆ ಮಾತ್ರೆ ತಗೋಳೋದನ್ನು ನೀನು ನೆನಪು ಮಾಡು ಅಂತ ಹೇಳಿದ್ದರು. ನಾಳೆ ಹೇಗೂ ಇನ್ನೊಂದು ಸಾರಿ ಫೋನ್ ಮಾಡಿ ನೆನಪು ಮಾಡಿದರಾಯಿತು ಅಂತ ಮಾಡಿಟ್ಟಿದ್ದ ಅವಲಕ್ಕಿ ಜೊತೆಗೆ ಚಟ್ನಿಪುಡಿ, ತುಪ್ಪ ಮೊಸರು ಇಟ್ಟುಕೊಂಡು ಕೂತರು. ಇತ್ತ ಮೈಸೂರಿಗೆ ಹೊರಟ ಅಳಸಿಂಗಾಚಾರಿ ಅದೆಷ್ಟು ಹೊತ್ತಿಗೆ ಛತ್ರಕ್ಕೆ ಹೋದೇನೋ ಅಂತ ರೈಲಿಳಿದರೆ ಅವರಿಗೆ ಆಶ್ಚರ್ಯ, ಸ್ಟೇಷನ್ನಿಗೆ ರಾಮೈಂಗಾರಿ ಬಂದಿದ್ದ. ತಿರುಮಲೈಂಗಾರಿ ಕಳಿಸಿದನಂತೆ ಹೋಗಿ ಕರ್ರ್‍ಕೊಂಬಾ ಅಂತ ಅದಿಕ್ಕೆ ಬಂದೆ ಅಂದ. ಛತ್ರಕ್ಕೆ ಹೋದದ್ದೇ ತಡ ಎಲ್ಲ ಹಳೆ ಸ್ನೇಹಿತರು ಮುತ್ತಿಕೊಂಡರು. ಒಂದಿಷ್ಟು ಉಪ್ಪಿಟ್ಟು ಕೇಸರಿ ಬಾತ್ ತಿಂದು ಕಾಫಿ ಕುಡಿದು, ಇಸ್ಪೀಟು ಬಡಿಯೋಕ್ಕೆ ಕೂತೇಬಿಟ್ಟರು. ಬಂದೋರೆಲ್ಲ ಅಲ್ಲಿಗೇ ಬಂದು ಮಾತಾಡಿಸುತ್ತಾ ಇದ್ದರು. ಹೆಂಗಸರೆಲ್ಲ ಬಂದು ಮಾಮಿ ಎಪ್ಪಡಿ ಇರ್ಕ್ರಾ, ಯಾಕೆ ಬರಲಿಲ್ಲ ಅಂತ ಕೇಳಿಕೊಂಡು

ಹೋದರು. ಅಲ್ಲಿಂದ ವರಪೂಜೆಯ ವೇಳೆಗೆ ಎಲ್ಲ ಹಾಲ್‌ಗೆ ಬಂದು ಕೂತರು. ಅಮೆರಿಕಾದಲ್ಲಿ ಇರೋ ಅಳಸಿಂಗಾಚಾರಿಯ ಇಬ್ಬರು ಮಕ್ಕಳ ಬಗೆಗೆ ಎಲ್ಲರೂ ಕೇಳೋರೇ. ಅಳಸಿಂಗಾಚಾರಿ ಎರಡು ಬಾರಿ ಅಮೆರಿಕಾಕ್ಕೆ ಹೋಗಿ ಬಂದ ಅನುಭವಗಳನ್ನು ಹೇಳಿಕೊಂಡರು. ರಾತ್ರಿ ಭರ್ಜರಿ ಊಟವಾಯಿತು. ಜೊತೆಗೆ ಎಲೆಡಿಕೆಯೂ ಆಯಿತು. ಇನ್ನೊಂದು ರೌಂಡು ಇಸ್ಪೀಟು ಬಡಿದು ರಾತ್ರಿ ಹನ್ನೆರಡರ ಹೊತ್ತಿಗೆ ಮಲಗಿದರಾಯಿತು ಅಂತ ಮಹಡಿ ಹತ್ತಿದರು. ಆಗ ಅಳಸಿಂಗಾಚಾರಿಗೆ ಸಡನ್ನಾಗಿ ನೆನಪು ಬಂತು. ಮಾತ್ರೆ ತಗೋಬೇಕಲ್ಲ. ಅಂತ. ರೂಮಿಗೆ ಬಂದು ಬ್ರೀಫ್ ಕೇಸ್ ತೆಗೆದರು. ಎಷ್ಟು ಹುಡುಕಿದರೂ ಮಾತ್ರೆ ಕವರ್ ಸಿಗಲೇ ಇಲ್ಲ. ಅರೇ, ಇಲ್ಲೇ ಇಟ್ಟಿರ್ತೀನಿ ಅಂತ ಹೇಳಿದ್ದಲ್ಲ ಅಂತ ಬಟ್ಟೆಗಳನ್ನೆಲ್ಲಾ ತೆಗೆದು ಹಾಕಿ ಹುಡುಕಿದರೂ ಮಾತ್ರೆ ಕವರ್ ಸಿಗಲೇ ಇಲ್ಲ. ಅದಿಕ್ಕೇ ಹೇಳೋದು ಸಿಕ್ಕಾಪಟ್ಟೆ ಕೇರ್‌ಫುಲ್ ಆಗಿದ್ರೆ ಹೀಗೇ ಆಗೋದು. ಆಯ್ತು ಎರಡು ದಿನ ಮಾತ್ರೆ ತಗೊಳ್ದೇ ಇದ್ರೆ ಏನು ಸತ್ತು ಹೋಗಲ್ಲ. ಅಂತ ಮತ್ತೆ ಬಟ್ಟೆಗಳನ್ನೆಲ್ಲಾ ಬ್ರೀಫ್‌ಕೇಸ್‌ಗೆ ತುಂಬಿ ಆಟಕ್ಕೆ ಹೊರಟರು. ಆಗ ಅವರಿಗೆ ಎಂಥಾ ಷಾಕ್ ಆಯಿತೆಂದರೆ ಇನ್ನೇನು ಎದೆ ಒಡೆದೇ ಹೋಗಬೇಕು ಅನ್ನೋ ಹಾಗೆ. ಯಾಕೆಂದ್ರೆ ಅಳಸಿಂಗಾಚಾರಿ ಆ ಕಡೆ ಹೊರಟರೆ, ಅಲ್ಲಿ ಬಾಗಿಲಿನಲ್ಲಿ ಅಲಮೇಲಮ್ಮ ಕೈಯಲ್ಲಿ ಮಾತ್ರೆನೂ ಲೋಟದಲ್ಲಿ ನೀರ್ನೂ ಹಿಡಿದು ನಿಂತಿದಾರೆ. ಇದೇನು ನಿಜವೋ ಭ್ರಮೆಯೋ ಅಂತ ಅವರಿಗೆ ಒಂದು ಕ್ಷಣ ಮಾತೇ ಹೊರಡಲಿಲ್ಲ. ಆದರೂ ಖಚಿತವಾಯಿತು ಅದು ಹೆಂಡತಿಯೇ ಹೊರತು ಹೆಂಡತಿಯ ದೆವ್ವ ಅಲ್ಲ ಅಂತ. ಅವರು ಹೆಂಡತಿಯತ್ತ ನೋಡಿ, ಇದೆನ್ನಡೀ ನೀ ಇಂಗೆ ಅಂದರು. ಅದಕ್ಕೆ ಅಲಮೇಲಮ್ಮ ನಿಮಗೆ ಎಷ್ಟು ಸಾರಿ ಹೇಳಿದರೂ ಹೀಗೇ ಮಾಡ್ತೀರ. ಮಾತ್ರೆ ಪ್ಯಾಕೆಟ್‌ನ ಅಲ್ಲೇ ಮರೆತುಬಂದ್ರಿ. ನಾನು ಅದನ್ನು ತಗೊಂಡು ಆಟೋ ಹತ್ತಿ ಬರೋ ಹೊತ್ತಿಗೆ ರೈಲು ಹೊರಟೇ ಬಿಟ್ಟಿತ್ತು. ಏನು ಮಾಡ್ಲಿ ಅಂತ ಗೊತ್ತಾಗದೇ. ಮತ್ತೆ ಮನೆಗೆ ಹೋಗಿ ನನ್ನದೊಂದೆರಡು ಬಟ್ಟೆ ಹಾಕಿಕೊಂಡು ಬಸ್ ಸ್ಟಾಂಡಿಗೆ ಬಂದು ಬಸ್ಸು ಹತ್ತಿ ಬಂದೇ ಬಿಟ್ಟೆ. ನಿಮ್ಮ ಆರೋಗ್ಯದ ಮುಂದೆ ಇವೆಲ್ಲ ಏನು ಮಹಾ ಅಂದರು. ಆಗ ಅಳಸಿಂಗಾಚಾರಿಗೆ ಇದ್ದರೆ ಇಂತಹ ಹೆಂಡತಿ ಇರಬೇಕು ಅನಿಸಿತು. ಹೆಂಡತಿಯ ಬಗೆಗೆ ಅಭಿಮಾನವೂ ಉಕ್ಕಿತು. ಅದನ್ನು ಹೋಗಿ ಅವರ ಸ್ನೇಹಿತರ ಹತ್ತಿರ ಎಲ್ಲ ಹೇಳಿಕೊಂಡರು. ಆದರೆ ತಿರುಮಲೈಂಗಾರಿ ಮಾತ್ರ ಇದರಲ್ಲಿ ಏನೋ ಮರ್ಮ ಇದೆ. ನಿನ್ನ ಹೆಂಡತಿ ಬೇಕೆಂದೇ ಮಾತ್ರೆ ಕವರ್‌ನ ನಿನಗೆ ಕೊಡದೇ ನಿನ್ನನ್ನ ಫಾಲೋ ಮಾಡಿದಾಳೆ ಇನ್ನು ನೀನು ಇಸ್ಪೀಟು ಬಡಿದ ಹಾಗೇ ಅಂದ. ಇಸ್ಪೀಟು ಬಡಿದೇ ಇದ್ದರೆ ಏನಾಯ್ತು ಅಂತ ಅಳಸಿಂಗಾಚಾರಿ ಅಂದುಕೊಳ್ಳೋ ಹೊತ್ತಿಗೆ ಅಲಮೇಲಮ್ಮ ಗಂಡನಿಗೆ ಮಾತ್ರೆ ತಿನ್ನಿಸಿ ಆಮೇಲೆ "ಇಲ್ಲಿ ಹೆಂಗಸರ ಮುಂದೆ ಕೂತ್ಕೊಂಡು ಏನು ಮಾಡ್ತೀರ ಅಲ್ಲಿ ಹೋಗಿ ನಿಮ್ಮ ಫ್ರೆಂಡ್ಸ್ ಎಲ್ಲ ಇಸ್ಪೀಟ್ ಬಡೀತಾ ಇದಾರೆ ನೀವೂ ಹೋಗಿ ಆಡ್ಕೊಬಾರ್ದೇ" ಅಂತ ಅಂದಿದ್ದೇ ತಡ ಅಳಸಿಂಗಾಚಾರಿ ಕಚ್ಚೆ ಸರಿಮಾಡಿಕೊಂಡು ಮಹಡಿ ಮೆಟ್ಟಿಲು ಹತ್ತಿದರು.

# ಮೋಸಕ್ಕೆ ಹೊಸಾ ಅರ್ಥ.....

**- ಎಚ್. ಗೋಪಾಲಕೃಷ್ಣ**

ಸೇವಾವಧಿ ಮುಗಿಸಿದ ನಂತರ ನಿವೃತ್ತರಾಗುವ ಸುಮಾರು ಉದ್ಯೋಗಿಗಳನ್ನು ತುಂಬಾ ಸನಿಹದಿಂದ ಅವಲೋಕಿಸುವ ಅವರ ಜತೆಗೆ ಅವರ ಖಾಸಗಿ ಬದುಕಿನ ವಿವರಗಳನ್ನು ಅರಿಯುವ, ಅವರ ಕಷ್ಟ ಸುಖಗಳನ್ನು ತಿಳಿಯುವ ಅಪೂರ್ವವಾದ ಅನುಭವ ನನ್ನದು. ನಿವೃತ್ತಿ ಹೊಂದುತ್ತಿರುವ ಸುಮಾರು ಸ್ನೇಹಿತರ ಸಾಮಾನ್ಯವಾದ ಅಳಲು ಎಂದರೆ ಅವರ ತಂದೆ ತಾಯಂದಿರು ಅವರ ವಯಸ್ಸನ್ನು ಹೆಚ್ಚುಕೊಟ್ಟು ಆ ಕಾಲದಲ್ಲಿ ಶಾಲೆಗೆ ಸೇರಿಸಿಬಿಟ್ಟರು, ಅದರಿಂದ ಈಗ ಅವರ ನಿವೃತ್ತಿ ಎರಡು ಮೂರು ವರ್ಷ ಬೇಗಲೇ ಆಗುತ್ತಿದೆ ಅನ್ನುವುದು!

ಪರಿಸರದ ಪ್ರಭಾವವೋ ಏನೋ ನಿವೃತ್ತಿ ಹೊಂದುವ ಸುಮಾರು ಜನ ಇನ್ನೂ ಚಿಕ್ಕವರ ಹಾಗೇ ಕಾಣುತ್ತಾರೆ. ಕೆಲವರಂತೂ ಚಟುವಟಿಕೆಯ ಚಿಲುಮೆಗಳು-ಈಗಲೂ ಮದುವೆಯಾಗಬಹುದು ಹಾಗಿರುತ್ತಾರೆ. ಒಟ್ಟೊಟ್ಟಿಗೆ ಆರೇಳು ಮೆಟ್ಟಲುಗಳನ್ನು ಇವರು ಹಾರಿ ಹತ್ತಬೇಕಾದರೆ ಇವರಿಗೆ ವಯಸ್ಸಾಗಿದೆ ಅಂತಲೇ ಅನಿಸದು. ಅದಕ್ಕಿಂತಲೂ ಹೆಚ್ಚಾಗಿ ಅವರ ನಡೆನುಡಿಗಳೂ ಸಹ ಇನ್ನೂ ಪಕ್ವ ಹಂತ ತಲುಪಿದೆ ಅಂತಲೇ ಅನಿಸದ ಹಾಗಿರುತ್ತೆ. ಇದು ನಿಮಂಥಹವರ ಗುಣಾತ್ಮಕ ಅಂಶಗಳು ಅಂತ ಅವಾಗವಾಗ ಈ ಸ್ನೇಹಿತರಿಗೆ ಹೇಳುತ್ತಿರುತ್ತೇನೆ.

ನನ್ನ ಸಹೋದ್ಯೋಗಿ ಒಬ್ಬರು ವಯಸ್ಸಿಗೆ ಪುಟ್ಟ ಹುಟ್ಟಿನ ಬೆಳವಣಿಗೆಯವರು ಇದ್ದಾರೆ. ಆದರೆ ತುಂಬಾ ಮೆಚ್ಯೂರ್ಡ್ ವ್ಯಕ್ತಿ. ಯಾವುದೇ ಸಮಸ್ಯೆಯನ್ನಾದರೂ ತುಂಬಾ ಆಳವಾಗಿ ಪರಾಮರ್ಶಿಸಿ ಯೋಚಿಸುವ ಅಪೂರ್ವವಾದ ಗುಣ ಇವರದ್ದು. ಸಾಮಾನ್ಯವಾಗಿ ಯಾರ ಸಂಗಡವೂ ಚರ್ಚೆಗಾಗಲೀ ಅನವಶ್ಯ ಮಾತುಕಥೆಗಳಿಗಾಗಲೀ ತಮ್ಮ ವೇಳೆ ಹಾಳು ಮಾಡದಂತಹ ಪ್ರವೃತ್ತಿ ಇಲ್ಲದವರು ಮತ್ತು ಈ ಕಾರಣದಿಂದ ರಿಸರ್ವ್ಡ್ ಎನ್ನುವ ಹಣೆಪಟ್ಟಿ ಇವರಿಗಿದೆ ! ಎಂಟು ವರ್ಷ ಇವರ ಸಂಗಡ ರಾತ್ರಿ ಷಿಫ್ಟಿನಲ್ಲಿ ಒಟ್ಟಿಗೇ ಕೆಲಸ ಮಾಡಿದ್ದೇನೆ. ಈ ಎಂಟು ವರ್ಷದಲ್ಲಿ ಇವರ ಸಂಗಡ ಒಟ್ಟಾರೆಯಾಗಿ ಎಂಟು ಪುಟದಷ್ಟೂ ಮಾತನ್ನು ಆಡಿದ್ದೆನೋ ಇಲ್ಲವೋ ! ಅಂತಹ ಸಜ್ಜನ ಈತ ಮತ್ತು ಮಿಕ್ಕವರ ಹಾಗೆ ಜೀವನ ನನಗೆ ಮೋಸ ಮಾಡಿದೆ, ನನಗೆ ಸಿಕ್ಕಬೇಕಾದ ಸ್ಥಾನಮಾನ ಸಿಕ್ಕಿಲ್ಲ, ವಿಧಿ ನನಗೆ ಕೈ ಕೊಟ್ಟಿದೆ-ಈ ರೀತಿಯ ಮನೋಭಾವವನ್ನು ಯಾರ ಹತ್ತಿರವೂ ಒಂದೇ ಒಂದು ಸಲವೂ ತೋರ್ಪಡಿಸಿಕೊಂಡವರೇ ಅಲ್ಲ.

ಇಂಥಹವರ ಹತ್ತಿರ ನನಗೆ ಮಾತುಕಥೆಯನ್ನು ಆಡಬೇಕು ಅಂದರೆ ಒಂದು ರೀತಿಯ ಆಸಕ್ತಿ, ಆಸಕ್ತಿ ಸಂಗಡ ಹೊಸಾ ವಿಷಯಗಳನ್ನು ತಿಳಿಯಬಹುದು ಮತ್ತು ಇವರು ಸಾಮಾನ್ಯ ಸಮಸ್ಯೆಗಳಿಗೆ ಯಾವ ರೀತಿಯಲ್ಲಿ ಯೋಚಿಸುತ್ತಾರೆ ಹಾಗೂ ಪರಿಹಾರಗಳನ್ನು ಹೇಗೆ ಕಂಡುಹಿಡಿದುಕೊಳ್ಳುತ್ತಾರೆ ಎಂದು ತಿಳಿಯುವ ಕುತೂಹಲ ಬೇರೆ ಇರುತ್ತದೆ.

ಆದರಿಂದ ರಾಮಕೃಷ್ಣ - ಇದು ನಾನು ಇಷ್ಟು ಹೊತ್ತೂ ಹೇಳಿದ ಸಂಪನ್ನಗುಣಗಳನ್ನು ಹೊಂದಿರುವ ವ್ಯಕ್ತಿಯ ಒಂದು ಪ್ರಾತಿನಿಧಿಕ ನಾಮಧೇಯ ಎಂದು ಇಟ್ಟುಕೊಳ್ಳಿ - ಅಂತಹವರು ಸಿಕ್ಕಿದಾಗ ವಿರಾಮ ಮಾಡಿಕೊಳ್ಳುತ್ತೇನೆ ಮತ್ತು ಆದಷ್ಟೂ ಅವರನ್ನು ಮಾತನಾಡಲು ಬಿಡುತ್ತೇನೆ. ಮಾತನಾಡುವ ನನ್ನ ಚಪಲವನ್ನು ತಡೆಹಿಡಿಯುತ್ತೇನೆ ಎಂದರೂ ಸರಿಯೇ !

ಮೊನ್ನೆ ರಾಮಕೃಷ್ಣ ಸಿಕ್ಕಿದಾಗ ಅವರ ಸಂಗಡ ಚಿಂತನ ಮಂಥನಕ್ಕೆ ಕೂತೆ. ಮಾಮೂಲಿನ ಹಾಗೆ ನೀವು ಯಾವಾಗ ಸಾರ್ ರಿಟೈರು ಅಂತ ಅವರು ಕೇಳಿದರು.

ಹೇಳಿದೆ.

ಹಾಗಿದ್ದರೆ ನಿಮಗಿಂತಲೂ ಮೊದಲೇ ನಾನು ರಿಟೈರು ಆಗ್ತಿನಿ ಅಂದರು ಅವರು.

ಅಯ್ಯೋ ಹೌದೇನ್ರೀ, ಯು ಲುಕ್ ಸೊ ಯಂಗ್ ಅಂದೆ. ವಯಸ್ಸಾಗಿರುವವರಿಗೆ ಲುಕ್ ಸೊ ಯಂಗ್ ಅಂದರೆ ಎಷ್ಟು ಖುಷಿ ಪಡ್ತಾರೆ ಅಂತೀರೀ. ರಾಮಕೃಷ್ಣ ನಿಜಕ್ಕೂ ಯಂಗ್ ಆಗಿಯೇ ಕಾಣುವಂತಹವರು. ಈ ಮಾತು ನಾನು ಬರೇ ಉಪಚಾರಕ್ಕೆ ಅವರಿಗೆ ಹೇಳಿರಲಿಲ್ಲ - ಹೃದಯದಿಂದ ಬಂದ ಮಾತು ಅದು.

ಹೌದು ಸಾರ್, ನನ್ನನ್ನು ಸ್ಕೂಲಿಗೆ ಸೇರಿಸಬೇಕಾದರೆ ಎರಡು ವರ್ಷ ನಾಲಕ್ಕು ತಿಂಗಳು ಹೆಚ್ಚಿಗೆ ಕೊಟ್ಟು ಸೇರಿಸಿದ್ದರಂತೆ.

ಛೇ.... ಹೌದೇನ್ರೀ, ಎರಡು ವರ್ಷ ನಾಲ್ಕು ತಿಂಗಳು ಅಂದರೆ ಏಳೆಂಟು ಲಕ್ಷ ಲಾಸಾಯಿತಲ್ಲಾ.... ಅಂತ ನನ್ನ ಸಿಂಪತಿ ತೋರಿಸಿದೆ.

ಹೆಚ್ಚಿರ್ತೋ ಸಂಬಳ ಸಾರಿಗೆ ನೆನೆಸಿಕೊಂಡರೆ ಲಾಸ್ ಆಗುತ್ತಿರುವ ಮೊತ್ತ ಕಡಿಮೆಯೇನಲ್ಲ. ನನಗೇನೂ ಅದರಿಂದ ಬೇಸರ ಇಲ್ಲ ಸಾರ್.... ಅಂದರು ರಾಮಕೃಷ್ಣ!

ಶಾಕ್ ಆಗಿದ್ದು ಈಗ ನನಗೆ.

ಯಾಕೆ ಅಪ್ಪ ಅಮ್ಮನ ಮೇಲೆ ಕೋಪ ಬರುಲ್ಲವಾ. ತಪ್ಪು ವಯಸ್ಸು ಕೊಟ್ಟು ನಿಮ್ಮ ಆದಾಯ ಕಡಿಮೆ ಆಗುವ ಹಾಗೆ ಮಾಡಿಬಿಟ್ಟರು ಅಂತ? ಸುಮಾರು ಸುಮಾರೇನು, ತಪ್ಪು ವಯಸ್ಸು ರೆಕಾರ್ಡ್ ಆಗಿರುವ ಎಲ್ಲರೂ ಅಪ್ಪ ಅಮ್ಮನ್ನೋ ಅಥವಾ ಈ ರೀತಿ ತಪ್ಪು ವಯಸ್ಸು ಕೊಟ್ಟಿರ್ತೋ ಅಣ್ಣಂದಿರನ್ನ ಹಿಡಿ ಶಾಪ ಹಾಕ್ತಾರಲ್ಲಾ?....

ಸಾರ್ ಒಂದು ಹೇಳಲಾ? ನನ್ನ ಹಣೇಲಿ ಏನು ಬರೆದಿದೆಯೋ, ನನಗೆ ಅದೇನು ಲಭ್ಯ ಇದೆಯೋ ಅದೇ ನನಗೆ ಸಿಗೋದೂ... ಇದೇ ನಾನು ಮೊದಲಿಂದಲೂ ನಂಬಿ ಬಂದಿರೋದೂ... ಅದೂ ಅಲ್ಲದೇ ಈ ರೀತಿ ಸಮಸ್ಯೆಯನ್ನ ನಾವು ಬೇರೆ ಆ್ಯಂಗಲ್ ನಿಂದಲೂ ನೋಡಬಹುದು ಗೊತ್ತಾ?

ನನಗೆ ಆಸಕ್ತಿ ಕುದುರೋದು ಇಂಥಹ ಸನ್ನಿವೇಶದಲ್ಲಿ, ಮೋಸವಾಗಿರುವದನ್ನು ಸಹಜ ಅನ್ನುವ ಹಾಗೆ ಒಪ್ಪಿಕೊಳ್ಳುವುದರ ಜತೆಗೆ ಬೇರೆ ಕೋನ ಇದೆ ಅದರಿಂದ ನೋಡಬೇಕು ಅಂದರೆ ಕುತೂಹಲ ಹುಟ್ಟುಲ್ಲವೇ? ಆಶ್ಚರ್ಯದಿಂದ ಅವರ ಮುಖ ನೋಡಿದೆ.

ಯಾವುದು ರಾಮಕೃಷ್ಣ ಬೇರೆ ಆ್ಯಂಗಲ್ಲು...? ಅಂದೆ.


ಸಾರ್ ಎರಡು ವರ್ಷ ನಾಲಕ್ಕು ತಿಂಗಳು ಹೆಚ್ಚಿಗೆ ವಯಸ್ಸು ಕೊಟ್ಟಿದ್ದರಿಂದ ಆದ ಅನುಕೂಲ ಲೆಕ್ಕಕ್ಕೆ ತಗೊಳ್ಳಿ- ಎರಡು ವರ್ಷ ನಾಲಕ್ಕು ತಿಂಗಳು ಮೊದಲು ಕೆಲಸಕ್ಕೆ ಸೇರಲಿಲ್ಲವಾ? ಸಂಬಳ ತಗೊಳ್ಳೋದಿಕ್ಕೆ ಅರ್ಹತೆಯೇ ಇಲ್ಲದಿರಬೇಕಾದರೆ ಕಾಸು ಎಣಿಸಲಿಲ್ಲವಾ? ಅವಾಗ ಯಾತಕ್ಕೆ ನನಗೆ ಕೊರಗು ಹುಟ್ಟಲಿಲ್ಲ? ಹೆಚ್ಚಿಗೆ ವಯಸ್ಸು ಕೊಟ್ಟಿದ್ದು ಈಗ ಮೋಸ ಅನ್ನುವ ಹಾಗಿದ್ದರೆ ಅವಾಗ ಎರಡು ವರ್ಷ ನಾಲಕ್ಕು ತಿಂಗಳು ಬೇಗ ಕೆಲಸಕ್ಕೆ ಸೇರಿ ಸಂಬಳ ತಗೊಂಡಿದ್ದೂ ಮೋಸವೇ ಆಗಬೇಕಲ್ಲವಾ.......?

ರಾಮಕೃಷ್ಣ ನ ಯೋಚನೆ ಇದೇ ಧಾಟಿಯಲ್ಲಿ ಸುಮಾರು ಹೊತ್ತು ನಡೀತು.

ಎದ್ದುನಿಂತೆ. ರಾಮಕೃಷ್ಣ, ಥ್ಯಾಂಕ್ಯೂ ವೆರಿಮಚ್. ಈ ದೃಷ್ಟಿಯಲ್ಲಿ ಯೋಚಿಸಬಹುದು ಅಂತ ನನಗೆ ಈ ವರೆಗೂ ಹೊಳೆದೇ ಇರಲಿಲ್ಲ ಅಂದೆ.

ಇಂಥಹವರ ಪೀಳಿಗೆ ಬೆಳೆಯಲಿ ಅಂತ ಮನಸಿನಲ್ಲಿಯೇ ಹಾರೈಸಿದೆ !

ಮೋಸಕ್ಕೆ ಹೊಸಾ ಅರ್ಥವೋ ಅಥವಾ ಸಂತೃಪ್ತಿಯೋ? ಇನ್ನೂ ಗೊಂದಲದಲ್ಲಿಯೇ ಇದ್ದೇನೆ !



"ಒಂದು ವೇಳೆ ನಾವು ಯುದ್ಧದಲ್ಲಿ ಸೋತ್ರೂ ಅವರ ಪತ್ರ ವ್ಯವಹಾರ ನಡಿಸ್ಲೇಬೇಕು. ಸ್ವಲ್ಪ ಹುಷಾರಾಗಿ ಯುದ್ಧ ಮಾಡಿ"

# ಕಾಫಿಹೌಸ್

ಎಲ್ಲ ಕಡೆಯೂ ಈಚೆಗೆ ರಾಜು ಸಮಾಚಾರನೇ. ರಾಜು ಸಮಾಚಾರ ಸ್ವಲ್ಪ ಆ ಕಡೆ ಈ ಕಡೆ ಹೋಯ್ತು ಅನ್ನೋ ಹೊತ್ತಿಗೆ ಬಂತು ಹರಾಜು. ಒಂದೊಂದು ಸಾರಿ ಕುರಿ ಹರಾಜಿಗೂ ಈ ಹರಾಜಿಗೂ ಏನು ವ್ಯತ್ಯಾಸ ಅನಿಸಿಬಿಡುತ್ತೆ. ಈಗೊಂದು ವಾರದಿಂದ ಐಪಿಎಲ್ ಕ್ರಿಕೆಟ್ (ಕಿರಿ ಕೆಟ್ಟು) ಟೂರ್ನಿಗೆ ಆಟಗಾರರನ್ನು ಹರಾಜು ಹಾಕಲಾಯಿತು. ಮೊದಲಿಂದಲೂ ಕ್ರಿಕೆಟ್ ಆಟಕ್ಕೂ ಸಿನಿಮಾ ತಾರೆಯರಿಗೂ ಅದೇನೋ ಅವಿನಾಭಾವ ಸಂಬಂಧ. ಹೀಗಾಗಿ ಹರಾಜಾಗುವ ಆಟಗಾರರನ್ನು ನಮ್ಮ ಅನೇಕ ನಟೀ ಮಣಿಗಳು ಕೊಂಡುಕೊಳ್ಳುತ್ತಾರೆ. ಕೊಂಡುಕೊಂಡು ಕೊಂಡುಕೊಂಡೇನ್, ಕೊಂಡುಕೊಂಡೇನ್ ಅಂತ ಹಾಡುತ್ತಾರೆ. ಪಾಪ ಸತ್ಯಂ ಕಂಪನಿಯನ್ನು ಕೊಳ್ಳಲು ಪ್ರಯತ್ನ ನಡೆಯುತ್ತಿರುವ ಹಾಗೆ ರಾಮಲಿಂಗರಾಜುವನ್ನೂ ಯಾರಾದರೂ ಕೊಂಡರೆ ಪಾಪ ಜೈಲಿನಿಂದ ಹೊರಬರಬಹುದೇನೋ. ಹಾಗೆ ಆಗಬೇಕಾದರೆ ಸತ್ಯ ಹರಿಶ್ಚಂದ್ರನನ್ನು ಕೊಂಡ ಹಾಗೆ ಇನ್ನೊಬ್ಬ ವೀರಬಾಹು ಬರಬೇಕೇನೋ. ಅಂತೂ ಈಗ ಎಲ್ಲೆಲ್ಲೂ ಎರಡೇ ಸುದ್ದಿ ಒಂದು ರಾಜು ಇನ್ನೊಂದು ಹರಾಜು.

**- ಬೇಲೂರು ರಾಮಮೂರ್ತಿ**

ನಮ್ಮ ಕ್ರಿಕೆಟಿಗರು ಕೋಟಿಕೋಟಿಗೆ ಹರಾಜು ಆಗ್ತಿದಾರಲ್ಲಾ ಈ ಸುದ್ದಿಯನ್ನು ಪೇಪರಿನಲ್ಲಿ ಓದಬೇಕಾದರೆ ಅಥವಾ ದೂರದರ್ಶನದಲ್ಲಿ ನೋಡಬೇಕಾದರೆ ನಾವು ತುಂಬಾ ಚಿಕ್ಕವರಿದ್ದಾಗ ನಮ್ಮ ಸಂತೆಯಲ್ಲಿ ನಮ್ಮ ಕಣ್ಣೆದುರು ನಡೆಯುತ್ತಿದ್ದ ಕುರಿ ಹರಾಜು ನೆನಪಿಗೆ ಬರುತ್ತೆ. ಹರಾಜು ಹಾಕುತ್ತಿದ್ದವನು ಕುರಿಯನ್ನು ಜನರ ಗುಂಪಿನ ಮುಂದೆ ತರುತ್ತಿದ್ದ ಮತ್ತು ಅದನ್ನು ವರ್ಣಿಸುತ್ತಿದ್ದ. ಈ ಕುರಿ ತೂಕ ಇಷ್ಟು, ಇದರ ತಲೆ ದಪ್ಪ ಇಷ್ಟು, ಇದರ ತೊಡೆ ನೋಡಿ ಹೀಗಿದೆ.... ಅಂತ ಕುರಿಯ ಪ್ರತಿಯೊಂದು ಭಾಗವನ್ನೂ ನೆರೆದವರಿಗೆ ವಿವರಿಸುತ್ತಿದ್ದ. ಹರಾಜಿನಲ್ಲಿ ಭಾಗವಹಿಸಲು ನೆರೆದವರು ಕುರಿಯನ್ನು ಹಿಂಡಿ ಹಿಸುಕಿ ಅದರ ಮೌಲ್ಯವನ್ನು ನಿರ್ಧಾರ ಮಾಡುತ್ತಿದ್ದರು. ನಂತರ ಹರಾಜು ನಡೀತಿತ್ತು. ಸತ್ಯ ಹರಿಶ್ಚಂದ್ರ ಸಿನಿಮಾದಲ್ಲಿ ಹರಿಶ್ಚಂದ್ರ ಅವನ ರಾಣಿ ಚಂದ್ರಮತಿಯನ್ನು ಹರಾಜಿಸುವ ದೃಶ್ಯವನ್ನು ನೋಡುವಾಗೆಲ್ಲಾ ನನಗೆ ಈ ಕುರಿ ಹರಾಜಿನ ನೆನಪು ಒತ್ತರಿಸಿಕೊಂಡು ಬರುತಿತ್ತು. ಈಗ ನಮ್ಮ ಕ್ರಿಕೆಟಿಗರು ಹರಾಜು ಆಗುತ್ತಿರಬೇಕಾದರೆ ನನಗೆ ಈ ಎರಡೂ ದೃಶ್ಯಗಳು ಒಟ್ಟೊಟ್ಟಿಗೆ ನೆನಪಿಗೆ ಒದ್ದುಕೊಂಡು ಬರ್ತಿವೆ. ಆಟಗಾರನ ತೂಕ ಇಷ್ಟು, ಇದರ ತಲೆ ದಪ್ಪ ಇಷ್ಟು, ಇದರ ತೊಡೆ ನೋಡಿ ಹೀಗಿದೆ.... ಅಂತ ನಮ್ಮ ಮಾಧ್ಯಮಗಳೂ ಸಚಿತ್ತಾಗಿಯೇ ಬಿಂಬಿಸುತ್ತವೆ. ಆಟದ ಪಾವಿತ್ರ್ಯತೆ ಇದರಿಂದ ಹಾಳಾಯಿತು, ಆಟಗಾರರ ಮೊರೇಲ್ ಹೋಯಿತು, ಹುಡುಗರು ದುಡ್ಡಿಗೋಸ್ಕರ ಆಡುತ್ತಾರೆ ಆಟದಲ್ಲಿ ಆಸಕ್ತಿ ಇದರಿಂದ ಕುಂದು ಹೋಗುತ್ತದೆ ಅಂತ ಕೆಲವರು-ಆದರಲ್ಲೂ ನಮ್ಮ ಹಿರಿಯ ತಲೆಗಳು - ಪೇಚಾಡಿ ಒದ್ದಾಡಿಕೊಳ್ಳುತ್ತವೆ. ಆದರೂ ಪೈಪೋಟಿ ಪ್ರಪಂಚದಲ್ಲಿ ಬದುಕಬೇಕಾದರೆ ಯಾವುದಾದರೂ ಗಿಮಿಕ್ಸು ಬೇಕಲ್ಲವೇ ಅಂತ

ನಮ್ಮನ್ನ ನಾವೇ ಹಾಗೂ ನಮ್ಮ ಪಿರಿತಲೆಗಳನ್ನೂ ಸಮಾಧಾನ ಪಡಿಸಿಕೊಳ್ಳಬೇಕಿದೆ. ದೇಶದಲ್ಲಿ ಎರಡು ಲಕ್ಷ ಹುಡುಗರಾದರೂ ತುಂಬಾ ಸೀರಿಯಸ್ಸಾಗಿ ಕ್ರಿಕೆಟ್ಟನ್ನ ಆಡ್ತಾ ಇದಾರೆ ಅಂತ ಒಂದು ಅಂದಾಜು ಇಟ್ಟುಕೊಂಡರೆ ಅವರಲ್ಲಿ ಹದಿನೈದು ಮಂದಿಗೋ ಇಪ್ಪತ್ತು ಮಂದಿಗೋ ಈ ಅವಕಾಶ ಸಿಗುತ್ತಲ್ಲಾ ಅಂತ ಸಮಾಧಾನ ಪಟ್ಟುಕೋಬೇಕಿದೆ! ಆಫ್ಟರ್ ಆಲ್ ನಾವು ಹುಲು ಮಾನವರು ಇನ್ನೇನು ತಾನೇ ಮಾಡಲು ಸಾಧ್ಯ ಅಲ್ಲವೇ!

**- ಎಚ್. ಗೋಪಾಲಕೃಷ್ಣ**

ಒಂದಾನೊಂದು ಕಾಲದಲ್ಲಿ ಗುಲಾಮರನ್ನು ಹರಾಜು ಮಾಡುತ್ತಿದ್ದರು. ಅವರ ಅಂಗಸೌಷ್ಠವನ್ನು ಅಳೆದು ಅದಕ್ಕೆ ತಕ್ಕ ಸಂಭಾವನೆಯನ್ನು ಅವನಿಗಲ್ಲ, ಅವನನ್ನು ಮಾರಿದವನಿಗೆ, ನೀಡಿದ ಮಂದಿ ಆ ಗುಲಾಮರಿಂದ ಹೆಡೆಮುರಿ ದುಡಿಸಿಕೊಳ್ಳುತ್ತಿದ್ದರು. ಈಗ ಗ್ಲೋಬಲೈಸೇಷನ್ ಕಾಲ. ಈಗ ನಡೆಯುವ ಹರಾಜುಗಳೇ ಬೇರೆ. ಇದರಲ್ಲಿ ಭಾಗವಹಿಸುವವರು ಐಷಾರಾಮ/ರಾಮಿಯರು. ಹರಾಜುಗೊಳ್ಳುವವರು ಗುಲಾಮರಲ್ಲ ಕ್ರಿಕೆಟಿಗರು. ಇವರು ಹರಾಜಿಗೆ ಬಂದು ನಿಲ್ಲಬೇಕಿಲ್ಲ, ಅಂಗಸೌಷ್ಠವ ಪ್ರದರ್ಶಿಸಬೇಕಿಲ್ಲ. ಜೂಜಿನ ಕುದುರೆಯ ಜಾತಕವನ್ನು ಕೂಲಂಕಷವಾಗಿ ಪರಿಶೀಲಿಸಿ ಹಣ ಹೂಡುವಂತೆ ಈ ಮಂದಿಯ ಹಿಂದಿನ ಸ್ಕೋರ್ ಕಾರ್ಡ್ ನೋಡಿ ಬಿಕರಿ ಮಾಡಲು ಐಷಾರಾಮ/ರಾಮಿಯರು ಕ್ಯಾಷ್ ತರದೆ ಚೆಕ್ ಪುಸ್ತಕವನ್ನೇ ತಂದಿರುತ್ತಾರೆ. ಈ ಲಿಲಾವು ನೋಡಿದಾಗ ನಮಗೆ ಕರ್ಮ ಸಿದ್ಧಾಂತದ ಮೇಲೆ ನಂಬಿಕೆ ಖಂಡಿತ ಹುಟ್ಟುತ್ತದೆ. ಅದರ ಪ್ರಕಾರ ಹಿಂದಿನ ಜನ್ಮದಲ್ಲಿ ಪುಣ್ಯ ಮಾಡಿದ್ದರೆ ಈ ಜನ್ಮದಲ್ಲಿ ಪ್ರತಿಫಲ ಗ್ಯಾರಂಟಿ. ಈ ಜನ್ಮದಲ್ಲಿ ಪುಣ್ಯ ಮಾಡಿದರೆ ಮುಂದಿನ ಜನ್ಮದಲ್ಲಿ ಪ್ರತಿಫಲ ಅಶ್ಯೂರ್ಡ್. ಅದರಂತೆ, ನೀವು ಐದು ದಿನ/ಒಂದು ದಿನದ ಪಂದ್ಯದಲ್ಲಿ ಬರೋಬ್ಬರು ಆಡಿದ್ದರೆ ಈ 20-20 ಎಂಬ ಬಿಕನಿ ಕ್ರಿಕೆಟ್ಟಿನಲ್ಲಿ ಹಣದ ಮೂಟೆ ಖಂಡಿತ. ಈ ಬಿ.ಕ್ರಿ. ಎಂಬ ಕ್ರಿಕೆಟೇನ್ಮೆಂಟಿನಲ್ಲಿ (ಕ್ರಿಕೆಟ್ + ಎಂಟರಟೇನ್ಮೆಂಟ್) ಒಂದೆರಡು ತಾಸು ದಾಂಡು ಬೀಸಿ, ಗೇಂದು ಎಸೆದು/ಹಿಡಿದರೆ ಸಾಕು. ವರ್ಕ್ ಲೆಸ್ ಅರ್ನ್ ಮೋರ್ ಎಂಬ ರಾಜಕಾರಣದ ನೀತಿ ಸೂತ್ರವೇ ಇಲ್ಲೂ ಜಾರಿ. ಹಾಗೇ, ದುಡಿಮೆಗೆ (ತಕ್ಕ) ಪ್ರತಿಫಲ ಅನೇಕ ವೇಳೆ ತಂಡದ ಮಾಲೀಕನ ಸ್ವಪ್ರತಿಷ್ಠೆಯನ್ನೂ ಅವಲಂಬಿಸಿರುತ್ತದೆ. ಬೇಕಿದ್ದರೆ ಕೆ.ಪಿ. ಯನ್ನು ಕೇಳಿ ನೋಡಿ. ನಾನು ಆಪಾಟಿ ಪುಣ್ಯ ಮಾಡಿದ್ದೇನೆಯೇ? ಎಂದು ಆತ ಹಲುಬಿದನಂತೆ ತಾನು ಬಿಕರಿಗೊಂಡ ರೇಟ್ ನೋಡಿ. (ವಿಜಯ) ದೇವರು ಮನಸ್ಸು ಮಾಡಿದರೆ ಎಲ್ಲವೂ ಸಾಧ್ಯ.

PS: ಕೆಪೀಗೆ ಕೊಡುವ ದುಡ್ಡಿನಲ್ಲಿ ಅದೆಷ್ಟು ಸೋರುವ ಶಾಲೆಗಳಿಗೆ ವಿಜಯದೇವರು ಹೆಂಚು ಹಾಕಿಸಿ, ಒದ್ದೆಯ ನೆಲದ ಮೇಲೆ ಕೂರುವ ಮಕ್ಕಳನ್ನು ಬೆಂಚುಗಳ ಮೇಲೆ ಕೂರಿಸಬಹುದಿತ್ತೊ? ಬಟ್ ಕಿಡ್ಸ್ ಕೆನ್ ವೇಟ್, ನೊ?

**- ಆನಂದ**

**ಪಡುಕೋಣೆ ರಮಾನಂದರಾವ್ ಸ್ಮಾರಕ ಹಾಸ್ಯಲೇಖನ ಸ್ಪರ್ಧೆ(2008)ಯಲ್ಲಿ ತೃತೀಯ ಬಹುಮಾನ ಪಡೆದ ಲೇಖನ**

# ಮಕ್ಕಳಿದ್ದಾರೆ ಎಚ್ಚರಿಕೆ

**- ಮುಳಿಯ ಸರಸ್ವತಿ**

ಭಾರತೀಯರಾದ ನಮಗೆ ಮಕ್ಕಳು ದೇವರ ಸಮಾನ. ನಮ್ಮ ಪೂರ್ವಿಕರು ತಮಗೆ ಮಕ್ಕಳ ಮೇಲಿದ್ದ ಪ್ರೀತಿಯನ್ನು ಅನೇಕ ಗೀತೆಗಳಲ್ಲಿ ಹಾಡಿ ತೋರಿಸಿದ್ದಾರೆ. 'ಅತ್ತರೆ ಅಳಲವ್ವ, ಈ ಕೂಸು ನನಗಿರಲಿ, ಕೆಟ್ಟರೆ ಕೆಡಲಿ ಮನೆಗೆಲಸ..." ಎಂಬ ಜಾನಪದ ಗೀತೆಯನ್ನು ಕೇಳದವರಾರು? 'ಆಳುವ ಕಂದನ ತುಟಿಯು ಹವಳದ ಕುಡಿ ಹಾಂಗೆ, ಕುಡಿಹುಬ್ಬು ಬೇವಿನೆಸಳ್ಹಾಂಗೆ, ಕಣ್ಣೋಟ ಶಿವನ ಕೈಯಲಗು ಹೊಳೆದ್ಹಾಂಗೆ' ಎಂದು ಆಳುತ್ತಿರುವ ಮಗುವಿನ ವರ್ಣನೆ ಮಾಡುತ್ತಾ ಇನ್ನಷ್ಟು ಮುದ್ದುಗರೆಯುತ್ತಾರೆ. ಹಸುಗೂಸುಗಳು ಏನು ಮಾಡಿದರೂ ಚೆಂದ. ಅತ್ತರೂ ಚೆಂದ, ನಕ್ಕರೂ ಚೆಂದ. ಮನೆಯಲ್ಲಿ ಮಕ್ಕಳಿದ್ದರೆ ಚೆಂದ. ಚೆಂದವೇನೋ ನಿಜ. ಆದರೆ ಚೆಂದ ಎಂದು ಮಕ್ಕಳ ಸಂಖ್ಯೆ ಮಿತಿ ಮೀರಿದರೆ ಕಷ್ಟವೆಂಬುದೂ ನಿಜವೇ. 'ಮಕ್ಕಳಿರಲವ್ವ ಮನೆತುಂಬ' ಎನ್ನುವ ಮನೋಭಾವದಿಂದಲೇ ನಮ್ಮ ದೇಶದ ಜನಸಂಖ್ಯೆ ಏರುತ್ತಲೇ ಇರುವುದು. 'ಚಿಕ್ಕ ಸಂಸಾರ, ಚೊಕ್ಕ ಸಂಸಾರ', 'ಆರತಿಗೊಬ್ಬ ಮಗಳು, ಕೀರುತಿಗೊಬ್ಬ ಮಗ' ಎಂದು ಮುಂತಾದ ಸ್ಲೋಗನ್ನುಗಳೊಡನೆ ನಡೆಸುತ್ತಿರುವ ಕುಟುಂಬ ಯೋಜನೆ ಕೈಕೊಟ್ಟಿದ್ದು, ಸದ್ಯದಲ್ಲಿಯೇ ನಾವು ಜನಸಂಖ್ಯೆಯಲ್ಲಿ ಚೀನಾ ದೇಶವನ್ನು ಹಿಂದೆ ಹಾಕಲಿದ್ದೇವಂತೆ!

ಇದೇನ್ರೀ ನೀವು ಶೀರ್ಷಿಕೆಯನ್ನು ಮರೆತು ಕುಟುಂಬ ಯೋಜನೆಯ ಬಗ್ಗೆ ತಿಳಿಸುತ್ತಿದ್ದೀರಾ? ಇದು ಹಳೆಯ ಮಾತಾಯಿತಲ್ಲ? ಎಂದು ಓದುವುದನ್ನು ಮಾತ್ರ ನಿಲ್ಲಿಸಬೇಡಿ. ಚಿಕ್ಕ ಮಕ್ಕಳು ಹತ್ತಿರದಲ್ಲಿದ್ದರಂತೂ ಎಚ್ಚರಿಕೆಯಿರಲಿ. ನಾನು ಈ ಮಾತನ್ನು ಸುಮ್ಮನೆ ಹೇಳುವುದಲ್ಲ. ಈ ಮುನ್ಸೂಚನೆಗೆ ಬಲವಾದ ಕಾರಣವಿದೆ.

ಮಕ್ಕಳು ನಮ್ಮನ್ನು ತಮ್ಮ ಮಾತಿನಿಂದ, ವರ್ತನೆಯಿಂದ, ತುಂಟಾಟಗಳಿಂದ ತುಂಬಾ ಸಂತೋಷಪಡಿಸುತ್ತಾರೆ ಎಂಬುದು ನಿರ್ವಿವಾದವಾಗಿದೆ ನಿಜ. ಆದರೆ ಹಾಗೆಯೇ ನಮ್ಮನ್ನು ಎಷ್ಟೋ ಸಲ ಪೇಚಿಗೆ ಸಿಕ್ಕಿಸುತ್ತಾರೆಂಬುದೂ ಅಷ್ಟೇ ಸತ್ಯ. ಇದಕ್ಕೆ ನಮ್ಮ ಸಾಹಿತ್ಯದಲ್ಲಿ, ಪುರಾಣಗಳಲ್ಲಿ ಬೇಕಾದಷ್ಟು ನಿದರ್ಶನಗಳಿವೆ. ಹಾಸ್ಯಲೇಖಕ ಬೀChiಯವರ 'ತಿಂಮನ ತಲೆ' ಪುಸ್ತಕದಲ್ಲಿ ಬರುವ ಒಂದು ಸನ್ನಿವೇಶ. ಒಮ್ಮೆ ತಿಂಮ ಮನೆಗೆ ಬಂದ ಅತಿಥಿಗಳ ಮುಂದೆಯೇ ಅಪ್ಪನನ್ನು ಕೇಳುತ್ತಾನೆ. "ಅಪ್ಪಾ ನೀವು ಇವರ (ಅತಿಥಿಗಳನ್ನು ತೋರಿಸಿ) ಮೂಗಿನ ವಿಷಯ ಮಾತಾಡಬೇಡ ಎಂದು ಹೇಳಿದ್ದೀರಿ ಸರಿ. ಆದರೆ ಇವರಿಗೆ ಮೂಗೇ

ಇಲ್ಲವಲ್ಲ. ಅದು ಹೇಗೆ ನಾನು ಇವರ ಮೂಗಿನ ವಿಷಯ ಮಾತಾಡುವುದು?'' ಎಂದು ಕೇಳಿದಾಗ 'ಜಾಣ' ತಂದೆ ಮಗನಿಗೆ ಮೊದಲೇ ಎಚ್ಚರಿಕೆ ಕೊಟ್ಟೂ ಕೂಡ ತಲೆ ತಗ್ಗಿಸುವಂತಾಗಲಿಲ್ಲವೇ? ಇನ್ನು ನಮ್ಮ ಕೋಟ್ಯಾನುಕೋಟಿ ದೇವರುಗಳಲ್ಲಿ ಒಬ್ಬನಾದ ಶ್ರೀಕೃಷ್ಣನ ಬಾಲ ಲೀಲೆಗಳ ಮಹಿಮೆ ಎಲ್ಲರಿಗೂ ಚಿರಪರಿಚಿತ. ಆದರೆ ಅವನ ಪಾಲಕರಾಗಿದ್ದ ಯಶೋದೆ, ನಂದಗೋಪರಿಗೆ ಎಷ್ಟು ಫಜೀತಿ ಆಗಿರಲಿಕ್ಕಿಲ್ಲ! ಒಮ್ಮೆ ಬೆಣ್ಣೆ ಕದ್ದ, ಮತ್ತೊಮ್ಮೆ ಮೊಸರಿನ ಗಡಿಗೆ ಒಡೆದ, ಮಗದೊಮ್ಮೆ ದಾರಿಯಲ್ಲಿ ಗೋಪಿಯರನ್ನು ಅಡ್ಡಗಟ್ಟಿದ – ಹೀಗೆ ಯಶೋದೆಗಂತೂ ದಿನಾ ಅಕ್ಕಪಕ್ಕದ ಮನೆಯವರ ದೂರು ಕೇಳಿ ಕೇಳಿ ಸಾಕಾಗಿ ಹೋಗಿತ್ತು. ಗೋಪಿಕೆಯರ ಸೀರೆಗಳನ್ನು ಕದ್ದು ಮರವೇರಿದ ಬಾಲಕ, ಕಾಳಿಂಗನ ಹೆಡೆಯೇರಿ ನರ್ತಿಸಿದ ಬಾಲಕೃಷ್ಣ, ಹೀಗೆ ಅವನ ಲೀಲೆಗಳಿಗೆ ಕೊನೆಮೊದಲಿರಲಿಲ್ಲ. 'ಮಣ್ಣು ತಿಂದ ಕೃಷ್ಣ' ಎಂದು ಗೋಪಿಯರು ದೂರು ತಂದಾಗಲಂತೂ ಕೋಪದಿಂದ ಕೃಷ್ಣನ ಬಾಯಿ ತೆರೆಸಿ ನೋಡಿದಳು ಯಶೋದೆ. ಅಲ್ಲಿ ಕಂಡದ್ದೇನು? ಅಚರಾಚರ ಸಕಲ ಬ್ರಹ್ಮಾಂಡವನ್ನೇ ತಾಯಿಗೆ ತೋರಿದ ಶ್ರೀಕೃಷ್ಣ, ಆ ವಿಶ್ವರೂಪ ದರ್ಶನದಿಂದ ಯಶೋದೆ ಕೃತಾರ್ಥಳಾದಳು ಎನ್ನುವುದು ಬೇರೆ ವಿಷಯ ಬಿಡಿ.

ಇವೆಲ್ಲ ಕಟ್ಟುಕತೆ ಎಂದು ಕೆಲವರು ಮೂಗು ಮುರಿಯಬಹುದು. ಆದರೆ ನಾವು ನಮ್ಮ ಮಕ್ಕಳ 'ಲೀಲೆ'ಗಳಿಗೆ ಹೆದರಬೇಕಾಗಿದೆ! ಮಕ್ಕಳ 'ಜಾಣತನ'ದ ಅನುಭವ ನಮಗೂ ಆಗಿದೆ, ನಿಮಗೂ ಆಗಿರಬಹುದು.

ಒಂದು ದಿವಸ ಇವರಿಗೆ ಮನೆಯಲ್ಲಿ ಯಾವುದೋ ಅರ್ಜೆಂಟ್ ಕೆಲಸವಿದ್ದ ಕಾರಣದಿಂದ ಆಫೀಸಿಗೆ ಕೆಲಸಕ್ಕೆ ಹೋಗಲಾಗಲಿಲ್ಲ. ಏನೋ ಕಾರಣ ಕೊಟ್ಟು ರಜೆ ಹಾಕಿದ್ದರು. ಇವರ ಮೇಲಧಿಕಾರಿಯ ಹೆಂಡತಿ ಪಂಕಜಮ್ಮ ನಮ್ಮ ಮನೆಗೆ ಅಂದೇ ಬರಬೇಕೆ! ಬಂದವರನ್ನು ಸ್ವಾಗತಿಸಿ ಒಳಗೆ ಆರಾಮಾಸನದಲ್ಲಿ ಕುಳ್ಳಿರಿಸಿದ ಮೇಲೆ ಇವರು ನನ್ನನ್ನು ಕರೆದರು. ಅಡುಗೆ ಮನೆಯಲ್ಲಿದ್ದ ನಾನು ಹೊರಗೆ ಬಂದೆ. ಉಭಯ ಕುಶಲೋಪರಿ, ಅದೂ ಇದೂ ಮಾತು ಎಲ್ಲ ಆದ ಮೇಲೆ ಪಂಕಜಮ್ಮ ''ಅಲ್ರೀ, ನಿಮ್ಮ ಯಜಮಾನರಿಗೆ ಆರೋಗ್ಯ ಚೆನ್ನಾಗಿರ್ಲಿಲ್ಲ ಅಂತೆ. ಇವತ್ತು ಆಫೀಸಿಗೆ ಬರ್ಲಿಲ್ಲ, ಸ್ವಲ್ಪ ಹೋಗಿ ನೋಡಿಕೊಂಡು ಬಾ ಎಂದು ನಮ್ಮವರೇ ಹೇಳಿದ್ರು. ಈಗ ಹೇಗಿದ್ದಾರೆ?'' ಎಂದು ಕೇಳಿದರು.

ಕೂಡಲೇ ಏನು ಹೇಳಲೂ ನನಗೆ ತೋಚಲಿಲ್ಲ. 'ಹೌದು. ಅವರಿಗೆ ಹೊಟ್ಟೆ ಸ್ವಲ್ಪ ಸರಿ ಇರಲಿಲ್ಲ, ಔಷಧ ತೆಗೆದುಕೊಂಡಿದ್ದಾರೆ. ಈಗ ಪರವಾಯಿಲ್ಲ ಸ್ವಲ್ಪ ವಾಸಿ'' ಎಂದೆ. ನಾನು ಮತ್ತು 'ಮೇಲಧಿಕಾರಿಣಿ' ಮಾತಾಡುತ್ತಿದ್ದಾಗ ನಮ್ಮ ಮಗ ಹತ್ತಿರದಲ್ಲೇ ಕುಳಿತು ಶಾಲೆಯಲ್ಲಿ ಕೊಟ್ಟ ಹೋಂ ವರ್ಕ್ ಮಾಡುತ್ತಿದ್ದ. ಥಟ್ಟನೆ ''ಯಾಕಮ್ಮ ಸುಳ್ಳು ಹೇಳ್ತಾ ಇದ್ದಿ? ಸುಳ್ಳು ಹೇಳಬಾರದು ಎಂದು ನೀನೇ ಹೇಳ್ತೀಯಾ. ಅಪ್ಪ ಚೆನ್ನಾಗಿಯೇ ಇದ್ದಾರೆ. ನೀನೇ ಅಪ್ಪನನ್ನು ಆಫೀಸಿಗೆ ರಜೆ ಹಾಕ್ಸಿ ಬ್ಯಾಂಕ್‌ಗೆ ಕಳ್ಸಿದ್ದಲ್ವಾ'' ಎನ್ನಬೇಕೆ!

''ಏ ತಲೆ ಹರಟೆ, ನಿನ್ಗೇನು ಗೊತ್ತು. ಅವರಿಗೆ ಅಜೀರ್ಣ ಆಗಿತ್ತು. ಹೋಗಿ ನೀನೇ ಅಪ್ಪನ್ನ ಕೇಳು ಬೇಕಾದ್ರೆ. ಬ್ಯಾಂಕ್ ನಮ್ಮ ಮನೆ ಹತ್ತಿರವೇ ಇದೆಯಲ್ಲಾ. ಅರ್ಜೆಂಟ್ ಇತ್ತು. ಹಾಗಾಗಿ

ಹೋಗಿ ಬಂದ್ರು ಅಷ್ಟೆ' ಎಂದು ಏನೋ ಸಬೂಬು ಹೇಳಿ ಅವನನ್ನು ಬಯ್ದು ಸುಮ್ಮನಾಗಿಸಬೇಕಾಯಿತು.

''ಸರಿ ಬಿಡಿ, ಇವನಿಗೇನು ಗೊತ್ತಾಗುತ್ತದೆ?'' ಎನ್ನುತ್ತಾ ಪಂಕಜಮ್ಮ ಮಾತು ಮರೆಸಿದರು.

ಇದೇ ಕಾರಣಕ್ಕೆ ನಾನು ಹೇಳುವುದು, ಮಕ್ಕಳು ಹತ್ತಿರದಲ್ಲಿರುವಾಗ ಆದಷ್ಟು ಜಾಗ್ರತೆಯಿಂದ ಇರಿ ಎಂದು.

ಇನ್ನೊಮ್ಮೆ ನೋಡಿ, ನನ್ನ ಮಗಳು ಚಿಕ್ಕವಳಿದ್ದಾಗ (ಆಗ ಅವಳು 6-7 ವರ್ಷದ ಹುಡುಗಿ ಇದ್ದಿರಬಹುದು) ಡ್ರೆಸ್ ಖರೀದಿ ಮಾಡಲು ಅಂಗಡಿಗೆ ಹೋಗಿದ್ದೆವು. ಅವಳು ಒಂದು ಒಳ್ಳೆಯ ಡ್ರೆಸ್ ಆರಿಸಿದಳು. ಬೆಲೆ ಸ್ವಲ್ಪ ಜಾಸ್ತಿಯೇ ಇತ್ತು. ನಾನು ಬೇಡ ಎಂದರೂ ಇವರು ''ಸರಿ, ನಿನಗೆ ಇಷ್ಟ ಅಂದರೆ ಅದನ್ನೇ ತೆಗೆದುಕೊಂಡರಾಯಿತು'' ಎಂದರು. ಕೂಡಲೇ ಮಗಳು ಅಲ್ಲಿಯೇ ಜೋರಾಗಿ ''ನಿನ್ನ ಹತ್ತಿರ ಅಷ್ಟು ಹಣ ಇದೆಯಾ ಅಪ್ಪ? ಮನೆಯಿಂದ ಹೊರಡುವಾಗ ದುಡ್ಡಿಲ್ಲ ಅಂತ ಹೇಳ್ತಿದ್ದೆ'' ಎಂದಾಗ ಅಂಗಡಿಯಲ್ಲಿದ್ದವರೆಲ್ಲಾ, ಸೇಲ್ಸ್ ಹುಡುಗಿಯರೂ ಸೇರಿ ನಕ್ಕದ್ದೇ ನಕ್ಕದ್ದು. ನನಗಂತೂ ಆ ಕೂಡಲೇ ಭೂಮಿ ಬಾಯಿ ಬಿಡಬಾರದೇ ಎನಿಸಿದ್ದಂತೂ ನಿಜ.

ನೀವು ನಿಮ್ಮ ಚಿಕ್ಕ ಮಕ್ಕಳೊಡನೆ ಯಾರೋ ಫ್ರೆಂಡ್ ಮನೆಗೆ ಹೋಗಿದ್ದೀರಿ ಎಂದಿಟ್ಟುಕೊಳ್ಳಿ. ಹಾಗೇ ಹೋದಾಗ 'ನಮ್ಮ ಮಗಳಿಗೆ ಅಥವಾ ಮಗನಿಗೆ ಈ ತಿಂಡಿ ಇಷ್ಟವಿಲ್ಲ, ತಿನ್ನುವುದೇ ಇಲ್ಲ' ಎಂದೆಲ್ಲಾ ವಿವರಣೆ ಕೊಟ್ಟಿರೋ, ಜೋಕೆ! ಮನೆಯಲ್ಲಿ ಅದೇ ತಿಂಡಿ ತಿನ್ನಲು ತಕರಾರು ಮಾಡುವ ಮಗು ಮರುಕ್ಷಣದಲ್ಲೇ ತಟ್ಟೆ ತುಂಬಾ ತಂದಿಟ್ಟಿದ್ದ ತಿಂಡಿಯನ್ನು ತಿಂದು ಮುಗಿಸಿ ನಿಮ್ಮ ಮಾತನ್ನು ಹುಸಿಯಾಗಿಸದಿದ್ದರೆ ಅದು ಮಗುವೇ ಅಲ್ಲ. ನೀವು ಕೇಳಿದಿರಿ ಎಂದಿಟ್ಟುಕೊಳ್ಳಿ - ''ಏನೋ ಪುಟ್ಟ ನಿನಗೆ ಈ ತಿಂಡಿ ಇಷ್ಟ ಇಲ್ವಲ್ಲ, ಮನೆಯಲ್ಲಾದ್ರೆ ಮುಟ್ಟೋದೇ ಇಲ್ಲ''

ಕೂಡಲೇ ಗುರಿ ತಪ್ಪದಂತೆ ಬರುತ್ತದೆ ಉತ್ತರ, ''ನೀನು ಇಷ್ಟು ಚೆನ್ನಾಗಿ ಮಾಡೋದಿಲ್ಲ ಅಮ್ಮ, ಅದ್ಕೆ ತಿನ್ನೋದಿಲ್ಲ, ಇಲ್ಲಿ ನೋಡು ಇದೆಷ್ಟು ರುಚಿ ಇದೆ.''

ನೀವೇನು ಮಾಡಬೇಕು ಆಗ? ಅಷ್ಟರಲ್ಲಿ ಮನೆಯಾಕೆ ''ಮಕ್ಕಳಿಗೇನು ಗೊತ್ತಾಗುತ್ತೆ ಬಿಡಿ. ಅವು ಇದ್ದದ್ದನ್ನು ಇದ್ದ ಹಾಗೆಯೇ ಹೇಳಿಬಿಡುತ್ತವೆ'' ಎಂದರಂತೂ ನಿಮಗೆ ಮೈ ಪರಚಿಕೊಳ್ಳುವ ಹಾಗೆ ಆಗುವುದು ಖಂಡಿತ.

ಮನೆಯಲ್ಲಿ ಊಟ ಮಾಡದ ಮಗು ಪಕ್ಕದ ಮನೆಗೆ ಹೋದಾಗ ಅಲ್ಲಿ ಮಕ್ಕಳೊಡನೆ ಕುಳಿತು ಚೆನ್ನಾಗಿ ಊಟ ಮಾಡುವುದು ಮಾಮೂಲು. ಪಕ್ಕದ ಮನೆ ಅಡುಗೆ ಎಂದರೆ ಮಕ್ಕಳಿಗೆ ಎಲ್ಲಿಲ್ಲದ ಪ್ರೀತಿ. ಒಮ್ಮೆ ನನ್ನ ಮಗ ಮನೆಯಲ್ಲಿ ಬದನೆಕಾಯಿ ಪಲ್ಯ ಬೇಡ ಎಂದಾಗ ನಾನು ಸುಮ್ಮನೆ ''ಇದು ಪಕ್ಕದ ಮನೆ ಆಂಟಿ ಕೊಟ್ಟಿದ್ದೋ'' ಎಂದೆ. ಕೂಡಲೇ ಹಾಕಿಸಿಕೊಂಡು ''ಆಹ್, ಎಷ್ಟು ರುಚಿಯಾಗಿದೆ'' ಎನ್ನುತ್ತಾ ತಿಂದು ಮುಗಿಸಿದ. ಬೇಕಿದ್ದರೆ ನೀವೂ ಈ ಪ್ರಯೋಗ ಮಾಡಿ ನೋಡಿ.

ಹಿಂದೊಮ್ಮೆ ನನ್ನ ಒಬ್ಬ ಗೆಳತಿ ಸರಳಾಗೆ ನಮ್ಮಲ್ಲಿಯೇ ಆದ ಅನುಭವ ಕೇಳಿ. ನಾವಿಬ್ಬರೂ ಚಿಕ್ಕಂದಿನಿಂದ ಒಟ್ಟಿಗೆ ಬೆಳೆದವರು. ಮದುವೆ ಆದಮೇಲೆ ಇಬ್ಬರೂ ಒಂದೇ ಕಾಲೋನಿಯಲ್ಲಿ ವಾಸಿಸುತ್ತಾ ಇದ್ದದ್ದು ಕಾಕತಾಳೀಯ. ನಾವು ಪರಸ್ಪರ ಮನೆಗಳಿಗೆ ಆಗಾಗ ಭೇಟಿ ಕೊಡುವುದು ವಾಡಿಕೆಯಾಗಿತ್ತು. ನನ್ನ ಆರು ವರ್ಷದ ಮಗಳು ಅರ್ಚನಾ ಮತ್ತು ಅವಳ ಮಗಳು ಗೀತಾ ಒಂದೇ ತರಗತಿಯಲ್ಲಿ ಓದುತ್ತಾ ಇದ್ದದ್ದು ಮಾತ್ರವಲ್ಲ, ಇಬ್ಬರೂ ಗಳಸ್ಯ ಕಂಠಸ್ಯ. ಒಟ್ಟು ಸೇರಿದರೆ ಮುಗಿದೇ ಹೋಯಿತು. ಹೊರಗಿನ ಲೋಕವೇ ಮರೆತು ಹೋಗುತ್ತಿತ್ತು ಅವರಿಗೆ. ಒಂದು ದಿನ ಸಾಯಂಕಾಲ ಸರಳಾ ಎಂದಿನಂತೆ ಮಗಳ ಜೊತೆ ನಮ್ಮಲ್ಲಿಗೆ ಬಂದಿದ್ದಳು. ಬಂದ ಕೂಡಲೇ ಗೀತಾ ಸೀದಾ ಒಳಗೆ ಹೋಗಿ ಅರ್ಚನಾ ಜೊತೆ ಆಟ ಶುರು ಮಾಡಿದಳು. ನಾವೂ ಅಷ್ಟೆ ಹರಟಿದ್ದೇ ಹರಟಿದ್ದು, ಸಮಯ ಹೋದದ್ದೇ ತಿಳಿಯಲಿಲ್ಲ. ಗಂಟೆ ನೋಡಿದರೆ ಏಳಾಗಿತ್ತು. ಓ, ಹೊತ್ತಾಯಿತು ಎಂದು ಸರಳಾ ಎದ್ದಳು.

"ಸ್ವಲ್ಪ ಇರೇ, ಕಾಫಿ ಮಾಡ್ತೇನೆ"

"ಬೇಡ್ವೇ, ಹೊತ್ತಾಯ್ತು. ಇನ್ನೇನು ಇವ್ರು ಆಫೀಸಿನಿಂದ ಬರ್ತಾರೆ. ಇನ್ನೊಂದಿನ ನಿಧಾನವಾಗಿ ಬರ್ತೇನೆ ಕಾಫಿಗೆ. ಲೇ ಗೀತಾ, ಬಾರೇ" ಎನ್ನುತ್ತಾ ಹೊರಟಳು. ಮಕ್ಕಳ ಸದ್ದೇ ಇಲ್ಲ. ಒಳಗೆ ಹೋಗಿ ನೋಡಿದರೆ, ಇಬ್ಬರೂ ಏನೋ ಆಟದಲ್ಲಿ ತಲ್ಲೀನರಾಗಿದ್ದಾರೆ. ಸರಳಾ ಹೋಗಿ ಮಗಳನ್ನು ಕೈಹಿಡಿದು ಎಬ್ಬಿಸಿದಳು. ಗೀತಾ ಏನು ಮಾಡಿದರೂ ಹೊರಡ್ಲಿಕ್ಕೆ ತಯಾರಿಲ್ಲ. ಸರಳಾ ಸ್ವಲ್ಪ ಸಿಟ್ಟಾಗಿಯೇ ಹೇಳಿದಳು: "ನೋಡೇ ಗೀತಾ. ಅಪ್ಪ ಮನೆಗೆ ಬರುವ ಹೊತ್ತಾಯ್ತು. ಅವರು ಬರುವಾಗ ನಾವಿಲ್ಲದಿದ್ರೆ ಬಯ್ತಾರೆ ಗೊತ್ತಿಲ್ವಾ ನಿನಗೆ. ಈಗ್ಬಾ ನಾಳೆ ಮತ್ತೆ ಬಂದು ಆಟ ಆಡ್ಬಹುದು."

"ಊಹ್ಞೂ, ಬರೊಲ್ಲ, ನಾನಾಮೇಲೆ ಬರ್ತೀನಿ"

"ಈಗ ಯಾಕ್ಬರಲ್ಲ?"

"ಆಂಟಿ ಇನ್ನೂ ಕಾಫಿ ಕೊಟ್ಟೇ ಇಲ್ಲ. ನೀನೇ ಅಲ್ವ ಹೇಳಿದ್ದು ಆಂಟಿ ಕಾಫಿ ಕೊಟ್ಟಕೂಡ್ಲೇ ತಕರಾರು ಮಾಡ್ದೆ ಮನೆಗೆ ಹೊರಡ್ಬೇಕೂಂತ?"

ಅವಳ ಮಾತು ಕೇಳಿ ನಾವಿಬ್ಬರೂ ಅವಾಕ್ಕಾದೆವು. ನಾನು ಹುಬ್ಬೇರಿಸಿ ಸರಳಾಳನ್ನು ಕೇಳಿದೆ "ಏನು ಹೀಗೆ?" ಅಂತ. ಆಗ ಅವಳು ವಿವರಣೆ ಕೊಟ್ಟಳು.

"ನನ್ಗೊತ್ತು, ಇವಳು ಇಲ್ಲಿಗೆ ಬಂದ್ರೆ ವಾಪಸ್ಸಿ ಬೇಗ ಹೊರಡೋದಿಲ್ಲ ಅಂತ. ಅಷ್ಟೆ ಮನೆಯಿಂದ ಹೊರಡುವಾಗಲೇ ಹೇಳಿದ್ದೆ, ಆಂಟಿ ಕಾಫಿ ಕೊಟ್ಟಕೂಡ್ಲೇ ಹೊರಟು ಬಿಡ್ಬೇಕು ಅಂತ. ಹೇಗೆ ನನ್ಗೇ ತಿರುಗುಬಾಣ ಬಿಟ್ಟಿದ್ದಾಳೆ ನೋಡೇ! ಹೋದಲ್ಲೆಲ್ಲಾ ಹೀಗೇ ಏನಾದ್ರು ಹೇಳಿ ನನ್ನ ಮಾನ ಕಳೀತಾಳೆ!"

ನಮ್ಮಿಬ್ಬರದು ತುಂಬ ಅನೌಪಚಾರಿಕ ಗೆಳೆತನ. ಆದ್ದರಿಂದ ಬಚಾವ್. ಇಲ್ಲದೇ ಇದ್ದರೆ ವೃಥಾ ಅಪಾರ್ಥಕ್ಕೆ ಎಡೆಯಾಗುತ್ತಿತ್ತು.

ಒಂದು ದಿನ ನನ್ನ ಮಗಳ ಕ್ಲಾಸ್ ಟೀಚರ್ ಸಿಕ್ಕಿದ್ದರು. ಅವರು ಮಕ್ಕಳಿಗೆ ಕುಟುಂಬ

ಎಂದರೇನು, ಕುಟುಂಬದಲ್ಲಿ ಪ್ರತಿಯೊಬ್ಬರ ಕೆಲಸಗಳು ಹೇಗೆ ಬೇರೆ ಬೇರೆಯಾಗಿರುತ್ತವೆ ಎಂದೆಲ್ಲಾ ಹೇಳಿಕೊಡುತ್ತಿದ್ದರಂತೆ. ಹೊರಗೆ ಹೋಗಿ ಒಳ್ಳೆಯ ರೀತಿಯಲ್ಲಿ, ನ್ಯಾಯವಾದ ಮಾರ್ಗದಲ್ಲಿ ದುಡಿದು ಹಣ ಗಳಿಸುವುದು ತಂದೆಯ ಜವಾಬ್ದಾರಿ; ಮನೆಯ ಕೆಲಸ, ಮಕ್ಕಳ ಲಾಲನೆ ಪಾಲನೆಯ ಜವಾಬ್ದಾರಿ ತಾಯಿಯದ್ದು ಎಂದು ವಿವರಿಸಿ ನನ್ನ ಮಗಳ ಹತ್ತಿರ ಕೇಳಿದರಂತೆ "ನಿನ್ನ ತಂದೆ ಏನು ಕೆಲಸ ಮಾಡ್ತಾರೆ?'" ಎಂದು. ಇವಳು "ನಮ್ಮ ತಂದೆ ಏನೂ ಕೆಲಸ ಮಾಡುವುದಿಲ್ಲ" ಎಂದು ಉತ್ತರ ಕೊಟ್ಟಳಂತೆ. ಅವಳು ಅಪ್ಪ ಮನೆಗೆಲಸ ಮಾಡಿದ್ದು ನೋಡಿಲ್ಲವಲ್ಲ, ಹಾಗಾಗಿ. "ಹಾಗಾದರೆ ಬಟ್ಟೆಗೆ, ಊಟಕ್ಕೆ, ನಿಮ್ಮ ಪುಸ್ತಕಕ್ಕೆ ಎಲ್ಲ ನಿಮ್ಮಪ್ಪ ಎಲ್ಲಿಂದ ದುಡ್ಡು ತರ್ತಾರೆ?" ಎಂದು ಕೇಳಿದ್ದಕ್ಕೆ ಕೂಡಲೇ "ಅಪ್ಪ ಬ್ಯಾಂಕಿಂದ ದುಡ್ಡು ತಂದುಕೊಡ್ತಾರೆ" ಎಂದುತ್ತರಿಸಿದಳಂತೆ. ಅವರಿಗೋ ನಗು. "ನಿಮ್ಮ ಮಗಳಿಗೆ ಬ್ಯಾಂಕಿನಿಂದ ದುಡ್ಡು ಸಿಗುತ್ತದೆ ಎಂದು ಇಷ್ಟು ಚಿಕ್ಕ ವಯಸ್ಸಿಗೇ ಗೊತ್ತಿದೆಯಲ್ಲ, ತುಂಬಾ ಜಾಣೆ" ಎಂದು ನಗುತ್ತಾ ಅವರು ಹೇಳಿದರು.

ಇದು ಎಷ್ಟರ ಮಟ್ಟಿಗೆ ಜಾಣತನವಾಯಿತು? ನಾನು ಮನೆಗೆ ಬಂದ ಮೇಲೆ, ಬ್ಯಾಂಕಿನಿಂದ ದುಡ್ಡು ತರಲು ಮೊದಲು ನಾವೇ ಅದಕ್ಕೆ ದುಡ್ಡು ಹಾಕಬೇಕು ಎಂಬ ಸತ್ಯವನ್ನು ಮಗಳಿಗೆ ಹೇಳಿಕೊಡಬೇಕಾಯಿತು. ಅವಳಿಗೆ ಆಗ ಅರ್ಥವಾಯಿತೋ ಇಲ್ಲವೋ. ಅಂತೂ ಅಂದಿನಿಂದ "ಅಪ್ಪ ಏನು ಕೆಲಸ ಮಾಡುತ್ತಾರೆ?" ಎಂಬ ಪ್ರಶ್ನೆಗೆ "ಕಛೇರಿಗೆ ಹೋಗಿ ಕೆಲಸ ಮಾಡ್ತಾರೆ. ಅದಕ್ಕೆ ಸಂಬಳ ಸಿಗ್ತದೆ. ಅದನ್ನ ಬ್ಯಾಂಕಿನಲ್ಲಿ ಇಡ್ತಾರೆ. ಬೇಕಾದಾಗ ತರ್ತಾರೆ" ಎಂದು ಹೇಳಲು ಕಲಿತಳು.

ಈಗ ನಮ್ಮ ಮಕ್ಕಳ ರಾಜ್ಯಭಾರ ಮುಗಿದು ಮೊಮ್ಮಕ್ಕಳದ್ದು ಪ್ರಾರಂಭವಾಗಿದೆ. ನಮ್ಮ ಮಗನ ಮಗಳು ಅವನಿ ಮತ್ತು ಮಗಳ ಮಗಳು ಅಖಿಲಾ ಒಂದು ವರ್ಷದ ಅಂತರದಲ್ಲಿ ಹುಟ್ಟಿದವರು. ಇಬ್ಬರಲ್ಲಿ 7 ವರ್ಷದ ಅಖಿಲಾ ದೊಡ್ಡವಳು. ಅವಳಿಗೆ ಚಿತ್ರ ಬಿಡಿಸುವ ಹುಚ್ಚು. ದಿನ ಇಡೀ ಚಿತ್ರ ಮಾಡುತ್ತಾ ಕೂರಲು ತಯಾರು. ಕಳೆದ ಬೇಸಗೆ ರಜೆಯಲ್ಲಿ ಒಂದು ದಿನ ಇಬ್ಬರೂ ಕೂತು ಚಿತ್ರ ಬಿಡಿಸುತ್ತಿದ್ದರು. ಅವನಿ ಒಬ್ಬ ಗಂಡಸು ಮತ್ತು ಒಬ್ಬ ಹೆಂಗಸಿನ ಚಿತ್ರ ಬಿಡಿಸಿ ಬಣ್ಣ ಹಾಕಿ ಅಖಿಲಾಳಿಗೆ ಹೆಮ್ಮೆಯಿಂದ ತೋರಿಸುತ್ತಿದ್ದಳು. "ನೋಡೇ ಇದು ಅಜ್ಜ ಅಜ್ಜಿ. ನಾನು ಬಣ್ಣ ಕೊಟ್ಟದ್ದು ಎಷ್ಟು ಚೆನ್ನಾಗಿದೆ ಅಲ್ವಾ?"

"ಇಲ್ಲವೇ ಇಲ್ಲ, ಅಜ್ಜನ ಕೂದಲು ಮಾತ್ರ ಬಿಳಿ ಮಾಡಿದ್ದೀಯಾ, ಅಜ್ಜಿ ಕೂದಲು ಕಪ್ಪೇ ಇದೆ?"

"ಅಜ್ಜಿಯ ಕೂದಲು ಎಲ್ಲಿ ಬಿಳಿಯಾಗಿದೆ. ಅಲ್ಲಿ ನೋಡು, ಕಪ್ಪೇ ಇದೆಯಲ್ಲಾ?"

"ಅಯ್ಯೋ ನೀನೊಬ್ಬು ಪೆದ್ದಿ, ಅಜ್ಜಿಯರೆಲ್ಲಾ ಈಗ ಕೂದಲಿಗೆ ಕಪ್ಪು ಬಣ್ಣ ಹಚ್ಚಿಕೊಳ್ತಾರೆ, ಗೊತ್ತಾ? ಬೇಕಾದರೆ ನೀನೇ ಕೇಳು, ಹೌದೋ ಅಲ್ವೋ ಅಂತ."

ತಾನು ಮಾಡಿದ್ದು ಸರಿ ಅಂತ ಅವನಿ, ತಾನು ಹೇಳಿದ್ದು ಸರಿ ಎಂದು ಅಖಿಲಾ. ತುಸು ಹೊತ್ತು ಚರ್ಚೆ ನಡೆದು ಕೇಸು ಇತ್ಯರ್ಥ ಮಾಡಿಕೊಳ್ಳಲು ಇಬ್ಬರು ನನ್ನ ಹತ್ತಿರ ಬಂದರು.

ಇಬ್ಬರಲ್ಲಿ ಯಾರು ಸರಿ, ಯಾರು ತಪ್ಪು ಎನ್ನುವುದಕ್ಕಿಂತ ನನಗೆ ಆಗ ಅನಿಸಿದ್ದು, ಅಜ್ಜಿ ಯಾರು, ನಾನೋ ಈ ಮಕ್ಕಳೋ ಅಂತ. ಕೊನೆಗೆ ಮಧ್ಯದ ದಾರಿ ಹುಡುಕಬೇಕಾಯಿತು. ''ನೀವಿಬ್ಬರೂ ಸರಿ'' ಎಂದು ಹೇಳಿದೆ. ಇಬ್ಬರಿಗೂ ಸಂತೋಷವಾಯಿತು.

ಇದರಿಂದ ನಾನೊಂದು ಪಾಠ ಕಲಿತೆ. ಮಕ್ಕಳು ನಮ್ಮನ್ನು ತುಂಬಾ ಸೂಕ್ಷ್ಮವಾಗಿ ಗಮನಿಸುತ್ತಾರೆ, ಹಾಗಾಗಿ ನಾವೇ ಸ್ವಲ್ಪ ಜಾಗರೂಕರಾಗಿರಬೇಕು ಎಂದು. ಹೋದ ತಿಂಗಳಷ್ಟೆ ಮಗ ಸೊಸೆ, ಅವನಿ ಎಲ್ಲ ಬೆಂಗಳೂರಿನಿಂದ ರಜೆಗೆ ಬಂದಿದ್ದರು. ರಾತ್ರಿ ಎಲ್ಲರೂ ಒಟ್ಟಿಗೆ ಕೂತು ಊಟ ಮಾಡ್ತಾ ಇದ್ದೆವು. ಅವನಿಯ ತಟ್ಟೆಯಲ್ಲಿ ಬಡಿಸಿದ್ದೆಲ್ಲಾ ಹಾಗೇ ಇತ್ತು. ಅವಳಮ್ಮ ಮೆಲ್ಲನೆ ಅವಳ ತಟ್ಟೆಗೆ ಕೈ ಹಾಕಿ ಒಂದು ತುತ್ತು ತೆಗೆದು ಮಗಳ ಬಾಯಿಗೆ ಹಾಕಿದಳು. ಅವಳಿಗದು ಇಷ್ಟ ಆಗಲಿಲ್ಲ. ''ಅಮ್ಮಾ ಇನ್ನೊಬ್ಬರ ತಟ್ಟೆಗೆ ಕೈ ಹಾಕುವುದು ಬ್ಯಾಡ್ ಮ್ಯಾನರ್ಸ್ ಅಂತ ನೀನು ಹೇಳ್ತೀರ್ತೀಯಾ. ಈಗ ನೀನೇ ಯಾಕೆ ನನ್ನ ತಟ್ಟೆಗೆ ಕೈ ಹಾಕಿದ್ದು?'' ಎಂದು ಜೋರಾಗಿ ಹೇಳಿದಳು. ಎಲ್ಲರೂ ಮಗುವಿನ ಮಾತು ಎಂದು ನಕ್ಕರೂ ಸೊಸೆಗಂತೂ ತುಂಬಾ ಮುಜುಗರವಾಯಿತು. ನಾನೇ ''ದೊಡ್ಡವರಿಗೆ ಹಾಗೆಲ್ಲಾ ಹೇಳಬಾರದು ಪುಟ್ಟಾ'' ಎಂದು ಮಗುವಿಗೆ ಬುದ್ಧಿ ಹೇಳಿದೆ. ಆಗ ಏನೋ ಸುಮ್ಮನಾಯಿತು.

ಊಟ ಆದ ಮೇಲೆ ಮಲಗುವ ಹೊತ್ತಿಗೆ ವಾಡಿಕೆಯ ಹಾಗೆ ''ಅಜ್ಜಿ ಕತೆ ಹೇಳು'' ಎನ್ನುತ್ತಾ ನನ್ನ ಹತ್ತಿರ ಬಂದಳು. ''ಬಾ'' ಎಂದು ಪತ್ತಿರ ಮಲಗಿಸಿಕೊಂಡು ಯಾವುದೋ ಕತೆ ಸುರು ಮಾಡಿದೆ. ಆಗ ಅವಳದೊಂದು ಪ್ರಶ್ನೆ.

''ದೊಡ್ಡವರಿಗೆ ಪುಟ್ಟವರು ಏನೂ ಹೇಳಬಾರದು, ಅವರು ತಪ್ಪು ಮಾಡಿದರೂ ಏನೂ ಹೇಳಬಾರದು, ಯಾಕಜ್ಜಿ? ಯಾರು ಮಾಡಿದ ರೂಲ್ ಇದಜ್ಜಿ?'' ಇದಕ್ಕೆ ನನ್ನ ಬಳಿ ಉತ್ತರ ಇರಲಿಲ್ಲ. ನಿಮಗೆ ಗೊತ್ತಿದ್ದರೆ ಹೇಳಿ.

ಈಗ ಎಲ್ಲೆಲ್ಲಿ ನೋಡಿದರೂ ಕಂಪ್ಯೂಟರ್‌ದೇ ರಾಜ್ಯ. ಹುಟ್ಟುವಾಗಲೇ ಮಕ್ಕಳು ಕಂಪ್ಯೂಟರ್ ನೋಡುತ್ತಾರೆ. ಅದರ ಬಳಕೆಯನ್ನೂ ಬೇಗ ಕಲಿತುಬಿಡುತ್ತಾರೆ. ಒಂದು ದಿನ ನನ್ನ ಮೊಮ್ಮಗಳು ಅಮ್ಮನೊಟ್ಟಿಗೆ (ಮೈಸೂರಿಗೆ ಬಂದಾಗ) ಶಾಪಿಂಗ್ ಹೋಗಿದ್ದಳು. ಅಲ್ಲಿ ಅವಳಿಗೊಂದು ಹೊಸ ಡಿಸೈನಿನ ಬಟ್ಟೆ ಇಷ್ಟವಾಯಿತಂತೆ. ''ಈಗ ದುಡ್ಡು ತಂದಿಲ್ಲ, ಇನ್ನೊಮ್ಮೆ ತೆಗೆಯುವಾ'' ಎಂದು ಹೇಳಿ ಅವಳ ಅಮ್ಮ ತನ್ನ ವ್ಯಾಪಾರ ಮುಂದುವರಿಸಿದಳು. ಸ್ವಲ್ಪ ಸಮಯದ ಮೇಲೆ ನೋಡಿದರೆ ಮಗಳು ನಾಪತ್ತೆ. ಅವಳಿಗೆ ಗಾಬರಿ. ದೊಡ್ಡ ಮಾಲ್. ದಿನ ಬೆಳಗಾದರೆ ಪೇಪರ್‌ಗಳಲ್ಲಿ ಮಕ್ಕಳ ಕಿಡ್‌ನ್ಯಾಪ್ ವರ್ತಮಾನಗಳೆ. ಎಲ್ಲಾ ಕಡೆ ಹುಡುಕಿ ಕೊನೆಗೆ ಕ್ಯಾಷ್ ಕೌಂಟರ್ ಬಳಿ ಬಂದರೆ ಅಲ್ಲಿದ್ದ ಸೇಲ್ಸ್‌ಮ್ಯಾನ್ ಹತ್ತಿರ ಮಗಳು ಕೇಳ್ತಾ ಇದ್ದಳಂತೆ ''ಅಂಕಲ್, ಅಮ್ಮನ ಹತ್ತಿರ ದುಡ್ಡಿಲ್ಲ, ನೀವು ಕಾರ್ಡು ತೆಗೆದುಕೊಳ್ಳುತ್ತೀರಾ, ಇಲ್ಲ ಚೆಕ್ ತೆಗೋತೀರಾ?''

ಆ ಸೇಲ್ಸ್‌ಮ್ಯಾನ್ ಸುಸ್ತೋ ಸುಸ್ತು. ಕೊನೆಗೆ ಕಾರ್ಡು ಉಪಯೋಗಿಸಿ ಬೇಕಾದ ಬಟ್ಟೆಯನ್ನು ಅವಳಿಗೆ ಕೊಡಿಸಿ ಮನೆಗೆ ಬಂದಳು ಸೊಸೆ. ''ಇನ್ನೆಂದೂ ಇವಳನ್ನು ಜೊತೆಗೆ

ಕರೆದೊಯ್ಯುವುದಿಲ್ಲ ಅತ್ತೆ. ನೋಡಿ ಇವಳು ಮಾಡಿದ ಅವಾಂತರ' ಎಂದು ನನಗೆ ದೂರು ಹೇಳಿದಳು, ಆದರೆ ತುಂಬಾ ಮೆಲ್ಲಗೆ, ಮಗಳಿಗೆ ಕೇಳದಂತೆ. ಅವಳು ಕೇಳಿಸಿಕೊಂಡರೆ ಮತ್ತೇನು ತರಲೆ ಮಾಡುತ್ತಾಳೋ ಎಂಬ ಅಳುಕು ಅವಳಿಗೆ!

ಮೊನ್ನೆ ತಾನೆ ಬೆಂಗಳೂರಿಗೆ, ಮಗನ ಮನೆಗೆ ಫೋನ್ ಮಾಡಿದ್ದೆ. ಫೋನ್ ಎತ್ತಿಕೊಂಡದ್ದು ಈ ಪೋರಿ.

"ಅಜ್ಜಿ ನಾನಜ್ಜಿ. ಏನು ಬೇಕು?" ಎಂದಳು.

"ಅಮ್ಮನನ್ನು ಸ್ವಲ್ಪ ಕರಿ ಪುಟ್ಟಾ".

"ಅಜ್ಜೀ, ಇವತ್ತು ನಿನಗೊತ್ತಾ? ಅಮ್ಮ ತಿಂಡೀನೇ ಮಾಡಿಲ್ಲ. ಬರೀ ಸೋಂಬೇರಿ ನಮ್ಮಮ್ಮ. ಅಪ್ಪನ ಆಫೀಸಿಗೆ, ನನ್ನ ಸ್ಕೂಲಿಗೆ ಹೊತ್ತಾಗುತ್ತೇ ಅಂತ ಅಪ್ಪ ಹೋಗಿ ಹೋಟ್ಲಿಂದ ಇಡ್ಲಿ ಚಟ್ನಿ ತಂದಿದಾರೆ! ಏನೂ ಚೆನ್ನಾಗಿಲ್ಲ, ಆದ್ರೇನು ಮಾಡೋದು. ಅದನ್ನೆ ತಿಂತಾ ಇದ್ದೀನಿ, ಅಜ್ಜಿ"

"ಯಾಕೆ ಅಮ್ಮನಿಗೆ ಹುಷಾರಿಲ್ಲವಾ?"

'ಹ್ಞೂ, ತಲೆ ನೋವಂತೆ. ಮಲಗಿದ್ದಾಳೆ" ಎಂದಳು.

ಕೊನೆಗೆ ನಾನೇ

"ನೋಡಮ್ಮಾ ಒಂದೊಂದು ಸಲ ಪಾಪ, ದೊಡ್ಡವರಿಗೂ ಸುಸ್ತು, ಮೈ ಕೈ ನೋವು, ಜ್ವರ ಎಲ್ಲಾ ಬರುತ್ತೆ. ನೀನು ದೊಡ್ಡವಳಾದ ಮೇಲೆ ನೀನೇ ತಿಂಡಿ ಮಾಡು, ಅಮ್ಮನಿಗೆ ಹುಷಾರಿಲ್ಲದಾಗ. ಈಗ ತಂಟೆ, ತಕರಾರು ಮಾಡದೆ ಜಾಣ ಮರಿ ಹಾಗೆ ಇಡ್ಲಿ ತಿಂದು ಸ್ಕೂಲಿಗೆ ಹೋಗು ಆಯಿತಾ" ಎಂದಾಗ, "ಆಯ್ತಜ್ಜಿ" ಎಂದು ಒಪ್ಪಿಕೊಂಡಳು. ನಾನೂ ಅವಳ ಮಾತನ್ನೇ ಸರಿ ಎಂದು ಸೊಸೆಯನ್ನು ಬಯ್ದು ಮಾಡಿದ್ದರೆ, ಅತ್ತೆ ಸೊಸೆಯರಿಗೆ ಜಗಳ ಆಡಲು ಒಂದು ನೆಪ ಸಿಕ್ಕ ಹಾಗೆ ಆಗುತ್ತಿತ್ತು ಅಲ್ಲವೇ?

ಮಕ್ಕಳು ನಾವು ಮಾಡುತ್ತಿರುವ ಪ್ರತಿಯೊಂದು ಕೆಲಸವನ್ನೂ, ಆಡುವ ಮಾತನ್ನೂ, ಹಾಕುವ ಬಟ್ಟೆಬರೆ ಎಲ್ಲಾ ತುಂಬಾ ಚೆನ್ನಾಗಿ ಗಮನಿಸುತ್ತಿರುತ್ತಾರೆ. ನಮಗದು ಗೊತ್ತಾಗುವುದಿಲ್ಲ. ಕೆಲವೊಮ್ಮೆ ನಾವು ಮಾಡಿದ್ದನ್ನು ಬೇಡದ ಸಮಯದಲ್ಲಿ ಅನುಸರಿಸುತ್ತವೆ. ಪ್ರತಿಯೊಂದನ್ನೂ ಹೀಗೆ ಅನುಕರಣೆಯಿಂದಲೇ ಅವು ಕಲಿಯುವುದು. ಅಪ್ಪ ಬಯ್ಯುವುದು ಹೇಗೆ, ಅಮ್ಮ ನಗುವುದು ಹೇಗೆ, ಅಜ್ಜ ಕೆಮ್ಮುವುದು ಹೇಗೆ ಎಂದೆಲ್ಲಾ ನಮ್ಮ ಮಕ್ಕಳು 'ಮಿಮಿಕ್ರಿ' ಮಾಡಿ ತೋರಿಸುವಾಗ ನಾವೆಲ್ಲಾ ನಗುತ್ತೇವೆ, ಖುಷಿ ಪಡುತ್ತೇವೆ. ನಮ್ಮ ಮಕ್ಕಳು ಅದೆಷ್ಟು ಜಾಣರು ಎಂದು ಹೆಮ್ಮೆ ಪಡುತ್ತೇವೆ. ಇದು ಸಹಜವೇ. ಆದರೆ ಅದೇ ಮಕ್ಕಳು ಇತರರನ್ನೂ ಅನುಕರಣೆ ಮಾಡಿದಾಗ ಕೆಲವು ಸಂದರ್ಭಗಳಲ್ಲಿ ನಮಗೆ ನುಂಗಲಾರದ ಬಿಸಿ ತುಪ್ಪದಂತಾಗುತ್ತದೆ. ಉದಾಹರಣೆಗೆ ನೋಡಿ. ಒಂದು ಮಗು ಅವರ ಪಕ್ಕದ ಮನೆಯ ವಯಸ್ಸಾದ ಹಿರಿಯರೊಬ್ಬರು ಬಾಗಿ, ಕಾಲೆಳೆದು ನಡೆಯುವುದನ್ನು ಅವರ ಮುಂದೆಯೇ

ತೋರಿಸಿ "ಯಾಕಜ್ಜಿ ನೀವು ಹೀಗೆ ನಡೆಯುವುದು?" ಎಂದು ಕೇಳಿತಂತೆ. ಪಾಪ ಅವರಿಗೆ ವಯಸ್ಸಾಗಿತ್ತು. ಕಾಲಿನ ಗಂಟುಗಳಲ್ಲಿ ನೋವು ಬೇರೆ. ಕಾಲೆಳೆಯದೆ ಹೇಗೆ ನಡೆದಾರು. ಮಗುವಿಗೇನು ಗೊತ್ತು. ಅವರ ಮಾತಿನಿಂದ ಆ ವೃದ್ಧೆಗೆ ಬೇಸರವಾಗಬಹುದು ಎಂದು ಮಗುವಿನ ತಾಯಿಗೂ ಮುಜುಗರ. ಮಗುವಿಗೆ ಬಯ್ದು ಬುದ್ಧಿ ಹೇಳಬೇಕಾಯಿತು. ಇವರಲ್ಲಿ ಮಗುವಿನ ತಪ್ಪೇನೂ ಇಲ್ಲ. ಆದರೂ ಅದು ಬಯ್ಸಿಕೊಳ್ಳಬೇಕಾಯಿತು. ಮೊದಲೇ ಮಕ್ಕಳಿಗೆ ಇಂತಹ ಸೂಕ್ಷ್ಮ ಹೇಳಿಕೊಡುವುದೇ ಇದಕ್ಕೆ ಪರಿಹಾರ. ತೀರ ಚಿಕ್ಕ ಮಗು ಈ ಥರ ಮಾಡಿದಾಗ ನಾವು ನಗುತ್ತೇವೆ. ಇದು ಅದಕ್ಕೆ ಉತ್ತೇಜನ ಕೊಟ್ಟಂತಾಗುತ್ತದೆ.

ಈಗ ಕೆಲವು ವರ್ಷಗಳ ಹಿಂದೆ ಇವರ ಅಕ್ಕನ ಮಗಳು, ಅಳಿಯ ಮತ್ತು ಅವರ ಮಗ ನಮ್ಮ ಮನೆಗೆ ಬಂದಿದ್ದರು. ಅವರ ಮಗ ಚೇತನ (ಇವರ ಅಕ್ಕನ ಮೊಮ್ಮಗ) ಆಗ 4-5 ವರ್ಷದ ಮಗು. ಎಲ್ಲರೊಂದಿಗೂ ಚೆನ್ನಾಗಿ ಮಾತಾಡುತ್ತಿದ್ದ. ನನ್ನ ಹತ್ತಿರ "ಆಂಟಿ ನನಗೆ ಟೊಮೆಟೋ ಇಷ್ಟ ತಿನ್ನಲೇ" ಎಂದ. ಬುಟ್ಟಿ ತುಂಬ ಹಣ್ಣುಗಳಿದ್ದವು. ನಾನು "ಸರಿ ತಿನ್ನುವಂತೆ, ಬಾ ತೊಳೆದು ಕೊಡ್ತೇನೆ" ಎಂದರೆ "ಬೇಡ ಆಂಟಿ, ನಾನೇ ತೊಳೆದುಕೊಳ್ಳುತ್ತೇನೆ" ಎಂದು ಒಂದೊಂದೇ ಹಣ್ಣು ತೊಳೆದು ತಿನ್ನತೊಡಗಿದ. ಐದಾರು ಹಣ್ಣು ತಿಂದಿರಬಹುದು. ಇದನ್ನು ನೋಡುತ್ತಿದ್ದ ಅವನ ಅಮ್ಮ "ಇನ್ನು ನೀನು ತೊಳೆದದ್ದೂ ಸಾಕು, ತಿಂದದ್ದೂ ಸಾಕು, ಹೊರಗೆ ಆಡಿಕೋ ಹೋಗು" ಎಂದರೆ "ಯಾರೊಡನೆ ಆಡಲಿ, ಅಜ್ಜನೊಡನೆಯೋ?" ಎಂದ. ಅವನು ಅಜ್ಜ ಅಂದದ್ದು ಇವರಿಗೆ. ನನಗೆ ಸಲೀಸಾಗಿ 'ಆಂಟಿ' ಎಂದವ ಇವರನ್ನು 'ಅಜ್ಜ' ಎನ್ನುತ್ತಿದ್ದಾನಲ್ಲ, ಹೀಗೇಕೆ ಎಂದು ಕೇಳಿದ್ದಕ್ಕೆ "ಆಂಟೀ, ನಿಮ್ಮ ಅಪ್ಪನ ಕೂದಲು ಬೆಳ್ಳಗಾಗಿದೆಯಲ್ಲ ಹಾಗಾಗಿ ಅವರು ಅಜ್ಜ" ಎಂದ. ಇವರು ನನ್ನ ಅಪ್ಪ ಎಂದು ಅವರ ಅನಿಸಿಕೆ. ನಮಗೋ ನಗು. ಅವನ ಅಮ್ಮ, "ಅಲ್ಲವೋ ಆ ಅಂಕಲ್ ಆಂಟಿಯ ಗಂಡ, ಅಪ್ಪ ಅಲ್ಲ" ಎಂದರೆ "ನಂಗೊತ್ತಿಲ್ಲ, ಅವರು ಅಂಕಲ್ ಅಂತೂ ಅಲ್ಲ. ಅವರ ಕೂದಲು ಬೆಳ್ಳಗಿಲ್ಲವೇ? ಅವರು ಅಜ್ಜನೇ" ಎನ್ನಬೇಕೇ!

ಇದೇ ಹುಡುಗ ಸ್ವಲ್ಪ ದೊಡ್ಡವನಾದ ಮೇಲೆ ನಮ್ಮ ಮನೆಗೆ ಬಂದಾಗ ತಿಂಡಿ ಗಿಂಡಿ ಬೇಕಿದ್ದರೆ ನನ್ನನ್ನು "ಆಂಟಿ, ತಿಂಡಿ ಕೊಡಿ" ಎನ್ನುತ್ತಿದ್ದ. ಬೇರೆ ಸಮಯದಲ್ಲಿ 'ಅಜ್ಜಿ' ಎನ್ನುತ್ತಿದ್ದ. ನನಗೆ 'ಅಜ್ಜಿ' ಎಂದು ಕರೆಸಿಕೊಳ್ಳುವುದಕ್ಕಿಂತ 'ಆಂಟಿ' ಎಂದು ಕರೆಸಿಕೊಳ್ಳುವುದು ಹೆಚ್ಚು ಇಷ್ಟ ಎಂದು ಅವನಿಗೆ ಅನಿಸಿತ್ತೋ ಏನೋ.

ನೋಡಿದಿರಾ. ಇಂತಹ 'ಜಾಣ' ಮಕ್ಕಳೊಡನೆ ವ್ಯವಹರಿಸುವಾಗ ನಾವು ಎಷ್ಟು ಎಚ್ಚರದಿಂದ ಇದ್ದರೂ ಸಾಲದು ಎಂಬುದನ್ನು ಈಗಲಾದರೂ ಒಪ್ಪುತ್ತೀರಿ ತಾನೆ?

# ಪುಸ್ತಕ ಪರಿಚಯ

## ಸಂದೀಲಿ ಸಮಾರಾಧನೆ

ಲೇಖಕಿ: ಶ್ರೀಮತಿ ಎಸ್. ಸಾಯಿಲಕ್ಷ್ಮಿ
ಸುಮುಖ ಪ್ರಕಾಶನ - ಬೆಂಗಳೂರು. ದೂರವಾಣಿ: 23118585
ಬೆಲೆ : ರೂ. 50/- ಪುಟಗಳು: 76

---

ಈ ಪುಸ್ತಕದ ಬಿಡುಗಡೆ ಈಚೆಗೆ ನಡೆದ ನಮ್ಮ ಹಾಸ್ಯೋತ್ಸವದಲ್ಲಿ ಆಯಿತು. ಬಿಡುಗಡೆಯಾದ ಪುಸ್ತಕಗಳೆಲ್ಲಾ ವೇದಿಕೆಯ ಮೇಲಿರುವವರಿಗೆ ಒಂದು ಸೆಟ್ ಸಿಗುವುದು ಸಂಪ್ರದಾಯ. ಹಾಗಾಗಿ ನನ್ನ ಸೆಟ್‌ನಲ್ಲಿದ್ದ ಪುಸ್ತಕಗಳ ಪೈಕಿ ನಾನು ಓದಲು ಆರಿಸಿಕೊಂಡ ಮೊದಲ ಪುಸ್ತಕ ಸಾಯಿಲಕ್ಷ್ಮಿಯವರದು. ಲೇಖಕಿ ಈ ಪುಸ್ತಕಕ್ಕೆ 'ಸಂದೀಲಿ ಸಮಾರಾಧನೆ' ಎನ್ನುವ ಹೆಸರನ್ನು ಏಕೆ ಆರಿಸಿದರೋ ತಿಳಿಯೆ. ಆ ಹೆಸರಿನ ಕಥೆಯಂತೂ ಕಣ್ಣಿಗೆ ಬೀಳಲಿಲ್ಲ. ಸಾಮಾನ್ಯವಾಗಿ ಕಳಪೆ ವಸ್ತುವನ್ನು ಒಳ್ಳೆಯ ಸರಕಿನ ನಡುವೆ ನುಗ್ಗಿಸಿ ಅದನ್ನೂ ಗ್ರಾಹಕರು ಒಪ್ಪಿಕೊಳ್ಳುವಂತೆ ಮಾಡುವ ಪ್ರಕ್ರಿಯೆಗೆ ಸಂದೀಲಿ ಸಮಾರಾಧನೆ ಎನ್ನುವುದುಂಟು. ಸಾಯಿಲಕ್ಷ್ಮಿಯವರ ಈ ಸಂಕಲನ ಖಂಡಿತವಾಗಿ ಕಳಪೆಯದಲ್ಲ, ಇರಲಿ.

ಈ ಸಂಕಲನದ ಮೊದಲ ಕಥೆ 'ಮಕ್ಕಳ ಸೈಕಲ್ ಲೋಕ'. ಮಕ್ಕಳ ಅದ್ಭುತ ರಮ್ಯ. ಜಗತ್ತನ್ನು ಲೇಖಕಿ ಈ ಬರಹದಲ್ಲಿ ಬಹು ಚೆನ್ನಾಗಿ ಸೆರೆ ಹಿಡಿದಿದ್ದಾರೆ. ಲೇಖನದ ಕೊನೆ ಮಾತ್ರ ನನ್ನನ್ನು ಸ್ವಲ್ಪ ಗೊಂದಲಕ್ಕೀಡುಮಾಡಿತು. ಅನಘ ಎಂಬ ಹುಡುಗಿ ಮೇಧಾಳ ತಂದೆಯ ಕಾರಿಗೆ ಸೈಕಲ್ ಡಿಕ್ಕಿ ಹೊಡೆಸಿ ಜಖಂ ಮಾಡಿದ ಖರ್ಚು 1570 ರೂಗಳಾಗುತ್ತದೆ ಎಂಬ ಅಂಶವನ್ನು ತಿಳಿಸಿದ ನಂತರ ಅನಘಳ ತಂದೆ ಆ ಮಗುವಿಗೆ 1600 ರೂ ಬೆಲೆಬಾಳುವ ಹೊಸ ಸೈಕಲ್ ಕೊಡಿಸಿದ್ದನ್ನು ದಾಖಲಿಸುತ್ತಾರೆ. ಆ ಎರಡು ಮಾಹಿತಿಗಳ ಪರಸ್ಪರ ಸಂಬಂಧ ಮಾತ್ರ ಓದುಗನಿಗೆ ನಿಗೂಢವಾಗಿಯೇ ಉಳಿಯುತ್ತದೆ. ಬಹುಶಃ ಓದುಗನ ಮನದಲ್ಲಿ ಈ ಸಂಬಂಧ ಮೂಡಬೇಕೆಂಬುದು ಲೇಖಕಿಯ ಆಶಯವಾಗಿರಬಹುದು.

ಸಂಕಲನದ ಎಲ್ಲ ಲೇಖನಗಳನ್ನು ಓದಿದ ನಂತರ ಮನದಲ್ಲಿ ಉಳಿಯುವ ಬರಹಗಳೆಂದರೆ 'ಜಳಕ ತಂದ ಪುಳಕ' ಹಾಗೂ 'ಶತಕದ ಹೊಸ್ತಿಲ ಸಾಕಮ್ಮ'. ಕಥೆಗಳ ವಿವರಗಳನ್ನು ತಿಳಿಸಿ ಓದುಗನ ಕುತೂಹಲವನ್ನು ಈ ಹಂತದಲ್ಲೇ ತಣಿಸುವ ಇಚ್ಛೆ ನನಗೆ ಖಂಡಿತ ಇಲ್ಲ. ಒಟ್ಟಿನಲ್ಲಿ ಓದುಗನಿಗೆ ಮುದ ಕೊಡಬಲ್ಲ ಸರಕು ಈ 'ಸಂದೀಲಿ ಸಮಾರಾಧನೆ' ಸಂಕಲನ.

**- ಅಪರಂಜಿ ಶಿವು**

# ಕುಲಪತಿಗಳ ಕತೆ

ತಮ್ಮ ಜೀವಿತದ ಅವಧಿಯನ್ನು ಮುಗಿಸಿದ ವಿಶ್ವವಿದ್ಯಾನಿಲಯಗಳ ಇಬ್ಬರು ಕುಲಪತಿಗಳು ಚಿತ್ರಗುಪ್ತನ ಬಳಿಗೆ ಬರುತ್ತಾರೆ. ಮೊದಲನೆಯವರನ್ನು ಚಿತ್ರಗುಪ್ತ ಪ್ರಶ್ನಿಸುತ್ತಾನೆ. ಅವರ ಉತ್ತರ, 'ನಾನು ಒಂದು ವಿಶ್ವವಿದ್ಯಾನಿಲಯದ ಕುಲಪತಿಯಾಗಿದ್ದೆ'. ಚಿತ್ರಗುಪ್ತನ ಮರುಪ್ರಶ್ನೆ, 'ಎಷ್ಟು ಕಾಲ?' 'ಮೂರು ವರ್ಷಗಳ ಒಂದು ಅವಧಿಗೆ' ಅವರ ಉತ್ತರ. ಚಿತ್ರಗುಪ್ತ ಅಪ್ಪಣೆ ಕೊಡಿಸುತ್ತಾನೆ: 'ಇವರನ್ನು ಸ್ವರ್ಗಕ್ಕೆ ಕಳುಹಿಸಿರಿ'. ಎರಡನೇ ಕುಲಪತಿಗಳು ಬರುತ್ತಾರೆ. ಚಿತ್ರಗುಪ್ತನ ಪ್ರಶ್ನೆ. ಕುಲಪತಿಯ ಉತ್ತರ, 'ನಾನು ಇಂತಹ ವಿಶ್ವವಿದ್ಯಾನಿಲಯದ ಕುಲಪತಿಯಾಗಿದ್ದೆ. ಮೂರು ವರ್ಷಗಳ ಎರಡು ಅವಧಿಯಲ್ಲಿ'. ಚಿತ್ರಗುಪ್ತನ ಆಜ್ಞೆ, 'ಇವರನ್ನು ನರಕಕ್ಕೆ ಕಳುಹಿಸಿರಿ'. ಎರಡನೇ ಕುಲಪತಿ ಚಿತ್ರಗುಪ್ತನೊಡನೆ ವಾದಕ್ಕಿಳಿದರು. 'ಒಂದು ಅವಧಿಗೆ ಕುಲಪತಿಯಾಗಿದ್ದ ಅವರನ್ನು ಸ್ವರ್ಗಕ್ಕೆ ಕಳುಹಿಸಿ, ಎರಡು ಅವಧಿಗೆ ಕುಲಪತಿಯಾಗಿದ್ದ ನನ್ನನ್ನು ನರಕಕ್ಕೆ ಕಳುಹಿಸುವುದು ಅನ್ಯಾಯ'. ಚಿತ್ರಗುಪ್ತ ಮಾರ್ಮಿಕವಾಗಿ ಉತ್ತರಿಸುತ್ತಾನೆ: 'ಅವರು, ಪಾಪ ಮೂರು ವರ್ಷದ ಒಂದು ಅವಧಿಯಲ್ಲಿ ನರಕದಲ್ಲಿದ್ದರು, ಸತ್ತ ಬಳಿಕವಾದರೂ ಸುಖ ಪಡಲಿ ಎಂದು ಸ್ವರ್ಗಕ್ಕೆ ಕಳುಹಿಸಿದೆ. ನೀವು ಮೂರು ವರ್ಷದ ಒಂದು ಅವಧಿಯಲ್ಲಿ ನರಕದಲ್ಲಿ ಇದ್ದು, ಮತ್ತೆ ಅದೇ ನರಕವನ್ನು ಇಷ್ಟಪಟ್ಟು ಮತ್ತೆ ಮೂರು ವರ್ಷ ಅನುಭವ ಪಡೆದಿರುವಿರಿ. ಹೀಗಾಗಿ ನಿಮಗೆ ನರಕ ಚೆನ್ನಾಗಿ ಒಗ್ಗಿಹೋಗಿದೆ. ಹಾಗಾಗಿ ನರಕಕ್ಕೆ ಹೋಗಿ!'

**ಸೌಜನ್ಯ - 'ಪ್ರಜಾವಾಣಿ'**



''ರಿಸೆಷನ್ ಹೀಗೇ ಮುಂದುವರಿದ್ರೆ ಚಾಪೆ ತರಿಸ್ಬೇಕಾಗುತ್ತೋ ಏನೋ''

# ತುಂತುರು

- ದಂನಆ

- ಕುದುರೆ ಗದ್ದರೆ ಬಹುಮಾನ ಸಿಗುವುದು ಅದರ ಯಜಮಾನನಿಗೆ. ಅದಕ್ಕೆ ಸಿಗುವುದು ಹುಲ್ಲು ಮಾತ್ರ.
- If your idea is great people will find you.
- ರಾತ್ರಿ ಇಲಿಯನ್ನು ಬೇಟೆ ಆಡುವ ಮೀಸೆ ಹೊತ್ತ ಬೆಕ್ಕು ಹಗಲು ತಟ್ಟೆ ಹಾಲು ಕುಡಿಯುತ್ತದೆ.
- We have guided missiles but misguided men.
- ಈ ಪುಸ್ತಕ ಬರೆಯಲು ಲೇಖಕರು ಎರಡು ವರ್ಷ ತೆಗೆದುಕೊಂಡರಂತೆ. ನಿಮಗೂ ಅಷ್ಟು ಸಮಯ ಇದ್ದರೆ ಅದನ್ನು ಓದಿ....
- A man does not know what he is saying until he knows what he is not saying.
- ವಾಸ್ತವವಾದಿ ಎಂದರೆ ಸುರಂಗದೊಳಗಿನ ಕತ್ತಲಿಗೆ ಹೆದರಿಕೊಳ್ಳುವ ನಿರಾಶಾವಾದಿಯಲ್ಲ; ಸುರಂಗದ ಕೊನೆಯಲ್ಲಿ ಬೆಳಕು ಸಿಕ್ಕೇ ಸಿಗುತ್ತದೆ ಎಂಬ ಆಶಾವಾದಕ್ಕಷ್ಟೇ ಜೋತು ಬೀಳುವವನಲ್ಲ. ಸುರಂಗವೂ ಇದೆ, ಅದರೊಳಗೆ ಕತ್ತಲೆಯೂ ಇರುತ್ತದೆ, ಕೊನೆಗೆ ಬೆಳಕೂ ಸಿಗುತ್ತದೆ ಎಂಬ ಸಮಗ್ರ ಚಿತ್ರಣದ ಅರಿವುಳ್ಳವನು.
- The only angle from which you can solve a problem is try-angle.
- ಎಸ್‌ಎಂಎಸ್ ಹಿಂದಿರುವ ಶಕ್ತಿ? ಹೆಬ್ಬೆರಳು!
- Organised people are too lazy to find things.
- ಕೇಳುವವನಿಗೆ ಸಾವಿರ ನೌಕರಿ. ಕೊಡುವವನಿಗೆ ಕೊಡಲಿಕ್ಕಿರುವುದು ಒಂದೇ ಉದ್ಯೋಗ.
- ತಪ್ಪು ಮಾಡುವುದು ಮಾನವ ಸಹಜ. ಆದರೆ ಕ್ಷಮಿಸುವುದು ಈ ಕಂಪನಿಯ ಪಾಲಿಸಿ ಅಲ್ಲ.
- ವ್ಯಾಯಾಮ ಎಂಬುದು ಆರೋಗ್ಯದ ಮೇಲೆ ನಾವು ತೆಗೆದುಕೊಳ್ಳುವ ವಿಮಾ ಪಾಲಿಸಿ. ಪ್ರತಿ ದಿನ ಎಕ್ಸರ್‌ಸೈಸ್ ಮಾಡುವುದು ಪ್ರೀಮಿಯಂ ಹಣ ಕಟ್ಟಿದಂತೆ.
- ಜೀವನ ಎಂಬ ಊಟದ ತಟ್ಟೆಯಲ್ಲಿ ಏನೇನಿರಬೇಕು? ಒಂದು ಬಟ್ಟಲು ವಿಚಾರವಾದ; ಒಂದು ಬಟ್ಟಲು ಮೌನ; ಒಂದು ಬಟ್ಟಲು ಭಯ; ಒಂದು ಬಟ್ಟಲು ಉತ್ಸಾಹ; ಎರಡು ಮೀಡಿಯಂ ಸೈಜಿನ ಹಾಸ್ಯದ ತುಣುಕುಗಳು; ತಲಾ ಒಂದು ಬಟ್ಟಲು ಕೋಪ, ತಾಳ್ಮೆ ಮತ್ತು ಉದಾಸೀನತೆ; ಒಂದು ದೊಡ್ಡ ಬಟ್ಟಲಿನಷ್ಟು ಪ್ರೀತಿ. ಬಾಡಿಸಿಕೊಳ್ಳಲು ನಗು, ಬದ್ಧತೆ, ಗೊಂದಲ ಮತ್ತು ಧನಾತ್ಮಕ ಚಿಂತನೆ. ಇದೇ ಫುಲ್ ಮೀಲ್!

# ವಿದ್ಯಮಾನಗಳು

**- ಕು.ಕ.**

ಮತ್ತೊಮ್ಮೆ ಲೋಕಸಭಾ ಚುನಾವಣೆ ಬಂದಿದೆ. ಈಚಿನ ಕೆಲವು ಲೋಕಸಭಾ ಚುನಾವಣೆಗಳ ರೀಕ್ಯಾಪ್: 1991- ಎಲೆಕ್ಷನ್ ಕಮೀಷನ್ ಮೊಟ್ಟಮೊದಲ ಬಾರಿಗೆ ಇಡೀ ದೇಶದಲ್ಲಿ ಎರಡೇ ಹಂತಗಳಲ್ಲಿ ಮತದಾನ ಮುಗಿಸಲು ನಿರ್ಧರಿಸಿತ್ತು. ಅನಿರೀಕ್ಷಿತ ಅನಾಹುತ; ಮೊದಲ ದಿನದ ಪೋಲಿಂಗ್ ಮುಗಿದು ಎರಡನೆಯ ದಿನಕ್ಕೆ ಕಾಯುತ್ತಿದ್ದಾಗ ರಾಜೀವ್ ಗಾಂಧಿ ಬರ್ಬರ ಹತ್ಯೆ; ಅರ್ಧ ದೇಶದಲ್ಲಿ ಸಿಂಪತಿ ಅಲೆ; ಇದರ ಫಲಾನುಭವಿ ಪಿ.ವಿ. ನರಸಿಂಹರಾಯರು; ಆದರೂ ಮೈನಾರಿಟಿ ಸರ್ಕಾರ; ಜಾರ್ಖಂಡ್ ಸದಸ್ಯರ ಮತಗಳನ್ನು ಥೈಲಿಥೈಲಿ ಹಣಕೊಟ್ಟುಕೊಂಡು ಪೂರ್ಣ ಅವಧಿ ಮುಗಿಸಿದ ಪಿವಿಎನ್. 1996 - ಕಾಂಗ್ರೆಸ್‌ಗೆ 120 ಸೀಟುಗಳು, ಬಿಜೆಪಿಗೆ 180 ಸೀಟುಗಳು; ವಾಜಪೇಯಿ 13ದಿನಗಳ ಸುಲ್ತಾನ; ಕಾಮ್ರೇಡ್ ಸುರ್ಜಿತ್- ಮಂಡಲ್ ವಿಪಿ ಸಿಂಗ್ ಜೋಡಿಯ ತಂತ್ರಗಾರಿಕೆ ಮತ್ತು ಹರದನಹಳ್ಳಿ ಈಶ್ವರನಿಂದ ಇನ್ನು ಯಾವುದೋ ಊರಿನ ಶನೀಶ್ವರರವರೆಗೂ ನೂರಾರು ದೇವರುಗಳ ಆಶೀರ್ವಾದಗಳಿಂದ ನಮ್ಮ ಒನ್ ಅಂಡ್ ಓನ್ಲಿ ಒನ್ ದೇವೇಗೌಡರಿಗೆ ಪ್ರಧಾನಿ ಪಟ್ಟ; ಬರಾಬ್ಬರಿ ಒಂಬತ್ತು ತಿಂಗಳಿಗೆ ನಕ್ಕಮ್ಮ - ನಾಲಾಯಖ್ ಎನಿಸಿಕೊಂಡು ಪದ್ಮನಾಭನಗರಕ್ಕೆ ವಾಪಸ್; ಗುಜ್ರಾಲ್‌ಗೆ ಡಿಟೋ. 1998 ವಾಜಪೇಯಿ ಅವರ ಸೆಕೆಂಡ್ ಇನ್ನಿಂಗ್ಸ್; ಜಯಲಲಿತ ಅವರ ಕ್ಷಣ ಚಿತ್ತಂ ಕ್ಷಣ ಪಿತ್ಥಂ ಇನ್ ಆಕ್ಷನ್; ಒಂದೇ ವರ್ಷದಲ್ಲಿ ಮತ್ತೆ ಚುನಾವಣೆ. 1999- ಕಾರ್ಗಿಲ್ ಯುದ್ಧದಲ್ಲಿನ ವಿಜಯದ ಹಿನ್ನೆಲೆಯಲ್ಲಿ ನಡೆದ ಚುನಾವಣೆಯಲ್ಲಿ ವಾಜಪೇಯಿ ನೇತೃತ್ವದ ಎನ್‌ಡಿಎಗೆ ನಿಚ್ಚಳ ಬಹುಮತ: 2004- ಭಾರತ ಥಳಥಳ ಹೊಳೆಯುತ್ತಿದೆ ಎನ್ನುವ ಭ್ರಮೆಯಲ್ಲಿದ್ದವರಿಗೆ ದೊಡ್ಡ ಆಘಾತ. ಕಾಂಗ್ರೆಸ್‌ಗೆ ಅನಿರೀಕ್ಷಿತ ವಿಜಯ; ಮಹಾತ್ಯಾಗಿ ಸೋನಿಯಾ; ವಾರಸುದಾರರು ಪ್ರಾಯಕ್ಕೆ ಬರುವ ಮುನ್ನಿನ ರಿಜೆಂಟ್ ರೂಲ್, ಒಬ್ಬರು de jure ಪ್ರಧಾನಿ ಮತ್ತೊಬ್ಬರು de facto ಪ್ರಧಾನಿ ಎನ್ನುವ ಮೂದಲಿಕೆಗಳ ನಡುವೆ ಸೋನಿಯಾ/ಮಮೋಸಿಂ ಪೂರ್ಣಾವಧಿ ಅಧಿಕಾರ. ಸೋನಿಯಾ ಅಧಿಕಾರದ ಕೇಂದ್ರ, ಆಕೆಯ ಅಪ್ಪಣೆಯಿಲ್ಲದೆ ತೃಣಮಪಿ ನ ಚಲತಿ. ಹಲವರಲ್ಲಿ, ಆದರೂ ಸರ್ಕಾರ ಕೆಲಸಮಾಡಿತು, ಸುಲಲಿತವಾಗಿಯೇ ನಡೆಯಿತು ಎನ್ನುವ ತೃಪ್ತಿ.

★★★

ಈಗ ಐದು ವರ್ಷಗಳ ಪೂರ್ಣಾವಧಿ ಮುಗಿದು ಮತ್ತೆ ಚುನಾವಣೆ ಬಂದಿದೆ. ಕೆಲವು ರಾಜ್ಯಗಳ ಮತದಾರರ ಮುಂದೆ ಅವರೋ ಇವರೋ ಎನ್ನುವ ಸರಳ ಪ್ರಶ್ನೆ, ಮತ್ತೆ ಕೆಲವು ರಾಜ್ಯಗಳ ಜನರ ಮುಂದೆ ಯಾರು ಹಿತವರು ಈ ಮೂವರಲ್ಲಿ ಎನ್ನುವ ಹೆಚ್ಚು ಕಷ್ಟವಲ್ಲದ ಪ್ರಶ್ನೆ ಮತ್ತೆ ಕೆಲವು ರಾಜ್ಯಗಳಲ್ಲಿ ಇವರ ಬಿಟ್ಟು ಅವರ ಬಿಟ್ಟು ಮತ್ತೊಬ್ಬರನ್ನು ಬಿಟ್ಟು ಮುಗದೊಬ್ಬರನ್ನೂ ಬಿಟ್ಟು ಇನ್ನು ಯಾರು ಎನ್ನುವ ತಲೆನೋವು ತರಿಸುವ ಪ್ರಶ್ನೆ. ಏನೇ ಇರಲಿ

ಒಟ್ಟಿನಲ್ಲಿ ನಮ್ಮ ದೇಶದ ಜನ ಸರಿಯಾಗೇ ಆರಿಸುತ್ತಾರೆ. ಆದರೆ ಜನರ ಆಯ್ಕೆಯನ್ನು ನಾಯಕರುಗಳು ತಲೆಕೆಳಗು ಮಾಡುತ್ತಾರೆ. ಒಟ್ಟು ದೇಶವನ್ನು ನೋಡಿದಾಗ ಇದು ನೇರ ಚುನಾವಣೆ ಒಂದು ಕಡೆ ಮಮೋಸಿಂ/ಸೋನಿಯಾ ಮತ್ತೊಂದು ಕಡೆ (ಸಾಕಷ್ಟು ತುಕ್ಕು ಹಿಡಿದಿರುವ) ಉಕ್ಕಿನ ಮನುಷ್ಯ. ಆದರೆ ವಾಸ್ತವ ಮಾತ್ರ ಭಿನ್ನ. ಮಾಯಾವತಿ, ಜಯಲಲಿತ, ಶರದ್ ಪವಾರ್, ಲಾಲು ಪ್ರಸಾದ್, ಮುಲ್ಯಾಂ ಸಿಂಗ್ ಎಲ್ಲರಿಗೂ ಪ್ರಧಾನಿಯಾಗುವ ಆಸೆ. ಜೊತೆಗೆ ನೂರಾರು ಕರಿಕುದುರೆಗಳು (black horses). ಎರಡು ದೊಡ್ಡ ಪಕ್ಷಗಳು, ಎಂಟು ಹತ್ತು ಮಧ್ಯಮ ಗಾತ್ರದ ಪಕ್ಷಗಳು. ನೂರಾರು ಚಿಲ್ಲರೆ ಪಕ್ಷಗಳು. ರಾಜಕೀಯ ಪಂಡಿತರ ಪ್ರಕಾರ 554 ಸದಸ್ಯರ ಲೋಕಸಭೆಯಲ್ಲಿ ಈ ಚುನಾವಣೆಯಲ್ಲಿ ಯಾವುದೇ ಒಂದು ಪಕ್ಷಕ್ಕೆ 150ಕ್ಕಿಂತ ಹೆಚ್ಚು ಸೀಟು ಸಿಗಲಾರದಂತೆ. ಕುದುರೆ ಮಾರಾಟಕ್ಕೆ ಮುಕ್ತ ಅವಕಾಶ. ಕುದುರೆಗಳು ತಮ್ಮನ್ನು ಕುಮರೆಗಳೆಂದು ಕರೆದುಕೊಳ್ಳಬೇಕಾಗಿಲ್ಲ. ಆಂಟಿ ಕಮ್ಯೂನಲ್, ಆಂಟಿ ಫ್ಯೂಡಲ್, ಆಂಟಿ ಫಾರಿನರ್ ಆಂಟಿ – ಕಾಂಗ್ರೆಸ್, ಆಂಟಿ– ಬಿಜೆಪಿ ಇತ್ಯಾದಿ ಆಕರ್ಷಕ ಲೇಬಲ್ಲುಗಳನ್ನು ಅಂಟಿಸಿಕೊಳ್ಳಬಹುದು. ಇಂಡಿಪೆಂಡೆಂಟ್ ಆಗಿ ಆರಿಸಿಬಂದವರಿಗೆ sky is the limit. ಐದು ಹತ್ತು ಸದಸ್ಯರಿರುವ ಪಕ್ಷಗಳ ನಾಯಕರುಗಳಿಗೆ ಬ್ಲಾಕ್ ಮೇಲ್ ಮಾಡಲು ಇನ್ನೂ ಹೆಚ್ಚಿನ ಅವಕಾಶಗಳು.

★★★

ಹೊಸ ಲೋಕಸಭೆಗಾಗಿ ಇಡೀ ದೇಶದಲ್ಲಿ ನಡೆಯಲಿರುವ ಈ ಚುನಾವಣೆಯಲ್ಲಿ ಕರ್ನಾಟಕಕ್ಕೆ ಮುಖ್ಯ ಪಾತ್ರವಿದೆಯಂತೆ. ಮುಖ್ಯಮಂತ್ರಿ ಬಿಎಸ್‌ವೈ ಇಲ್ಲಿಂದ ಇಪ್ಪತ್ತು ಬಿಜೆಪಿ ಸದಸ್ಯರನ್ನು ಗೆಲ್ಲಿಸುವುದಾಗಿ ಖಾತ್ರಿ ಕೊಟ್ಟಿದ್ದಾರಂತೆ. ಮಲ್ಲಿಕಾರ್ಜುನ ಖರ್ಗೆಗೆ ಕಾಂಗ್ರೆಸ್ 20 ಕ್ಷೇತ್ರಗಳಲ್ಲಿ ಗೆದ್ದೇ ಗೆಲ್ಲುತ್ತದೆ ಎನ್ನುವ ಭರವಸೆ. ಆದರೆ ಜೆಡಿಎಸ್ ಪಕ್ಷದವರು ಅಲ್ಪ ತೃಪ್ತರು. ಅವರಿಗೆ ಹದಿನೈದು ಸೀಟ್ ಸಿಕ್ಕರೆ ಸಾಕಂತೆ. ಆ ಹುದ್ದೆಯಲ್ಲಿ ಖುದ್ದು ಅನುಭವವಿರುವವರೇ ನನಗೆ 15 ಜನ ಸದಸ್ಯರನ್ನು ಕೊಡಿ ಪ್ರಧಾನಿಗಳ ಕಾಲರ್ ಹಿಡಿದು ಎಳೆದುಕೊಂಡು ಬರುತ್ತೇನೆ ಎಂದು ಹೇಳಿದ್ದಾರಲ್ಲ!

❖

---

## ಬೇಡಿಕೆ!

ಬಡ ರೈತನೊಬ್ಬನಿದ್ದ. ಮನೆಯಿಂದ ಬಹುದೂರದ ಹೊಲ ತಲುಪಿದಾಗ ಆತನಿಗೆ ತಾನು ಪ್ರಾರ್ಥನೆಯ ಪುಸ್ತಕ ಮನೆಯಲ್ಲಿಯೇ ಬಿಟ್ಟು ಬಂದಿದ್ದು ನೆನಪಾಯ್ತು. ತಕ್ಷಣ ಆತ ದೇವರ ಬಳಿ ಕ್ಷಮೆ ಕೋರಿದ. "ದೇವರೇ ನನ್ನನ್ನು ಕ್ಷಮಿಸು. ನನಗೆ ಮರೆವು ಜಾಸ್ತಿ ಎಂದು ನಿನಗೆ ಗೊತ್ತಲ್ಲ, ಪ್ರಾರ್ಥನೆಯ ಪುಸ್ತಕವಿಲ್ಲದೇ ನಾನು ಪಠಿಸಲಾರೆ." ಅನಂತರ ಆತ 'ಅ'ದಿಂದ 'ಜ್ಞ'ದವರೆಗೆ ಅಕ್ಷರಮಾಲೆಯ ಎಲ್ಲ ಅಕ್ಷರಗಳನ್ನು ಐದು ಬಾರಿ ದೊಡ್ಡದಾಗಿ ಹೇಳಿದ. "ದೇವರೇ ನೀನು ದಯಾಮಯಿ. ನಿನಗೆ ಎಲ್ಲವೂ ತಿಳಿದಿದೆ. ಈ ಅಕ್ಷರಗಳನ್ನು ಪ್ರಾರ್ಥನೆಯಾಗಿಸುವಂತೆ ಜೋಡಿಸಿಕೊ" ಎಂದು ವಿನಮ್ರವಾಗಿ ಬೇಡಿಕೊಂಡ.

# ನಾಡಿ ಮಿಡಿತ

**- ಕೃಷ್ಣ ಸುಬ್ಬರಾವ್**

ವಾಲ್ಟೇರ್, ಷಾ ಮತ್ತು ಮೋಲಿಯರ್‌ನ ಹಾಸ್ಯವೈಖರಿಯನ್ನು ಅತ್ಯಂತ ಜಾಣತನದಿಂದ ಕನ್ನಡಕ್ಕೆ ತಂದ ಲೇಖಕರೆಂದರೆ ನಾಡಿಗೇರ್ ಕೃಷ್ಣರಾಯರು. ಅವರದು ಮನಸ್ಸಿಗೆ ಮುದ ನೀಡುವ ಹಾಸ್ಯ. ಯಾರನ್ನೂ ನೋಯಿಸದ ಹಾಸ್ಯ. ಅವರ ಪ್ರಕಾರ ಹಾಸ್ಯ ಲೇಖಕನ ಕೆಲಸವೆಂದರೆ ಇವರನ್ನು ನಗಿಸುವುದು. ನಗಿಸುವುದರ ಮೂಲಕ ಅವರ ತಪ್ಪುಗಳನ್ನು ಅವರ ಮುಖಕ್ಕೆ ಹಿಡಿಯುವುದು ಇದರಿಂದ ಅವರು ಸಮಾಜ ನಿರ್ಮಾಪಕರಲ್ಲಿ ಒಂದು ವಿಶಿಷ್ಟ ಸ್ಥಾನ ಗಳಿಸಲು ಸಾಧ್ಯವೆಂದು ನಂಬಿಕೆ.

ನಾಡಿಗೇರರ ಹಾಸ್ಯದ ಮಾದರಿಯನ್ನು ಓದಿಯೇ ಆನಂದಿಸಬೇಕು.

★★★

ಹೋಟೆಲ್‌ನ ಊಟ ಆರೋಗ್ಯಕಾರಿಯೆಂದು ನನ್ನ ವಾದ. ಅದನ್ನು ತಿಂದು ಬೇಸರ ಹೊಂದಿರುವವರು ಹೆಚ್ಚಿಗೆ ತಿನ್ನುವುದೇ ಇಲ್ಲ, ಅವರಿಗೆ ಅಜೀರ್ಣವೆಂಬುದೇ ಇರುವುದಿಲ್ಲ, ಹೀಗಾಗಿ ಅವರ ಆರೋಗ್ಯ ಕೆಡುವುದೇ ಇಲ್ಲ.

★★★

ಮಹಾತ್ಮಾ ಗಾಂಧಿಯವರು ಪರದೇಶಿ ವಸ್ತುಗಳನ್ನು ಸುಡಬೇಕೆಂದು ಕರೆಕೊಟ್ಟಾಗ ದೇಶಭಕ್ತನಾದ ನಾನು ಸಿಗರೇಟ್ ಸುಡುವುದಕ್ಕಾರಂಭಿಸಿದೆ.

★★★

ಮನುಷ್ಯ ತನ್ನ ಪಾಡಿಗೆ ತಾನು ಸಾಯುವುದನ್ನು ಬಿಟ್ಟು ಹುಲ್ಲುಕಡ್ಡಿಯನ್ನು ಹಿಡಿಯಲು ಪ್ರಯತ್ನಿಸಿ ಪ್ರಾಣ ಕಳೆದುಕೊಂಡು ಎಲ್ಲರೂ ಹುಲ್ಲನ್ನು ದೂರುವಂತೆ ಮಾಡಿದ್ದಾನೆ.

★★★

ಕಟ್ಟಿದ್ದ ಮನೆಗೆ ಲೇಕ್‌ವ್ಯೂ, ಪಾರ್ಕ್‌ವ್ಯೂ, ಹಿಲ್ ವ್ಯೂ ಅಂತಾ ನಾಮಕರಣ ಮಾಡ್ತಾರೆ ಜನ. ಆದರೆ ನಾನು ಕಟ್ಟಿಸಬೇಕೆಂದಿರುವ ಮನೆಯ ಎದುರಿಗೆ ಒಂದು ದೊಡ್ಡ ಮೋರಿ ಇರುವುದರಿಂದ 'ಗಟರ್ ವ್ಯೂ' ಅಂತ ಹೆಸರಿಡಬೇಕೆಂದಿದ್ದೇನೆ.

★★★

ಡಾಕ್ಟರ್ ಮದುವೆಯಾದಾಗ ವಧುವಿನ ಕೈ ಹಿಡಿದು ಸುತ್ತು ಹೊಡೆಯಲು ಪುರೋಹಿತರಿಂದ ಆಜ್ಞೆ ಬಂದ ತಕ್ಷಣ ಡಾಕ್ಟರ್ ವಧು ಕೈ ಹಿಡಿದು 'ನಾಲಿಗೆ ತೆಗೆಯಮ್ಮ' ಎಂದು ಕೇಳುತ್ತಾನೆ. ಏನ್ ಮಾಡೋದು ಅದು ವೃತ್ತಿಯ ಪ್ರವೃತ್ತಿ.

★★★

ಕೆಲವು ಪಟ್ಟಿಕೆಗಳ ವಿಶೇಷ ಸಂಚಿಕೆಗಳನ್ನು ನೋಡಿದಾಗ ''ಜಾಹೀರಾತಿನೊಳಗೆ ನೀನೋ, ನಿನ್ನೊಳಗೆ ಜಾಹಿರಾತೋ ಎಂದೆನಿಸುತ್ತದೆ. ಕೆಲ ಜಾಹೀರಾತುಗಳು ಲೇಖನಗಳಿದ್ದಂತೆ

ಇರುತ್ತದೆ. ಮೊಟ್ಟಮೊದಲು ಗೀತೆಯ ಒಂದು ಶ್ಲೋಕ, ನಾವು ಈ ಜಗತ್ತಿಗೆ ಬಂದ ಮೇಲೆ ನಾವು ಮಾಡಲೇಬೇಕಾದ ಕರ್ತವ್ಯ ಕರ್ಮಗಳು ಈ ಕಾರಣದಿಂದಲೆ ನಾವು ರಹೀಂ ಜಾಡಿಬೀಡಿಗಳನ್ನು ಸೇದಬೇಕು.

★★★

ಒಂದು ಅನುಭವಕ್ಕಿಂತ ಎರಡು ಅನುಭವ ಮೇಲು ಎಂದು ನಿರ್ಧರಿಸಿ ಎರಡು ಮದುವೆಯಾದವನ ಅನುಭವ ಕೇಳಲಾಗಿ ಅವನು ಹೇಳಿದ "ನನ್ನ ಮೊದಲಿನ ಹೆಂಡತಿ ಓಡಿಹೋದಳು ಬಹಳ ತೊಂದರೆಪಟ್ಟೆ, ಎರಡನೆ ಹೆಂಡತಿ ಓಡಿ ಹೋಗಲೊಲ್ಲಳು. ಬಹಳ ತೊಂದರೆ ಪಡುತ್ತಿದ್ದೇನೆ". ಯಾವ ವ್ಯವಸ್ಥೆಯಲ್ಲೂ ವ್ಯತ್ಯಾಸವಿಲ್ಲದ್ದು ನಿರಾಸೆಯಾಯಿತು ಪ್ರಶ್ನೆ ಕೇಳಿದ ಬ್ರಹ್ಮಚಾರಿಗೆ.

★★★

ಕ್ಷೌರಿಕನು ಮಾನವನಿಗೆ ಕೊಡಬೇಕಾದ ಮರ್ಯಾದೆ ಕೊಡದೆ ಅವನ ಅಸಹಾಯಕತೆಯನ್ನು ದುರುಪಯೋಗಪಡಿಸುತ್ತಾನೆ. ನಡಗುವ ಕೈಯಲ್ಲಿ ಕತ್ತಿ ಹಿಡಿದು ಆಟಂಬಾಂಬ್, ಕ್ವಿಟ್ ಇಂಡಿಯಾ ಪಾಕಿಸ್ತಾನ ಯುದ್ಧದ ಬಗ್ಗೆ ನಿಮ್ಮ ಅಭಿಪ್ರಾಯವೇನು ಅಂತ ಬೇರೆ ಕೇಳುತ್ತಾನೆ.

❖




ಶಾರ್ಕ್‌ನೊಂದಿಗೆ ನಮ್ಮ ದಂತ ವೈದ್ಯರ ಸಮಾಗಮ!

# ಮೈಸೂರು ಮೊಬೈಲ್ ಮಾಲ್

**- ಚಿತ್ರಾ ರಾಮಚಂದ್ರನ್**

"ಇಲ್ಲೇ ನಿಲ್ಲುತ್ತಿತ್ತೆ? ಇಷ್ಟು ಎತ್ತರವಿತ್ತೆ? ಅಷ್ಟು ದೊಡ್ಡದಾಗಿತ್ತೆ?" ಮೈಸೂರನ್ನ ತಲುಪಿ ಮನೆಯ ಮೆಟ್ಟಲು ತುಳಿಯೋದರಲ್ಲಿ, ತನ್ನ ಉತ್ಸಾಹಭರಿತ ಪ್ರಶ್ನೆಗಳ ಮಳೆಗರೆಯ ತೊಡಗಿದಳು ನನ್ನ ಮೊಮ್ಮಗಳು ಧೃತಿ. ಅವಳ ಲವಲವಿಕೆ, ಕುತೂಹಲಭರಿತ ವರ್ತನೆ ಕಂಡು ಅಮ್ಮ ನಕ್ಕಳು.

"ಯಾವುದರ ಬಗ್ಗೆ ಇಷ್ಟು ವಿಚಾರಿಸ್ತೀಯೇ ಮರಿ?"

"ಏನಾದರೂ ಬೇಕಾದ್ರೆ ನಾವು ಮಾಲಿಗೆ ಹೋಗ್ತೀವಿ. ಆದ್ರೆ ನೀವ್ಯಾರೂ ಮಾಲಿಗೆ ಹೋಗಲೇ ಬೇಕಿರಲಿಲ್ಲವಂತೆ? ಮಾಲೇ ಮನೆಗೆ ಬರ್ತಿತ್ತಂತೆ?" ಧೃತಿ ಕಣ್ಣರಳಿಸಿ ಹರಳು ಹುರಿದಂತೆ ಮಾತನಾಡಿದಳು.

"ಈಗ್ಲೂ ಬರತ್ಯೇ ಅಜ್ಜಿ? ನಾನು ನೋಡ್ಬೇಕಲ್ಲ."

ಮಗುವಿನ ಮಾತು ಅರ್ಥವಾಗದೆ ತನ್ನ ಅಮ್ಮ ಕಣ್ಣಕಣ್ ಬಿಟ್ಟಳು. "ಮೈಸೂರ್ ಅಜ್ಜಿ ಅವಳು ಮೈಸೂರ್ ಮೊಬೈಲ್ ಮಾಲ್ ಬಗ್ಗೆ ಕೇಳ್ತಿದ್ದಾಳೆ" ಸ್ವಲ್ಪ ಬೆಳೆದಿದ್ದ ಮೊಮ್ಮಗ ಆಕಾಶ್ ವಿವರಿಸಿದ. "ಮೊಬೈಲ್ ಮಾಲು! ಅದೇನಪ್ಪ ಅದು? ನಿಮ್ಮಜ್ಜಿ ಮೈಸೂರ ಬಗ್ಗೆ ಅದೇನೆಲ್ಲ ಹೇಳಿದ್ದಾಳೋ ನಾಕಾಣೆ!" ಅಮ್ಮ ಗೊಂದಲಕ್ಕೊಳಗಾದಳು.

"ಅಯ್ಯೋ! ನಾನೇನೂ ಇಲ್ಲದ್ದನ್ನ ಹೇಳಿಲ್ಲಮ್ಮ. ನಮ್ಮ 'ಟಿನ್ ಟಿನ್ ಗಾಡಿ'ಯನ್ನೇ ಮೊಬೈಲ್ ಮಾಲ್ ಅಂತ ಸ್ಟೈಲಾಗಿ ಹೇಳ್ತಿವೆ ಮಕ್ಳು." ಅಮ್ಮನಿಗೆ ಅರ್ಥವಾಯಿತು.

'ಓ ಟಿನ್ ಟಿನ್ ಗಾಡಿಯೇ? ಈಗ್ಲೂ ಇದ್ದಿದ್ರೆ ಚೆನ್ನಾಗಿರೋದು. ನನ್ಗೆ ಹೊರಗೆ ಹೋಗಕ್ಕೆ ಆಗ್ತಿಲ್ಲ. ಒಂದು ಪಿನ್ನು ಬೇಕಿದ್ರೂ ಯಾರಿಗಾದ್ರೂ ಹೇಳಿ ತರಿಸ್ಬೇಕು" ಅಮ್ಮ ಅಂಗಲಾಚಿಕೊಂಡಳು.

ಪಿನ್ನು ಮಾತ್ರವಲ್ಲ. ಸೈಕಲ್ ಚಕ್ರಗಳಂತಹ ನಾಲ್ಕು ದೊಡ್ಡ ಚಕ್ರಗಳಿಂದ ಕೂಡಿದ್ದ ಆ ಕೈ ಬಂಡಿಯಲ್ಲಿ ಸೂಜಿಯಿಂದ ಹಿಡಿದು ಆನೆಯವರೆಗೆ ಏನು ಬೇಕಾದರೂ ಸಿಗುತ್ತಿತ್ತು. ಎರಡು ಪಕ್ಕಗಳಲ್ಲೂ ತೂಗು ಬಿಟ್ಟಿದ್ದ ಬಣ್ಣ ಬಣ್ಣದ ವಸ್ತುಗಳು ಅಲುಗಾಡುತ್ತಿರಲು 'ಟಿನ್ ಟಿನ್' ಎಂಬ ಗಂಟೆಯ ನಾದದೊಡನೆ, ಅಲಂಕರಿಸಲ್ಪಟ್ಟ ಗುಡಿಯ ತೇರಿನಂತೆ ಮನೆಯ ಮುಂದೆ ಬಂದು ನಿಲ್ಲುತ್ತಿತ್ತು ನಮ್ಮ ಮೊಬೈಲ್ ಮಾಲ್.

ಗಂಟೆಯ ಶಬ್ದ ಕೇಳಿದ ಕೂಡಲೆ ಮನೆಯ ಯಾವ ಮೂಲೆಯಲ್ಲಿದ್ದರೂ ಹಾರಿಕೊಂಡು ಬರುತ್ತಿದ್ದೆವು ನಾನು ಮತ್ತು ನನ್ನ ಒಡಹುಟ್ಟಿದ ಪುಟಾಣಿಗಳು. ಅಮ್ಮ, ರಾಜಮ್ಮ, ಮುದ್ದ, ನಿಂಗಿ ಎಲ್ಲರೂ ಬಂದು ಗಾಡಿಯನ್ನು ಸುತ್ತುವರೆದುಕೊಳ್ಳುತ್ತಿದ್ದರು. ತಾತ ಕೂಡ ದೂರದಲ್ಲೇ ನಿಂತು ತಲೆಯನ್ನು ಸವರಿಕೊಳ್ಳುತ್ತ 'ಅಮ್ಮ' ಎಂದು ನಮ್ಮ ತಾಯನ್ನ ಕರೆದು, ತನಗೆ ಬೇಕಾದ ಸಾಮಾನುಗಳನ್ನು ಜ್ಞಾಪಿಸಿ ಹೋಗುತ್ತಿದ್ದರು. ಈ ಸರಳವಾದ ಕೈ ಬಂಡಿಯಲ್ಲಿ ಇಷ್ಟು ಜನರಿಗೆ ಬೇಕಾದ ಸಾಮಾನುಗಳು ಇರಬಹುದೇ ಎಂದು ಯೋಚಿಸುವಂತೆಯೇ ಇರಲಿಲ್ಲ.

ಗಾಡಿ ಬಂದಾಗಲೆಲ್ಲ ಅಮ್ಮ ತಪ್ಪದೆ ಕೊಂಡುಕೊಳ್ಳುತ್ತಿದ್ದ ವಸ್ತುವೆಂದರೆ ಲಂಗದ ಲಾಡಿಯ ಸುರುಳಿಗಳು. ಅದೇನು ಜೀರ್ಣವಾಗಿ ಹೋಗುವ ವಸ್ತುವೇ? ಅದೇಕೆ ಅಷ್ಟು ಲಾಡಿಗಳ ಸುರುಳಿಗಳು ಎಂದು ಆಶ್ಚರ್ಯಗೊಳ್ಳಬೇಕಾದ್ದಿಲ್ಲ.

ನಮ್ಮದು ಹಳೆಯ ಕಾಲದ ಸುಮಾರಾದ ದೊಡ್ಡ ಬಂಗಲಿ. ತಾತನಿಗೊಂದು, ತನ್ನ ತಂದೆಯವರಿಗೆ ಒಂದು ಮತ್ತು ತೊಂಬತ್ತಾರು ವರ್ಷಗಳು ತುಂಬಿದ್ದ ನನ್ನ ಮುತ್ತಜ್ಜಿಗೂ ಅವರನ್ನ ನೋಡಿಕೊಳ್ಳುತ್ತಿದ್ದ ರಾಜಮ್ಮನಿಗೂ ಸೇರಿ ಒಂದರಂತೆ ಮೂರು ಕೊಠಡಿಗಳು ಮನೆಯ ಎಡಭಾಗದಲ್ಲಿದ್ದವು. ಇವುಗಳ ಎದುರಿನಲ್ಲಿ ಈ ಮೂರು ಕೊಠಡಿಗಳನ್ನು ಸೇರಿಸಿದರೆ ಆಗುವಷ್ಟು ಉದ್ದವಿದ್ದ ಒಂದು ಕೊಠಡಿಯನ್ನು ಅಮ್ಮನ ಜೊತೆ ನಾವು ನಾಲ್ಕು ಜನ ಮಕ್ಕಳೂ ಹಂಚಿಕೊಂಡಿದ್ದೆವು. ಸೋದರತ್ತೆಯ ಮಕ್ಕಳು, ಸೋದರ ಮಾವನ ಮಕ್ಕಳು ಯಾರೇ ಬಂದರೂ ಇದೇ ಕೋಣೆಯಲ್ಲಿ ನಮ್ಮ ಜೊತೆಯೇ ಮಲಗುತ್ತಿದ್ದರು.

ಗೋಡೆಯ ಪಕ್ಕವಿರಿಸಿದ್ದ ಮಂಚದ ಮೇಲೆ ಒಂದರ ಮೇಲೊಂದು ಜೋಡಿಸಿದ್ದ ಹಾಸಿಗೆಗಳನ್ನು ನೆಲಕ್ಕೆ ಎಳೆದು ಹಾಕಿ, ಕೊಠಡಿಯ ತುಂಬ ಹಾಸಿಕೊಂಡು ನಾವೆಲ್ಲ ನಕ್ಕು ನಲಿಯುತ್ತ ಮಲಗುತ್ತಿದ್ದೆವು. ನಮ್ಮ ತಂದೆಯವರು ಈ ಕೋಣೆಗೆ ರೈಲ್ವೇ ಫ್ಲಾಟ್‌ಫಾರ್ಮ್ ಎಂದೇ ಹೆಸರಿಟ್ಟಿದ್ದರು.

ಏನೇ ಆಗಲಿ, ಮಲಗುವಾಗ ಸೊಳ್ಳೆ ಪರದ ಕಟ್ಟಿಕೊಂಡೇ ಮಲಗಬೇಕೆಂಬುದು ನಮ್ಮ ಮನೆಯ ನಿಯಮವಾಗಿತ್ತು. ನಮ್ಮ ಕೋಣೆಗೆ ಪ್ರತ್ಯೇಕವಾಗಿ ಒಬ್ಬ ದರ್ಜಿಯನ್ನು ಕರೆಸಿ ಕೊಠಡಿಯಷ್ಟೇ ಉದ್ದ ಅಗಲವಿರುವ ಒಂದು ಸೊಳ್ಳೆ ಪರದವನ್ನು ಹೊಲಿಸಿದ್ದಳು ಅಮ್ಮ. ಅತಿ ದೊಡ್ಡದಾಗಿದ್ದ ಅ ಪರದೆಯ ಸುತ್ತ ಸಮಾನಾಂತರಗಳಿದ್ದ ಲೂಪ್‌ಗಳಿಗೆ ಸ್ಯಾಟೀನ್ ಟೇಪುಗಳನ್ನು ಪೋಣಿಸಿ ಕೊಠಡಿಯಲ್ಲಿದ್ದ ಕಿಟಕಿಗಳ ಕಂಬಿಗಳಿಗೂ, ಬೀರೊ ಕೈಪಿಡಿಗಳಿಗೂ ಕಟ್ಟಿ ಆ ಸೊಳ್ಳೆ ಪರದೆಯ ಗುಡಾರದಲ್ಲಿ ನಗುತ್ತ, ಮಾತನಾಡುತ್ತ, ಕಥೆ ಹೇಳುತ್ತ, ಜಗಳವಾಡುತ್ತ ಮಲಗುತ್ತಿದ್ದೆವು.

ಕಾಲಕ್ರಮೇಣ ಸ್ಯಾಟಿನ್ ದಾರಗಳೆಲ್ಲ ನಮ್ಮ ಮಂಗಾಟಕ್ಕೆ ಕಿತ್ತುಹೋಗಿ ಕೈಕೊಡಲಾರಂಭಿಸಿದವು. ಆ ಸಮಯ, ಅಮ್ಮನ ಲಂಗದಿಂದ ಸರಕ್ಕೆಂದು ಸೆಳೆಯಲ್ಪಟ್ಟ ಲಾಡಿಗಳೇ ನಿಜವಾಗಿ ಕೈಕೊಡುತ್ತಿದ್ದವು.

ಮುತ್ತಜ್ಜಿ ಮೈಸೂರಿನಲ್ಲೇ ಇದ್ದ ತನ್ನ ಮಗಳಿಗೆ ಆಗಾಗ್ಗೆ ಏನಾದರು ತಿಂಡಿ ತಿನಿಸುಗಳನ್ನು ಕೊಟ್ಟು ಕಳುಹಿಸುತ್ತಿದ್ದರು. ಪೊಟ್ಟಗಳಲ್ಲಿ ಕಟ್ಟಿ ಸೈಕಲ್ ಕ್ಯಾರಿಯರಲ್ಲಿಟ್ಟು ಕಳುಹಿಸುತ್ತಿದ್ದಳು. ಸೈಕಲ್ ಹೊಡೆದುಕೊಂಡು ಹೋಗುವುದೊಂದೇ ಮುದ್ದನ ಕೆಲಸ. ಲಕ್ಷ್ಮಿ ಅತ್ತೆಯ ಮನೆಯಲ್ಲಿ ಅವರೇ ಪೊಟ್ಟಗಳನ್ನು ಸೈಕಲ್ಲಿನಿಂದ ಬಿಚ್ಚಿ ತೆಗೆದುಕೊಳ್ಳುತ್ತಿದ್ದರು. ಅಜ್ಜಿಗೆ ವಯಸ್ಸಾದ ಕಾರಣ ಕೈಕಾಲುಗಳು ಬಿದ್ದು ಹೋಗ ತೊಡಗಿದಾಗ, ರಾಜಮ್ಮನ ಕೈಯಲ್ಲಿ ಈ ಕೆಲಸವನ್ನು ಮಾಡಿಸುತ್ತಿದ್ದರು.

ನಿಮಗೂ ಅನುಭವವಾಗಿರಬಹುದು. ಬೇಕಾದ ಸಮಯಗಳಲ್ಲಿ ಕೈಗೆ ಸಿಗದೆ ಕಣ್ತಪ್ಪಿಸಿ

ನಮ್ಮನ್ನು ಪೇಚಾಡಿಸುವುದರಲ್ಲಿ ಮೊದಲನೇ ಸ್ಥಾನ ವಹಿಸುವುದು ಲಾಡಿ, ದಾರ, ಹಗ್ಗ ಮುಂತಾದ ಈ ಅಲ್ಪ ವಸ್ತುಗಳೇ. ಆದರೆ ರಾಜಮ್ಮನಿಗೋ ಯಾವ ಪೇಚಾಟವೂ ಇರಲಿಲ್ಲ. ಒಗೆದು ಬಿಸಿಲಿಗೆ ಹಾಕಿದ್ದ ಅಮ್ಮನ ಲಂಗದಿಂದ ಯಾವ ಅಳುಕೂ ಇಲ್ಲದೆ, ಲಾಡಿಯನ್ನು ಕಸಿದುಕೊಂಡು ತನ್ನ ಕಾರ್ಯ ಮುಂದುವರಿಸುತ್ತಿದ್ದರು.

ನನ್ನ ತಮ್ಮಂದಿರು ಬುಗುರಿಯಾಡಬೇಕಾದರೂ ಸರಿ ಕಾಲಿಗೆ ಕ್ರಿಕೆಟ್ ಪ್ಯಾಡ್ ಕಟ್ಟಿಕೊಳ್ಳಬೇಕಾದರೂ ಸರಿ, ಖಾಲಿ ಸೀಸೆಯವನಿಗೆ ಹಾಕಲೆಂದು ಹಳೆಯ ಪೇಪರುಗಳನ್ನು ಕಟ್ಟಲು ತಾತ ಕೇಳಿದರೆಂದರೂ ಸರಿ, ತಟ್ಟನೆ ಇಬ್ಬರೂ ಕೈ ಹಾಕುತ್ತಿದ್ದದ್ದು ಅಮ್ಮನ ಲಂಗದ ಲಾಡಿಗೆ. ಎಷ್ಟು ಹೊಸ ಲಾಡಿಗಳನ್ನು ಖರೀದಿಸಿಟ್ಟರೂ ಅನೇಕ ಒಗೆತಗಳಿಂದ ತಿರುಚಿಕೊಂಡಿದ್ದ, ಸರಾಗವಾಗಿ ಕೈಗೆ ಸಿಗುತ್ತಿದ್ದ ಅಮ್ಮನ ಲಂಗದಲ್ಲಿದ್ದ ಲಾಡಿಗಳೇ ಯಾವಾಗಲೂ ಡಿಮಾಂಡು!

ಈ ಲಾಡಿಗಳನ್ನು ನಮಗೆ ಒದಗಿಸಿದ ಕಲ್ಪವೃಕ್ಷ ನಮ್ಮ ಟಿನ್‌ಟಿನ್ ಗಾಡಿ.

ಪೆನ್ಸಿಲ್ಲುಗಳು, ಗಮಗಮ ಪರಿಮಳವಿದ್ದ ರಬ್ಬರುಗಳು, ಪ್ಲಾಸ್ಟಿಕ್ ವ್ಹಿನೆಲ್‌ಗಳು, ಜ್ಯಾಮಿಟ್ರಿ ಡಬ್ಬಿಗಳು, ಸೀಮೆಸುಣ್ಣಗಳು, ಬಳಪಗಳು, ಪುಟ್ಟ ಪುಟ್ಟ ಪ್ಲಾಸ್ಟಿಕ್ ಆಟಿಕೆಗಳು, ಬುಗುರಿಗಳು, ಕೆಲವೊಮ್ಮೆ ನೋಟ್ ಬುಕ್ಕುಗಳು, ವಿವಿಧ ಗಾತ್ರದ ಚೆಂಡುಗಳು, ಇನ್ನೂ ಅನೇಕ ಸ್ವಾರಸ್ಯಕರವಾದ ಸಾಮಾನುಗಳನ್ನೊಳಗೊಂಡ ಟಿನ್‌ಟಿನ್ ಗಾಡಿ ನಮ್ಮನ್ನು ಆಕರ್ಷಿಸಿದ್ದರಲ್ಲಿ ಏನಾಶ್ಚರ್ಯ?

ಮನೆಗೆ ಬೇಕಾದ ಪ್ಲಾಸ್ಟಿಕ್ ಮಗ್ಗುಗಳು, ಬಚ್ಚಲು ಉಜ್ಜುವ ಬ್ರಷ್, ಬಟ್ಟೆಗೆ ಹಾಕುವ ನೀಲಿ, ಬಟ್ಟೆಗಳಿಗೆ ಹಾಕುವ ಕ್ಲಿಪ್ಪುಗಳು, ನೈಲಾನ್ ನೆಟ್ ಹಾಕಿದ್ದ ಒಂದರಿ ಮುಂತಾದ ಸಾಮಾನುಗಳಲ್ಲಿ ನಿಂಗಿಗೆ ಆಸಕ್ತಿ.

ರಬ್ಬರ್ ಬಳೆಗಳು, ಬಾಚಣಿಗೆಗಳು, ಬಾಬ್‌ಪಿನ್‌ಗಳು, ಕ್ಲಿಪ್ಪುಗಳು, ರಿಬ್ಬನ್ನುಗಳು, ತಲೆಯ ತುರುಬಿಗೆ ಹಾಕಿಕೊಳ್ಳುವ ನೆಟ್ಟು, ಹಣೆಗೆ ಕುಂಕುಮ ಹಚ್ಚಿಕೊಳ್ಳಲು ಬೇಕಾಗುವ ಮೇಣ, ಬಣ್ಣದ ಸಾದು, ಕಾಡಿಗೆ, ಉಗುರುಗಳಿಗೆ ಹಚ್ಚಿಕೊಳ್ಳುವ ಕ್ಯೂಟೆಕ್ಸ್, ಪೌಡರ್ ಡಬ್ಬಿಗಳು - ಇಂತಹ ಸಾಮಾನುಗಳ ಮೇಲೆ ರಾಜಮ್ಮನಿಗೆ ಕಣ್ಣು.

"ತಗಡಿನ ಬಿಂದಿಗೆ ಸೋರ್ತಾ ಐತೆ ಅವ್ವ. ನನ್ಗೆ ಒಂದು ಪ್ಲಾಸ್ಟಿಕ್ ಬಿಂದಿಗೆ ಕೊಡ್ಸವ್ವ" ಎಂದು ಮುದ್ದ ಪೀಡಿಸುತ್ತಿದ್ದ.

ಅಮ್ಮ ಮನೆಯ ಪಕ್ಕ ಇದ್ದ ಮಹಿಳೆಯರ ಕೂಟವೇ ಅಧಿಕವಿದ್ದ 'ಮಕ್ಕಳ ಕೂಟ'ಕ್ಕೆ ಹೋಗಿ ಹೊಲಿಗೆ ಕಲಿಯುತ್ತಿದ್ದಳು. ಬೊಂಬೆಯ ಹಾಗೆ ಕಂಡ ನನ್ನ ಪುಟ್ಟ ಮುದ್ದು ತಂಗಿಗೂ ನನಗೂ ತರಾವರಿ ಲಂಗಗಳನ್ನು ಫ್ರಾಕುಗಳನ್ನೂ ಹೊಲಿದು ಉಡಿಸುತ್ತಿದ್ದಳು. ಅವಳಿಗೆ ಬೇಕಿದ್ದ ಸೂಜಿಗಳು, ಬಣ್ಣ ಬಣ್ಣದ ದಾರಗಳು, ಅಲಂಕಾರದ ಗುಂಡಿಗಳು, ಕತ್ತರಿ ಮತ್ತು ಲೇಸ್‌ಗಳನ್ನೂ ಒದಗಿಸಿತು ನಮ್ಮ ಮೊಬೈಲ್ ಮಾಲ್.

ಇಷ್ಟು ಗಾಳಿ ಬೀಸಿದರೆ ಸಾಕು. ಒಂದೇ ಒಂದು ಮಳೆಯ ಹನಿ ಬಿದ್ದರೂ ಸಾಕು. ನಮ್ಮ

ಮನೆಯ ವಿದ್ಯುತ್ ಸಂಪರ್ಕ ಕಡಿಮೆ ಹೋಗುತ್ತಿತ್ತು. ಅಂತಹ ಸಮಯಗಳಲ್ಲಿ ಮನೆಯ ಹಾಲಿನಲ್ಲಿದ್ದ ದೀಪಸ್ತಂಭದಲ್ಲಿ ಮೇಣದ ಬತ್ತಿ ಹಚ್ಚಿಡುವುದು ತಾತನ ಕೆಲಸವಾಗಿತ್ತು. ಜೋಪಾನವಾಗಿ ಗಾಜಿನ ಡೋಮನ್ನು ತೆಗೆದಿಟ್ಟು ಬತ್ತಿ ಹಚ್ಚಿಟ್ಟು ಮತ್ತೆ ಡೋಮನ್ನು ಯಥಾ ಪ್ರಕಾರ ಜೋಡಿಸಿ ಈ ಎಲ್ಲ ಕೆಲಸವನ್ನೂ ತಾತ ಶಾಸ್ತ್ರೋಕ್ತವಾಗಿ ಮಾಡುತ್ತಿದ್ದರು! ಮನೆಯಲ್ಲಿದ್ದ ಅನೇಕ ಪುರಾತನ ವಸ್ತುಗಳ ಉಸ್ತುವಾರಿ ಎಲ್ಲ ತಾತನದ್ದೇ ಆಗಿತ್ತು. ಅದಕ್ಕೆ ಯಾರಾದರೂ ಕೈ ಹಾಕಿಬಿಟ್ಟರೆ ಅವರ ಪ್ರಾಣ ಪಕ್ಷಿ ಒದ್ದಾಡಿಬಿಡುತ್ತಿತ್ತು!

ಅವರಿಗಾಗಿ ಮೋಂಬತ್ತಿಗಳು, ಬೆಂಕಿ ಪೆಟ್ಟಿಗಳು, ಹಳೆಯ ವಸ್ತುಗಳಿಗೆ ಮೆರುಗು ಕೊಡುವ ಪಾಲಿಷ್, ಅವರ ಆಫೀಸ್ ಟೇಬಲ್ಲಿಗೆ ಬೇಕಾದ ಐರಿಸ್ ಇಂಕ್ 7'O' ಕ್ಲಾಕ್ ಬ್ಲೇಡುಗಳು, ಪೆಟ್ಟಿಗಳಿಗೆ ಹಾಕುವ ಕರ್ಪೂರದುಂಡೆಗಳು, ಎಲ್ಲವನ್ನೂ ಟಿನ್‌ಟಿನ್ ಗಾಡಿಯಿಂದ ಖರೀದಿಸಿ ಕೊಡುತ್ತಿದ್ದಳು ಅಮ್ಮ.

ಮಗಚಿಟ್ಟು ಇಸ್ತ್ರಿ ಮಾಡಿದಾಗ ಬಟ್ಟೆಯ ಮೇಲೆ ತನ್ನಲ್ಲಿರುವ ವಿವಿಧ ಚಿತ್ರಗಳನ್ನು ಬಿಡಿಸಿ ಬಿಡುವ ಕಾಗದಗಳಿದ್ದ ಬಬ್ಬಲ್‌ಗಮ್ ನಮ್ಮನ್ನು ಬಹಳ ಆಕರ್ಷಿಸಿತ್ತು. ಅಮ್ಮನನ್ನು ಕಾಡಿ ಬೇಡಿ ಅವನ್ನು ಕೊಂಡುಕೊಂಡು ಸ್ಕೂಲ್ ಯೂನಿಫಾರಮ್‌ಗಳಿಗೆ ಹಚ್ಚಿ ಖುಷಿಪಟ್ಟು ಅಮ್ಮನ ಕೈಯಲ್ಲಿ ಒದೆ ತಿಂದು ಅತ್ತು ಎಲ್ಲಾ ಆಗಿದ್ದೂ ಈ ಟಿನ್‌ಟಿನ್ ಗಾಡಿಯಿಂದಲೇ. ನಂತರ ಬಬ್ಬಲ್‌ಗಮ್ ಕೊಳ್ಳುವುದು ನಿಲ್ಲಿಸಿ ಕಿತ್ತಳೆ ಬಣ್ಣದ, ಕಿತ್ತಳೆಯ ತೊಳೆಯಂತೆಯೇ ಕಂಡ ಪೆಪ್ಪರ್‌ಮಿಂಟುಗಳನ್ನೂ, ಲೆಮೆನ್‌ಡ್ರಾಪ್ಸ್ ಎಂಬ ಹುಳಿ ಪೆಪ್ಪರ್‌ಮಿಂಟನ್ನೂ ಶುಂಟಿ ಪೆಪ್ಪರ್‌ಮಿಂಟನ್ನೂ ಮಾತ್ರ ಕೊಳ್ಳಲಾರಂಭಿಸಿದೆವು. ಗಾಡಿಯ ಒಂದು ಬದಿಯಲ್ಲಿ ಸಾಲಾಗಿ ಹೊಳೆದ ಶೀಶೆಗಳಲ್ಲಿ ಈ ಪೆಪ್ಪರ್‌ಮೆಂಟುಗಳನ್ನು ಕಂಡ ಕೂಡಲೆ ನಾಲಿಗೆಯಲ್ಲಿ ನೀರೂರುತ್ತಿತ್ತು.

ಗಾಡಿಯ ಸುತ್ತ ಗಿಜಿಗಿಜಿ ನಿಂತು ನಾವೆಲ್ಲರೂ ಬೇಕಾದ ವಸ್ತುಗಳನ್ನು ಆರಿಸಿಕೊಳ್ಳುವವರೆಗೆ ಗಾಡಿಯವ ಹಾಯಾಗಿ ಕ್ರೋಟನ್ ಗಿಡದ ಬಳಿ ಕುಕ್ಕುರು ಕಾಲು ಹಾಕಿ ಕುಳಿತಿರುತ್ತಿದ್ದ. ಹೇಗೂ ವ್ಯಾಪಾರ ನೂರು ರೂಪಾಯಿಗೆ ಕಡಿಮೆ ಆಗುವುದೇ ಇಲ್ಲವೆಂಬ ಸಂತೃಪ್ತಿ ಅವನಿಗೆ.

ಒಮ್ಮೆ ಟಿನ್‌ಟಿನ್ ಗಾಡಿ ಬಂದಿದ್ದಾಗ ಮುತ್ತಜ್ಜಿಯನ್ನು ಬಚ್ಚಲ ಮನೆಯಲ್ಲಿ ಕೂರಿಸಿಬಿಟ್ಟು ಬಂದ ರಾಜಮ್ಮ ವ್ಯಾಪಾರದಲ್ಲಿ ತಲ್ಲೀನಳಾಗಿ ಅಜ್ಜಿಯನ್ನು ಮರೆತೇ ಬಿಟ್ಟಿದ್ದರು. ನಾವೆಲ್ಲರೂ ಕೂಡ ಗಾಡಿಯ ಸುತ್ತ ನಿಂತುಬಿಟ್ಟಿದ್ದರಿಂದ, ಒಳಗೆ ಅಜ್ಜಿ ಕೂಗಿಕೊಂಡಿದ್ದು ಯಾರಿಗೂ ಕೇಳಿಸಲೇ ಇಲ್ಲ. ತಂದೆಯವರ ಕೋಪದ ಉಗ್ರ ಅಂದು ಎಲ್ಲೆ ಮೀರಿತು.

"ಎಲ್ಲಿಗೆ ಹೋಗಿ ಸತ್ತೆಯೇ? ನಾನೂ ವರಾಂಡಕ್ಕೆ ಬಂದು ಟಿನ್‌ಟಿನ್ ಗಾಡಿ ನೋಡ್ತಿದ್ದೆ. ಹೊರಟು ಹೋದನೆ ಪುಣ್ಯಾತ್ಮ?" ಮುತ್ತಜ್ಜಿಯ ಕೂಗಾಟ ಬೇರೆ ಜೋರಾಗಿಯೇ ಇತ್ತು.

ಈ ರಾದ್ಧಾಂತದಲ್ಲಿ ನಾವೆಲ್ಲ ತೆಪ್ಪಗೆ ಬೆಕ್ಕಿನ ಮರಿಗಳ ಹಾಗೆ ಮೂಲೆ ಸೇರಿಕೊಂಡೆವು.

ಅಂದಿನಿಂದ ಟಿನ್‌ಟಿನ್ ಗಾಡಿ ನಮ್ಮ ಬೀದಿಯಲ್ಲೇ ಹಾದು ಹೋದರೂ ನಮ್ಮ

ಮನೆಯೊಳಕ್ಕೆ ಬರುತ್ತಲೇ ಇರಲಿಲ್ಲ. ಗಂಟೆಯ ಶಬ್ದ ಕೇಳಿದೊಡನೆ ನಾವು ನಾಲ್ವರೂ ಗೇಟಿನ ಬಳಿ ಓಡಿಹೋಗಿ, ಅದರ ಕಂಬಿಗಳನ್ನು ಹಿಡಿದುಕೊಂಡು, ಕಾರಾಗೃಹ ವಾಸಿಗಳ ಹಾಗೆ ಮರುಗುತ್ತ ನಿಂತು ನೋಡುತ್ತಿದ್ದೆವು.

ತಂದೆಯವರು ಮೈಸೂರಿನ ಅನೇಕ ಕ್ಲಬ್ಬುಗಳು ಮತ್ತು ಸಂಸ್ಥೆಗಳಲ್ಲಿಯ ಕಾರ್ಯಕ್ರಮಗಳಲ್ಲಿ ಆಸಕ್ತಿಯಿಂದ ಪಾಲ್ಗೊಳ್ಳುತ್ತಿದ್ದರು. ಒಮ್ಮೆ ಅದ್ಯಾವುದೋ ಕೂಟಕ್ಕೆ ಹೋಗಬೇಕಾಗಿ ಟಾಕು ಠೀಕಾಗಿ ಸೂಟ್ ಧರಿಸಿ, ಪಾಲಿಷ್ ಮಾಡಿದ (ಟಿನ್‌ಟಿನ್ ಗಾಡಿಯಿಂದ ಕೊಂಡುಕೊಂಡಿದ್ದ ಪಾಲೀಷ್) ಬೂಟನ್ನು ಹಾಕಿಕೊಂಡು, ಹೊರಡುವ ಅವಸರದಲ್ಲಿ ಲೇಸನ್ನು ಬಿಗಿದಾಗ, ಅದು ಪಟ್ಟೆಂದು ಕಿತ್ತು ಹೋಯಿತು.

''ಇಲ್ಲೇ ಇತ್ತಲ್ಲ ಒಂದು ಹೊಸ ಲೇಸ್. ಎಲ್ಲಿಗೆ ಹೋಯಿತು?'' ತಂದೆಯವರು ಹುಡುಕುತ್ತ ಚಡಪಡಿಸಿದರು. ಇದ್ದಕ್ಕಿದ್ದಂತೆ ನನ್ನ ತಮ್ಮ ಬುಗುರಿಯಾಡುತ್ತಿದ್ದ ದೃಶ್ಯ ಮನಃಪಟಲದಲ್ಲಿ ಬಂದು ಹೋಯಿತು. ಆ ಲೇಸ್ ಸಿಕ್ಕುವುದು ಇನ್ನೆಲ್ಲಿ? ಅದೇ ಸಮಯ ರಸ್ತೆಯಲ್ಲಿ 'ಟಿನ್‌ಟಿನ್' ಶಬ್ದ ಕೇಳಿ ನಾನು ಬಿರುಗಾಳಿಯಾದೆ. ಮೂರು ಕ್ಷಣಗಳಲ್ಲಿ ಅಪ್ಪನಿಗೆ ಬೇಕಾದ ಲೇಸು ಅವರಿಗೆ ಸಿಕ್ಕಿತು.

''ಇನ್ಮೇಲೆ ಗೇಟಿನಾಚೆ ಎಲ್ಲ ಹೋಗಿ ವ್ಯಾಪಾರ ಮಾಡೋದು ಬೇಡ, ಆ ಗಾಡಿಯನ್ನು ಒಳಗೆ ಕರೆಯಿರಿ'' ಎಂದವರೆ ನನ್ನ ತಲೆ ತಟ್ಟಿ ಹೊರಟೇಹೋದರು ತಂದೆಯವರು.

ಅಂದಿನಿಂದ ಯಾವಾಗ ಟಿನ್‌ಟಿನ್ ಗಾಡಿ ಬಂದರೂ ''ಮುತ್ತಜ್ಜಿಯನ್ನು ಬಾತ್‌ರೂಮಲ್ಲಿ ಬಿಟ್ಟಿಲ್ಲ ತಾನೆ?'' ಎಂದು ಪ್ರಶ್ನಿಸಿ ನನ್ನ ಕಡೆಯ ತಮ್ಮನಿಂದ ಹಿಡಿದು ಅಮ್ಮನವರೆಗೆ, ಎಲ್ಲರೂ ರಾಜಮ್ಮನನ್ನು ಗೋಳು ಹುಯ್ದುಕೊಳ್ಳುತ್ತಿದ್ದೆವು.

ಹಳೆಯ ನೆನಪುಗಳಲ್ಲಿ ಜೋರಾಗಿ ನಕ್ಕ ನಾನೂ ಅಮ್ಮನೂ ಸುಧಾರಿಸಿಕೊಳ್ಳಲು ಸ್ವಲ್ಪ ಅವಕಾಶ ಬೇಕಾಯಿತು. ಮಕ್ಕಳು ಇನ್ನೂ ನಗುತ್ತಲೇ ಇದ್ದರು.

''ಅಯ್ಯೋ! ಬಂದವಳನ್ನು ಹೇಗಿದ್ದೀಂತ ಕೇಳ್ಲಿಲ್ಲ, ಬರಿ ಟಿನ್‌ಟಿನ್ ಗಾಡಿ, ಅಲ್ಲ - ಮೈಸೂರ ಮೊಬೈಲ್ ಮಾಲ್ ಮಾತೇ ಆಗಿ ಹೋಯ್ತಲ್ಲ!'' ಎನ್ನುತ್ತ ಅಮ್ಮ ನಮಗಾಗಿ ತಿಂಡಿ ತರಲು ಹೊರಟಳು.

❖

---

ಇರಲಿಲ್ಲವೆ?

ಅವನು : ನಮ್ಮ ವಿಶ್ವವಿದ್ಯಾಲಯಕ್ಕೆ ಕೊನೆಗೂ ವಿ.ಸಿ. ನೇಮಕವಾದರು.

ಇವನು : ಅಂದರೆ ಇಷ್ಟು ದಿವಸ ವಿ.ಸಿ. ಇರಲಿಲ್ಲವೆ?

# STATEMENT OF OWNERSHIP OF APARANJI (KANNADA MONTHLY) (SEE RULES AND FORM IV)

| | | | |
|---|---|---|---|
| 1. | Place of Publication | : | Bangalore |
| 2. | Periodicity of Publication | : | Monthly |
| 3. | Printer's Name | : | V.R. Nath |
| | Nationality | : | Indian |
| | Address | : | Ravi Graphics<br>49, 4th Cross. SSI Area<br>Rajaji Nagar<br>Bangalore -560010 |
| 4. | Publisher's Name | : | Koravanji Aparanji Trust |
| | Address | : | No 36, 6th Main Road<br>Malleswaram<br>Bangalore- 560003 |
| 5. | Editor's Name | : | M.ShivaKumar |
| | Nationality | : | Indian |
| | Address | : | 36, 6th Main Road<br>Malleswaram<br>Bangalore 560003 |
| 6. | Name and address of Individuals who own the Paper | | Koravanji Aparanji Trust<br>36, 6th Main Road<br>Malleswaram<br>Bangalore 560003 |

I M.Shivakumar hereby declare that the particulars given above are true to the best of my knowledge and belief.

1-3-2009
Bangalore

**M.ShivaKumar**
(Signature of the Publisher)

Mailing Date
5th of every month
Mailed at Rajajinagar PO

CPMG/KA/BGW-544/2006-2008
**RNI-KAR-KAN / 2005 / 15457**



**Printed by:** V.R. NATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003.
**Printed at:** Ravi Graphics, 53/8, 2nd Main Road, Industrial Town, Rajajinagar, Bangalore - 560 010. Ph : 2330 5999.
Editor : M. SHIVAKUMAR